
ಡಿವ ಜನರ ಪ್ರಾಣ ಮಿತ್ರ

ಸಂಪುಟ 26 ಸಂಚಿಕೆ 12 ಮಾರ್ಚ್ 21, 2004 ಬೆಲೆ ರೂ. 3.00



ರಥಯಾತ್ರೆಯ ಮುಂದಿನ ಗುರಿ ?





ನಿಶ್ಯಕ್ತ ಭಾರತ ಬಿಜೆಪಿ ನಿರತ

ರಂಗಿನ ರಾಜಕೀಯದಲ್ಲಿ ರೈತರ ಆತ್ಮಹತ್ಯೆ

- ಕರ್ನಾಟಕದಲ್ಲಿ ಅಡ್ವಾಣಿ : ಜನಸ್ಪಂದನ ಇಲ್ಲದ ಯಾತ್ರೆ
- ಆರ್.ಎಸ್.ಎಸ್.-ಬಿಜೆಪಿ ಅದೆಷ್ಟು ಪ್ರಾಮಾಣಿಕರು ?
- ಸಂಘ ಪರಿವಾರದ ವಿಕೃತಿಗೆ ಉತ್ತರ - ಸೌಹಾರ್ದ 'ಉರುಸ್'
- ಇರಾಕ್: ಅಮೆರಿಕ ದುರಾಕ್ರಮಣಕ್ಕೆ ಒಂದು ವರ್ಷ

ಪೋಸ್ಟರ್ 'ಆಹಾರ ಭದ್ರತೆ'

ಆರ್.ಎಸ್.ಎಸ್.ನವರು ಪ್ರಾಮಾಣಿಕರೇ?

ಕರ್ನಾಟಕದಲ್ಲಿ ಆರ್‌ಎಸ್‌ಎಸ್-ಸಂಘಪರಿವಾರವೆಂದರೆ ಎ.ಕೆ.ಸುಬ್ಬಯ್ಯಎನ್ನುವ ಕಾಲವಿತ್ತು. ರಾಜ್ಯದಲ್ಲಿ ಸಂಘ ಪರಿವಾರದ ಬೀಜಗಳಿಗೆ ನೆಲ ಹದ ಮಾಡಿ ಬಿತ್ತಿದ ಸುಬ್ಬಯ್ಯಯನವರು ಮೊಳಕೆಯೊಡೆದ ಬೀಜಗಳು ವಿಷ ವೃಕ್ಷವಾಗಿ ಬೆಳೆಯುತ್ತಿರುವುದನ್ನು ಕಣ್ಣಾರೆ ಕಂಡು, ಉಂಡು ಬೆಚ್ಚಿದವರು. ಈ ವಿಷ ವೃಕ್ಷಗಳ ಮೂಲವನ್ನೇ ಹುಡುಕಿ, ಅವುಗಳನ್ನು ಕಿತ್ತೆಸೆಯಲು ನಿಂತು ತಮ್ಮ ಅನುಭವಗಳನ್ನು ಇಲ್ಲಿ ಹೇಳಿದ್ದಾರೆ.



ಆರ್. ಎಸ್. ಎಸ್. ಮಂದಿಯೆಂದರೆ ಬಹಳ ನಂಬಿಕಸ್ತರು. ಪ್ರಾಮಾಣಿಕರು ಎಂದೆಲ್ಲಾ ಬಣ್ಣಿಸಲಾಗುತ್ತಿದೆ. ಆದರೆ ಅವರ ನಿಜರೂಪ ಬೇರೆಯೇ ಇದೆ. ಹಿಂದೂ ಧರ್ಮದ ರಕ್ಷಕರ ಸೋಗಿನಲ್ಲಿ ಸಮಾಜದಿಂದ ಲೂಟಿ ಮಾಡುವ ಹಣ ಏನಾಗುತ್ತದೆಂದು ಯಾರಿಗೂ ತಿಳಿಯುವುದಿಲ್ಲ. ಮೀನಾಕ್ಷಿಪುರಂನಲ್ಲಿ ಕೆಲವೊಂದು ಹರಿಜನರು ಇಸ್ಲಾಂ ಧರ್ಮ ಸ್ವೀಕಾರ ಮಾಡಿದ ಘಟನೆಯ ಹಿನ್ನಲೆಯಲ್ಲಿ ಹಿಂದೂ ಧರ್ಮ ಮುಳುಗೇ ಹೋಯಿತೆಂದು ಹುಯಿಲೆಬ್ಬಿಸಿ, ಧರ್ಮರಕ್ಷಣೆಯ ಹೆಸರಿನಲ್ಲಿ ಸಂಗ್ರಹಿಸಿದ ಹಣವೆಷ್ಟು? ಈ ಎಲ್ಲಾ ಪ್ರಶ್ನೆಗಳಿಗೆ ಸತ್ಯವಾಗಿರುವ ಉತ್ತರ ದೊರೆತರೆ ಆರ್. ಎಸ್. ಎಸ್. ಬಗ್ಗೆ ಕೆಲವು ಮುಗ್ಧರಲ್ಲಿರುವ ಸದ್ಭಾವನೆಯನ್ನು ದುರುಪಯೋಗಪಡಿಸಿ, ಹಣ ಸಂಗ್ರಹಿಸುವ ಸಂದರ್ಭಕ್ಕಾಗಿ ಆರ್. ಎಸ್. ಎಸ್. ನವರು ಸದಾ ಕಾಯುತ್ತಿರುತ್ತಾರೆ. ನೆರೆಯ ಹಾವಳಿ, ಕ್ಷಾಮ, ಅಣೆಕಟ್ಟು ಒಡೆಯುವುದು ಇಂಥ ಸಂದರ್ಭಗಳು ದೊರೆತರೆ ಆರ್. ಎಸ್. ಎಸ್. ಗೆ ಸುಗ್ಗಿ ಎಷ್ಟು ಸಂಗ್ರಹಿಸುತ್ತಾರೆ. ಆಹಣ ಎಲ್ಲಿಗೆ ಹೋಗುತ್ತದೆ- ಇವೆಲ್ಲವೂ ರಹಸ್ಯವಾಗಿಯೇ ಉಳಿದಿದೆ. ಹೀಗೆ ಸಂಗ್ರಹಿಸಿದ ಹಣವನ್ನು ತೊಡಗಿಸುವುದಕ್ಕೆ ಅನೇಕ ವ್ಯವಸ್ಥೆಗಳಿವೆ. ಹಿಡಿಯಷ್ಟು ಆರ್. ಎಸ್. ಎಸ್. ನ ವರಿಷ್ಠರ ಹೆಸರಿನಲ್ಲಿ ಅನೇಕ ಟ್ರಸ್ಟುಗಳನ್ನು ಮಾಡಿಕೊಂಡಿದ್ದಾರೆ, ಗಗನಚುಂಬಿ ಕಟ್ಟಡಗಳೂ ನಿರ್ಮಾಣವಾಗಿವೆ. ಈ ರೀತಿ ಸಮಾಜವನ್ನು ದೋಚಿ, ದೊರೆತ ಹಣದಿಂದ ಕೆಲವು ವ್ಯಕ್ತಿಗಳ ಹೆಸರಿನಲ್ಲಿ ಮಾಡಿರುವ ಆಸ್ತಿ ಕರ್ನಾಟಕದಲ್ಲಿಯೇ ಸುಮಾರು 35 ಕೋಟಿ ಬೆಲೆಬಾಳಬಹುದು. ಶಿವಮೊಗ್ಗ ಜಿಲ್ಲೆಯಲ್ಲಿ ಖಾಸಗಿಯಾಗಿ ಒಂದು ಸಾರಿಗೆ ಸಂಸ್ಥೆಯನ್ನೇ ಆರ್. ಎಸ್. ಎಸ್. ನಡೆಸುತ್ತಿದೆ. ಈ ಹಿಂದೆ ಮಂಗಳೂರಿನ ಉಜಿರೆಯಲ್ಲಿ ನಡೆದ ವಿಶ್ವ ಹಿಂದೂ ಸಮ್ಮೇಳನದ ಸಂದರ್ಭದಲ್ಲಿ ಹರಿದ್ವಾರದಿಂದ ಮಂಗಳೂರಿನವರೆಗೆ 'ಏಕತಾ ಯಜ್ಞ' ವೆಂಬ ಮೇಳವೊಂದು ನಡೆಯಿತಷ್ಟೆ. ಆ ಸಂದರ್ಭದಲ್ಲಿ ಜೊತೆಯಲ್ಲಿ ತಂದ ಗಂಗಾ ಜಲವೆಂದು ಹೇಳಿಕೊಂಡು, ಪಾತ್ರೆ ತುಂಬಾ ನೀರನ್ನು ಬಾಟಲಿಯೊಂದಕ್ಕೆ 5 ರೂಪಾಯಿ 10 ರೂಪಾಯಿಎಂತೆ ಅಲ್ಲಲ್ಲಿ ಬೆಲೆಗೆ ಮಾರಲಾಯಿತು. ಹೀಗೆ ಎಲ್ಲಾ ಜಿಲ್ಲೆಗಳಲ್ಲಿ ಮಾರಾಟ ಮಾಡುವಷ್ಟು ಗಂಗಾ ಜಲವನ್ನು ತಂದಿದ್ದರೇ? ಎಲ್ಲ. ನಿಜಸ್ಥಿತಿಯೆಂದರೆ ಸಿಕ್ಕಿದ ಹಳ್ಳಕೊಳ್ಳದ ನೀರನ್ನು ತುಂಬಿ ಗಂಗಾಜಲವೆಂದು ಜನತೆಗೆ ಮಾರಿ ಹಣ ಸಂಗ್ರಹಿಸಿರುವುದು ಇವರ ಕೃತ್ಯವಾಗಿತ್ತು. ಹೇಗೆ ಇವರು ದಿನ ಬೆಳಗಾದರೆ ಸಮಾಜದಿಂದ ಹಣ ಸುಲಿಗೆ ಮಾಡುವ ಯಾವುದಾದರೊಂದು ಕಾರ್ಯಕ್ರಮಕ್ಕಾಗಿ ಕಾಯುತ್ತಿರುತ್ತಾರೆ.

ಆರ್.ಎಸ್.ಎಸ್. ಯಾವ ರೀತಿ ಸಮಾಜವನ್ನು ವಂಚಿಸುತ್ತಿದೆಯೆನ್ನುವುದನ್ನು ಸಮರ್ಥಿಸಲು ನನ್ನದೇ ಸ್ವಂತ ಅನುಭವವನ್ನು ಇಲ್ಲಿ ಉಲ್ಲೇಖಿಸುತ್ತೇನೆ. ಚಿಕ್ಕಮಗಳೂರಿನಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಲೋಕಸಭೆಗೆ ಸ್ಪರ್ಧಿಸಿದ್ದ ಉಪಚುನಾವಣೆಯ ಸಂದರ್ಭ ಅದು. ಈ ಲೋಕಸಭೆಯೊಳಗಿನ 8 ವಿಧಾನಸಭಾ ಕ್ಷೇತ್ರಗಳಲ್ಲಿ ಬೇರೆ ಬೇರೆ ಪ್ರಮುಖರುಗಳಿಗೆ ಪ್ರಚಾರ ಜವಾಬ್ದಾರಿ ವಹಿಸಲಾಗಿತ್ತು. ನಾನು ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಪ್ರಚಾರ ವ್ಯವಸ್ಥೆಯ ಜವಾಬ್ದಾರಿ ವಹಿಸಿಕೊಂಡಿದ್ದೆ. ಹಾಗೆಯೇ ಬೇರೆ ಬೇರೆ ಸಂಸ್ಥೆಗಳ ಪ್ರಮುಖರಿಗೆ ಅವರ ಶಕ್ತಿಯನ್ನು ಕ್ರೋಢೀಕರಿಸಲು ಜವಾಬ್ದಾರಿ ವಹಿಸಲಾಗಿತ್ತು. ಅಂದರೆ ಕಾರ್ಮಿಕ ಕ್ಷೇತ್ರ ಕಮ್ಯುನಿಸ್ಟ್ ಪಾರ್ಟಿಯವರಿಗೆ. ಅವರ ಶಕ್ತಿಯನ್ನು ಜನತಾ ಪಕ್ಷದ ಅಭ್ಯರ್ಥಿಯ ಪರವಾಗಿ ವಿನಿಯೋಗಿಸುವ ಜವಾಬ್ದಾರಿ. ಹೀಗೆ ವ್ಯವಸ್ಥೆ ಮಾಡಲಾಗಿತ್ತು. ಆರ್. ಎಸ್. ಎಸ್. ಶಕ್ತಿಯನ್ನು ಚುನಾವಣೆಯಲ್ಲಿ ತೊಡಗಿಸಲು ಕೆಲವರಿಗೆ ಜವಾಬ್ದಾರಿ ಕೊಡಲಾಗಿತತು. ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಆರ್. ಎಸ್. ಎಸ್. ವಲಯದ ಜವಾಬ್ದಾರಿಯನ್ನು ಅಲ್ಲಿ ಅಂದು ಪ್ರಚಾರಕರಾಗಿದ್ದ ಶ್ರೀ ರಘುಪತಿ ಶಾಸ್ತ್ರೀ ಎನ್ನುವವರು ವಹಿಸಿಕೊಂಡಿದ್ದರು. ಇವರ ಜೊತೆಗೆ ಶಿವಮೊಗ್ಗ ಜಿಲ್ಲೆಯ ಶ್ರೀ ಡಿ.ಎಚ್. ಶಂಕರಮೂರ್ತಿ (ಇಂದಿನ ಬಿ.ಜೆ.ಪಿ ಮುಖಂಡ) ಸಹ ಇದ್ದರು. ಇಡೀ ಕ್ಷೇತ್ರದ ಜವಾಬ್ದಾರಿ ಶ್ರೀ ಪಿ.ಜಿ.ಆರ್.ಸಿಂಧ್ಯಾ (ಇಂದಿನ ಮಂತ್ರಿ) ಇವರು ವಹಿಸಿಕೊಂಡಿದ್ದರು. ಚುನಾವಣಾ ವೆಚ್ಚಕ್ಕೆ ಹಣ ಒದಗಿಸುವ ಜವಾಬ್ದಾರಿಯನ್ನು ಶ್ರೀ ಜಾರ್ಜ್ ಫರ್ನಾಂಡಿಸ್ ಮತ್ತು ಶ್ರೀ ರಾಮಕೃಷ್ಣ ಹೆಗಡೆ(ಇಂದಿನ ಮುಖ್ಯಮಂತ್ರಿ) ಯವರು ನೆರವೇರಿಸುತ್ತಿದ್ದರು. ಪ್ರಾರಂಭದಲ್ಲಿ ತುಂಬಾ ಹಣದ ಮುಗ್ಗಟ್ಟು ಇದ್ದಂತೆ ಕಂಡುಬಂತು. ವಾಹನಗಳಿಗೆ ಇಂಧನ ಹಾಕಲು ಸಹ ನನ್ನ ಕ್ಷೇತ್ರಕ್ಕೆ ಹಣ ಸಿಗಲಿಲ್ಲ. ಆದರೂ ನಾನು ಕಾರ್ಯಕರ್ತರ ಗುಂಪೊಂದನ್ನು ತಯಾರು ಮಾಡಿ, ಅವರನ್ನು ಜೊತೆ ಸೇರಿಸಿಕೊಂಡು ಸಾರ್ವಜನಿಕರಿಂದಲೇ ಹಣ ಸಂಗ್ರಹಿಸುವುದರ ಮೂಲಕ ಚುನಾವಣಾ ಪ್ರಚಾರವನ್ನು ಮುಂದುವರಿಸಬೇಕಾಯಿತು. ಚುನಾವಣೆಗೆ ಇನ್ನು ಕೆಲವೇ ದಿವಸಗಳಿವೆಯೆನ್ನುವಾಗ ಶ್ರೀ ರಾಮಕೃಷ್ಣ ಹೆಗಡೆಯವರು ಬಂದು ಎಲ್ಲಾ ವಿಧಾನಸಭಾ ಕ್ಷೇತ್ರಗಳ ಹಣದ ಅವಶ್ಯಕತೆಯನ್ನು ಪೂರೈಸಿದರು. ಮತದಾನಕ್ಕೆ ಇನ್ನು ನಾಲ್ಕೇ ದಿವಸವಿದೆಯೆನ್ನುವಾಗ ಆರ್. ಎಸ್. ಎಸ್. ವಲಯದ ಜವಾಬ್ಕಾರಿ ವಹಿಸಿದ್ದ ಪ್ರಚಾರಕ ಶ್ರೀ ರಘುಪತಿ ಶಾಸ್ತೀ ಹಾಗೂ ಶ್ರೀ ಶಂಕರಮೂರ್ತಿಯವರು ನನ್ನಲ್ಲಿಗೆ ಬಂದು ಕೋಪದಿಂದ ಚುನಾವಣಾ ಪ್ರಚಾರ ಕಾರ್ಯಾಲಯದ ಜವಾಬ್ದಾರಿ ವಹಿಸಿದ್ದ ಶ್ರೀ ಸಿಂಧ್ಯಾರವರ ಬಗ್ಗೆ ಬಾಯಿಗೆ ಬಂದಂತೆ ನಿಂದಿಸಿ ಮಾತನಾಡತೊಡಗಿದರು. ಕಛೇರಿಗೆ ಹೋದರೆ ಆರ್. ಎಸ್. ಎಸ್. ನವರನ್ನು ನಾಯಿಗಳಂತೆ ಕಾಣಲಾಗುತ್ತಿದೆಯೆಂದೂ ಯಾವುದೇ ಹಣವನ್ನಾಗಲೀ ಪ್ರಚಾರ ಸಾಧನಗಳನ್ನಾಗಲೀ ಒದಗಿಸುತ್ತಿಲ್ಲವೆಂದೂ ಈ ಸ್ಥಿತಿಯಿಂದಾಗಿ ಆರ್. ಎಸ್. ಎಸ್. ನವರು ನಿಷ್ಕ್ರಿಯರಾಗ ಬೇಕಾಗಿದೆಯೆಂದೆಲ್ಲಾ ಹಲುಬತೊಡಗಿದರು. ಇನ್ನು ಮತದಾನಕ್ಕೆ ಕೇವಲ ಮೂರು ದಿವಸಗಳು ಮಾತ್ರ ಉಳಿದಿದ್ದವು. ಇವರು ಚುನಾವಣೆಯಲ್ಲಿ ಕೆಲಸ ಮಾಡದೆ, ಕೆಡಿಸಬಹುದೆಂಬ ಭಯ ನನಗುಂಟಾಯಿತು. ಆದ್ದರಿಂದ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಮಟ್ಟಿಗೆ ಆರ್. ಎಸ್. ಎಸ್. ಗೆ ಎಷ್ಟು ಹಣ ಬೇಕೆಂದು ಕೇಳಿದೆ ಅದಕ್ಕವರು 15 ಸಾವಿರವೆಂದು ತಿಳಿಸಿದರು. ನೀವು ಯಾವುದೇ ಕಾರಣಕ್ಕೆ ಚುನಾವಣಾ ಕಛೇರಿಗೆ ಹೋಗಿ ಶ್ರೀ ಸಿಂಧ್ಯಾರವರಿಂದಾಗಲೀ, ಶ್ರೀ ರಾಮಕೃಷ್ಣ ಹೆಗಡೆಯವರಿಂದಾಗಲೀ ಅವಮಾನಿತರಾಗುವ ಅವಶ್ಯಕತೆಯಿಲ್ಲವೆಂದೂ, ನಿಮ್ಮ ಪಾಡಿಗೆ ನೀವು ಕೆಲಸ ಮಾಡಿ ನಿಮ್ಮ ಸಂಪೂರ್ಣ ಶಕ್ತಿಯನ್ನು ಚುನಾವಣೆಯಲ್ಲಿ ತೊಡಗಿಸುವಲ್ಲಿ ತಲ್ಲೀನರಾಗಿ, ನಾನು 15 ಸಾವಿರ ರೂಪಾಯಿಗಳನ್ನು ಮಾರನೆ ದಿವಸ ಸಂಜೆ ಒದಗಿಸುತ್ತೇನೆಂದು ಅವರಿಗೆ ಹೇಳಿ, ಸಿಂಧ್ಯಾರವರ ಹತ್ತಿರವಾಗಲೀ ಹೆಗಡೆಯವರ ಹತ್ತಿವಾಗಲೀ ಹಣಕ್ಕೆ ಹೋಗುವ ಅವಶ್ಯಕತೆಯಿಲ್ಲವೆಂದು ತಿಳಿಸಿದೆ. ಹಾಗೆಯೇ ಆಗಲೆಂದು ಹೇಳಿ ನಾನು ಕೊಟ್ಟ 10 ಸಾವಿರ ರೂಪಾಯಿ ಪಡೆದು ಶ್ರೀ ರಘುಪತಿ ಶಾಸ್ತ್ರಿ ಮತ್ತು ಶಂಕರ ಮೂರ್ತಿಯವರ ಮುಂದೆ ತೆರಳಿದರು. ಮಾರನೇ ದಿವಸ ನಾನು ಶ್ರೀ ರಾಮಕೃಷ್ಣ ಹೆಗಡೆಯವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಆರ್. ಎಸ್. ಎಸ್. ನವರ ದೂರನ್ನು ತಿಳಿಸಿ, ನಾನವರಿಗೆ 10 ಸಾವಿರ ರೂಪಾಯಿ ಕೊಟ್ಟ ಬಗ್ಗೆ ಹಾಗೂ ಇನ್ನು 5 ಸಾವಿರ ರೂಪಾಯಿ ಕೊಡಬೇಕಾಗಿರುವ ಬಗ್ಗೆ ವರದಿ ಮಾಡಿದೆ. ಹೆಗಡೆಯವರು ಆಶ್ಚರ್ಯದಿಂದ ಅವರಿಗೆ ಅದುವರೆಗೆ ಒದಗಿಸಲಾದ ಹಣ ಮತ್ತು ಸಾಧನಗಳ ವಿವರ ನೀಡಿದರು.

ಮುಂದುವರಿಯುವುದು

ಶೆಟ್ಟರ್ ಬೆಂಬಲಿಸಿ ತಪ್ಪು ಮಾಡಿದೆ : ಸಂಕೇಶ್ವರ

ಜಗದೀಶ ಶೆಟ್ಟರ್ ಕಳೆದ ಒಂಬತ್ತೂವರೆ ವರ್ಷದಿಂದ ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದ ಶಾಸಕರಾಗಿ ಮೂಲಭೂತ ಸೌಕರ್ಯ ಕಲ್ಪಿಸಲು ಸಾಧ್ಯವಾಗಿಲ್ಲ. ಅವರು ಮಾನಸಿಕವಾಗಿ ಆಳುವ ಪಕ್ಷದ ಜೊತೆಗೆ ಕೈಜೋಡಿಸಿ ಜನತೆಗೆ ದ್ರೋಹ ಮಾಡಿದ ಲಜ್ಜೆಗೇಡಿ ಎಂದು ವಿಜಯಸಂಕೇಶ್ವರ ಟೀಕಿಸಿದ್ದಾರೆ. ಬಿಜೆಪಿಯಲ್ಲಿ ಚಂದಾ ಎತ್ತುವ ಹೊಲಸು ಸಂಸ್ಕೃತಿ ಇದೆ. ಆ ಪಕ್ಷಕ್ಕೆ ಎರಡು ನಾಲಿಗೆಗಳಿವೆ. ಅದು ಯಾರನ್ನು ಬೇಕಾದರೂ ಪಕ್ಷಕ್ಕೆ ಕರೆ ತರುತ್ತದೆ.

ನೈಋತ್ಯ ರೈಲ್ವೆ ವಲಯದ ಉದ್ಘಾಟನೆಗೆ ಪ್ರಧಾನಮಂತ್ರಿ, ಮುಖ್ಯಮಂತ್ರಿ, ಸಚಿವ ಅನಂತಕುಮಾರ್ ಎಲ್ಲರೂ ಬಂದಿದ್ದರು. ಕಾರ್ಯಕ್ರಮದ ವೆಚ್ಚವನ್ನು ಸಂಪೂರ್ಣ ರೈಲ್ವೆ ಇಲಾಖೆಯೇ ಭರಿಸಿತ್ತು. ಆದರೆ ಹುಬ್ಬಳ್ಳಿ - ಧಾರವಾಡದಲ್ಲಿ ಬಿಜೆಪಿಯವರು 20 ಲಕ್ಷ ರೂ.ಗಳ ಚಂದಾ ಎತ್ತಿದರು.

ಹುಬ್ಬಳ್ಳಿ - ಧಾರವಾಡದಲ್ಲಿ ಜಗದೀಶ ಶೆಟ್ಟರ್ ಪೆಟ್ರೋಲ್ ಬಂಕ್ ಪಡೆದಿದ್ದಾರೆ. ರಾಜೇಂದ್ರ ಗೋಖಲೆ ಬಿಎಸ್‌ಎನ್‌ಎಲ್ ಸಿಮ್ ಕಾರ್ಡ್ ಏಜೆನ್ಸಿ ಪಡೆದಿದ್ದಾರೆ. ಅಶೋಕ ಕಾಟವೆ ಗ್ಯಾಸ್ ಏಜೆನ್ಸಿ ಪಡೆದಿದ್ದಾರೆ. ಇಂಥವರ ನಡುವೆ ಇರಲು ನನಗೆ ಮನಸ್ಸಾಗಲಿಲ್ಲ.



ಜವಾಬ್ದಾರಿಯಲ್ಲಿ ಅಲ್ಲ, ವ್ಯವಹಾರದಲ್ಲಿ 'ಹೈಸ್ಪಿರಿಟ್'

ನಾಲ್ಕೂವರೇ ವರ್ಷದ ಅವಧಿಯನ್ನು ಶೆಟ್ಟರ್ ಸ್ವಂತ ಅಭಿವೃದ್ಧಿಗೆ ವಿನೀತರಾಗಿ ವಿನಿಯೋಗಿಸಿಬಿಟ್ಟರು. ಸಂಬಂಧಿಕರು, ಸ್ನೇಹಿತರು ಹಾಗೂ ಬೆಂಬಲಿಗರಿಗೆ ಮಂತ್ರಿ-ಮಹೋದಯರಿಂದ ಕೆಲಸ-ಕಾರ್ಯ ಮಾಡಿಸಿಕೊಡಲು ಶೆಟ್ಟರ್ ಪ್ರತಿಪಕ್ಷ ಮುಖಂಡ ಸ್ಥಾನವನ್ನು ಚೆನ್ನಾಗಿಯೇ ಬಳಸಿಕೊಂಡರು.

ಹುಬ್ಬಳ್ಳಿಯ ಸ್ಪಿರಿಟ್ ಹಗರಣದಲ್ಲಿ ಜಗದೀಶ್ ಶೆಟ್ಟರ್ ಹೆಸರು ಬಹಳವಾಗಿ ಕೇಳಿಬಂತು. ತಮ್ಮ ಬೆಂಬಲಿಗ ತಾಪುಸ್ಕರ್ ಎಂಬಾತನಿಗೆ ಕೈಗಾರಿಕೆ ಉದ್ದೇಶದ ಸ್ಪಿರಿಟ್ ಲೈಸೆನ್ಸ್ ಕೊಡಿಸಲು ಶೆಟ್ಟರ್ ಶ್ರಮಿಸಿದರು. ಲೈಸೆನ್ಸ್ ಕೊಡಿಸಿಯೂ ಬಿಟ್ಟರು.

ಹುಬ್ಬಳ್ಳಿ ಸಮೀಪದ ಅಂಚಟಗೇರಿ ಬಳಿ ಗೋದಾಮಿನಲ್ಲಿ ತಾಪುಸ್ಕರ್ ಸ್ಪಿರಿಟ್ ಸಂಗ್ರಹಿಸಿಟ್ಟುಕೊಂಡಾಗ ಈ ಸ್ಪಿರಿಟ್ ಕೈಗಾರಿಕೆ ಉತ್ಪನ್ನಗಳ ತಯಾರಿಕೆಗೆ ಬಳಕೆ ಆಗುವ ಬದಲು ಅಂಚಗೇರಿ, ಕಲಘಟಗಿ, ನೇಕಾರರ ನಗರ ಮತ್ತಿತರ ಕಡೆ ಅಕ್ರಮ ಮಧ್ಯ ತಯಾರಿಕೆಗೆ ವಿನಿಯೋಗವಾಗಿ ಹೋಯಿತು. ನಾನಾ ಬ್ರಾಂಡ್‌ನ ನಕಲಿ ಮದ್ಯಗಳು ಮಾರುಕಟ್ಟೆಯಲ್ಲಿ ರಾರಾಜಿಸತೊಡಗಿದವು.

ಈ ಅಕ್ರಂ ದಂಧೆಯಲ್ಲಿ ಶೆಟ್ಟರ್ ಕುಟುಂಬದ ಸದಸ್ಯರೊಬ್ಬರು ಭಾಗಿಯಾಗಿದ್ದರು ಎಂಬ ಅಂಶ ಕೂಡ ಬಯಲಿಗೆ ಬಂತಾದರೂ ಅಷ್ಟೇ ವೇಗದಲ್ಲಿ ಕೆಲಸ ಮಾಡಿದ 'ನಿಗೂಢ ಪ್ರಭಾವ' ದಿಂದ ಮುಚ್ಚಿ ಹೋಯಿತು.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಮಾರ್ಚ್ 16,17 2004**
  ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಪರ್ಯಾಯ ಕೃಷಿ ನೀತಿ ಕುರಿತು ಬಹಿರಂಗ ಸಭೆ.
  ಮಾರ್ಚ್ 16 ಕಮಲಾಪುರ
  ಮಾರ್ಚ್ 17 ಆಳಂದ
  ಮುಖ್ಯ ಅತಿಥಿ : ಎಸ್. ರಾಮಚಂದ್ರನ್ ಪಿಳ್ಳೆ, ಎಐಕೆಎಸ್ ಅಧ್ಯಕ್ಷರು
- **ಮಾರ್ಚ್ 20, 2004**
  ಇರಾಕ್ ಮೇಲಿನ ಆಕ್ರಮಣಕ್ಕೆ 1 ವರ್ಷ. ಅಮೆರಿಕಾದ ಯುದ್ಧಕೋರ ನೀತಿ ಖಂಡಿಸಿ ವಿವಿಧ ರಾಜಕೀಯ ಪಕ್ಷಗಳ, WSF ಮುಂತಾದ ಸಂಘಟನೆಗಳ ರ್‍ಯಾಲಿ - ವರ್ಷಾಚರಣೆ

ಬಂದುಹೋದ ಅಡ್ವಾಣಿ ಮತಯಾತ್ರೆ

ಕನ್ಯಾಕುಮಾರಿಯಿಂದ ಆರಂಭವಾದ ಅಡ್ವಾಣಿ ರಥಯಾತ್ರೆ ಕೇರಳವನ್ನು ಹಾದು, ಕರ್ನಾಟಕವನ್ನು ದಾಟಲು ಹೊರಟಿದೆ. ಭಾರತ ಉದಯವಾಗಿದೆಯೆಂದು ಮುಂಜಾವಿನ ಕೋಳಿಯಂತೆ ಕೂಗುತ್ತಾ ಹೊರಟ ಈ ರಥಯಾತ್ರೆ, ಮತಯಾತ್ರೆಯೇ ಆಗಿದೆ. ಅಡ್ವಾಣಿಯವರು ಯಾತ್ರೆ/ ಜಾತ್ರೆ ಆರಂಭಿಸುತ್ತಾರೆಂದು ಪ್ರಕಟಗೊಂಡಾಗಲೇ ದೇಶದ ಬಹುತೇಕ ಜನ ದಿಗಿಲುಕೊಂಡಿದ್ದರು. ಯಾಕೆಂದರೆ 1990 ರಲ್ಲಿ ಅಡ್ವಾಣಿ ನಡೆಸಿದ ರಕ್ತಯಾತ್ರೆ ಒಂದು ಭಯೋತ್ಪಾದಕ ಕೃತ್ಯವಾಗಿ, ಕೋಮುಗಲಭೆಗಳನ್ನೆಬ್ಬಿಸಿ ರಕ್ತಸಿಕ್ತ ಅಧ್ಯಾಯವನ್ನೇ ತೆರೆಯಿತು. ಹೋದಲ್ಲೆಲ್ಲಾ ಬಚ್ಚಿಟ್ಟ ಅಜೆಂಡಾವನ್ನು ಬಿಡ್ಡಿಪಡೆ ಬೀದಿಗೆ ತಂದಿತು.

ಈಗೇನೋ ಅಭಿವೃದ್ಧಿ, ಬಲಿಷ್ಠ ರಾಷ್ಟ್ರ ಇತ್ಯಾದಿ ಮಂತ್ರಗಳನ್ನು ಉಚ್ಚರಿಸುತ್ತಾ ನಡೆದಿದೆ. ಈ ಮೂಲಕ ಬಿಜೆಪಿ -ಸಂಘ ಪರಿವಾರದ ತಂತ್ರದಂತೆ, ವಿಶಾಲ ಮನೋಭಾವ-ಅಭಿವೃದ್ಧಿಯಂತಹ ಮಾತುಗಳನ್ನು ಆಡುತ್ತಾ - ತಾನು ಬದಲಾಗಿದ್ದೇನೆ ಎಂದು ನಾಟಕವಾಡುತ್ತಾ, ಇತರೆ ಪಕ್ಷಗಳಲ್ಲಿರುವ ಅತೃಪ್ತರವನ್ನು, -ಬೆಂಬಲಿಗರನ್ನು ಆಮಿಷ ಒಡ್ಡಿ ಹೈಜಾಕ್ ಮಾಡುವ, ಆ ಮೂಲಕ ಪ್ರಾದೇಶಿಕ, ಸೆಕ್ಯುಲರ್ ಪಕ್ಷಗಳ ಹಿಂದಿರುವವರನ್ನೇ ಸೆಳೆದು, ಅಂತಿಮವಾಗಿ ಅವುಗಳನ್ನೇ ನುಂಗಿಬಿಡುವ ತಂತ್ರ ರೂಪಿಸಿ ಈ ಘೋಷಣೆ ಇಟ್ಟು ಹೊರಟಿದೆ. ಈ ಮೂಲಕ ನಿಜವಾಗಿ ಭಾರತದ ಜನರ ಪ್ರಶ್ನೆಗಳನ್ನು - ಸಾಮ್ರಾಜ್ಯಶಾಹಿಯ ಅಡಿಯಾಳುತನವನ್ನು ಮರೆಮಾಚಲು ಹವಣಿಸುತ್ತಿರುವುದು ಸ್ವಯಂವೇದ್ಯ. ಈ ದೃಷ್ಟಿಯ ಈ ಯಾತ್ರೆಯ ಅಜೆಂಡಾಗಳು ಒಂದೊಂದು ರಾಜ್ಯಕ್ಕೆ ಒಂದೊಂದು ಥರ ಇರುತ್ತದೆ ಎಂಬುದು ಗಮನಿಸಬೇಕು.

ತಮಿಳುನಾಡು ಹೊಸೂರಿನಿಂದ ಬೆಂಗಳೂರಿಗೆ ಬಂದ ಯಾತ್ರೆ ಹೇಳಿಕೊಂಡಂತೆ ಜನತೆಯನ್ನು ಸೆಳೆಯುವಲ್ಲಿ ವಿಫಲವಾಗಿದೆ. ಮಾಧ್ಯಮಗಳ ವರದಿಯಂತೆ ಬಸವನಗುಡಿ ಮೈದಾನದಲ್ಲಿದ್ದವರು 6-7000 ಜನರು. ಇದು ಬಿಜೆಪಿಯ ಆಟಾಟೋಪ ಹಾಗೂ ಹಿಂದಿನ ಸಭೆಗಳಿಗೆ ಹೋಲಿಸಿದರೆ ಏನೂ ಅಲ್ಲ. ಆದರೆ ಪ್ರಚಾರದ ಆರ್ಭಟ, ಅಲಂಕಾರ,



ಸುರಿದ ಹಣಕ್ಕೆ ಲೆಕ್ಕವಿಲ್ಲ.

ಕಾಂಗ್ರೆಸ್ಸನ್ನು ಹಿಗ್ಗಾಮುಗ್ಗ ದೂಷಿಸುವುದರಲ್ಲೇ ಅಡ್ವಾಣಿಯವರು ಪೂರ್ಣ ಸಮಯ ಕಳೆದಿದ್ದಾರೆ. ಅದೇ ಅವರ ಸಾಧನೆಯ ರಕ್ಷಣೆಯೆಂದು ಬಿಂಬಿಸಿದ್ದಾರೆ. ಕಾಂಗ್ರೆಸ್ ವಿರೋಧಿ ಮತಗಳು ಎಡಪಕ್ಷಗಳು-ಜನತಾದಳದಂತಹ ಸೆಕ್ಯುಲರ್ ಪರ್ಯಾಯದತ್ತ ಹೋಗದಂತೆ ತಡೆಯುವುದು ಅವರ ತಂತ್ರ. ಕಾಂಗ್ರೆಸ್ಸಿನ ವೈಫಲ್ಯಗಳೇ ಬಿಜೆಪಿಗೆ ಬಂಡವಾಳ. ಭಾರತ ಉದಯವಾಗಿದೆಯೆಂದ ಅಡ್ವಾಣಿ ಅದು ಹೇಗೆ ಎಂದು ಹೇಳಲು ಹೋಗಲೇ ಇಲ್ಲ. ರಾಷ್ಟ್ರ ಭದ್ರತೆ, ಸ್ಥಿರತೆ, ಸ್ವಚ್ಛ ಆಡಳಿತ - ಸಾಧಿಸಿದ್ದೇವೆ ಎಂದಿದ್ದಾರೆ ಅಡ್ವಾಣಿ - ಆದರೆ ಅದನ್ನು ಬಿಡಿಸಿಡಲು ಹೋಗಲಿಲ್ಲ. ಹಾಗೆ ಹೋದರೆ ಬಂಡವಾಳ ಬಯಲು ಖಂಡಿತ ಎಂಬುದು ಅಡ್ವಾಣಿಗೂ ಗೊತ್ತು. ಭಯೋತ್ಪಾದನೆ, ಭ್ರಷ್ಟಾಚಾರ ಹಗರಣಗಳ ಸರಮಾಲೆ, ಜನದ್ರೋಹಿತನ, ಅಮೇರಿಕಾದಂತಹ ದೇಶಗಳ ಗುಲಾಮರಾಗಿಸುವ ಹುನ್ನಾರ ಹಿಂದೆಂದೂ ಕಾಣದಷ್ಟು ಇವೆ. ಗುಜರಾತ್‌ನ ಹತ್ಯಾಕಾಂಡ, ಕೋಮುಗಲಭೆಗಳ ಕರಾಳ ರಕ್ತಸಿಕ್ತ ಗುರುತು ಮುಚ್ಚಲು ಅಸಾಧ್ಯವಾಗಿದೆ. ಹೀಗಾಗಿಯೇ ಅಭಿವೃದ್ಧಿಯ ಹೊಸ ನಾಟಕ.

ದಿಢೀರನೆ ಈ ರಥಯಾತ್ರೆ ಯಾಕೆ ಆರಂಭಿಸಲಾಯಿತು ಎಂಬ ಪ್ರಶ್ನೆ ಹಲವಾರು ! ಬಿಜೆಪಿ ಏನೇ ಬಡಾಯಿ ಕೊಚ್ಚಿಕೊಳ್ಳಲಿ ಈ ಚುನಾವಣೆಯಲ್ಲಿ ಕೇಂದ್ರದ ಗುಪ್ತಚಾರ ಇಲಾಖೆಯ ವರದಿಯಂತೆ ಬಿಜೆಪಿ 150 ಸ್ಥಾನ ಮೀರದು ಎಂಬುದನ್ನು ಸ್ಪಷ್ಟಪಡಿಸಿದೆಯಂತೆ. ಅದರಿಂದ ಗಾಬರಿಯಾದ ಚೆಡ್ಡಿ 'ಪರಿವಾರ' ಏನಾದರೂ ಮಾಡಲೇಬೇಕೆಂದು ಈ ವರಸೆಗೆ ಇಳಿದಿದೆ. ಸ್ಥಾನ ಪಡೆಯಲು ಇನ್ನೂ ಅದೆಂಥ 'ಬಾಂಬ್' ಗಳಿವೆಯೋ ಈ ಭಸ್ಮಾಸುರರ ಬ್ಯಾಗಿನಲ್ಲಿ!

ಇದಲ್ಲದೇ ಈ ರಥಯಾತ್ರೆ ಅಡ್ವಾಣಿಯವರ 'ಅಸ್ತಿತ್ವ ಯಾತ್ರೆ' ಯೂ ಆಗಿದೆ ಎಂಬ ಟೀಕೆಯಲ್ಲಿ ಅರ್ಥವಿದೆ. ಅಡ್ವಾಣಿಯೇ ಸರ್ವಶಕ್ತ, ಸರ್ವ ಸಮ್ಮತ ನಾಯಕ, ಎನ್‌ಡಿಎ ಅಜೆಂಡಾ ಎಂಬ ಹುಸಿ ನಾಟಕ ಬಿಟ್ಟು ನಗ್ನವಾಗಿ 'ಹಿಂದುತ್ವ' ದ ಅಜೆಂಡಾ ಜಾರಿಗೊಳಿಸಲು ಅಡ್ವಾಣಿಯನ್ನು ಎನ್‌ಡಿಎ ಭಾಗಿದಾರರು ಮತ್ತು ಇತರರೂ ಒಪ್ಪುವಂತೆ ಮಾಡಲು ಈ ಕಸರತ್ತು ಇಲ್ಲವೆಂದಲ್ಲ. ಅಡ್ವಾಣಿ - ವಾಜಪೇಯಿ ನಡುವೆ ಶೀತಲ ಸಮರ - ಗುಂಪುಗಳ ಜಗಳವಿದೆಯೆಂಬುದು ಕೇವಲ ತೋರಿಕೆಗೆ, ಇತರರನ್ನು ಮೋಸಗೊಳಿಸಲಷ್ಟೆ. 'ಅಡ್ವಾಣಿ-ವಾಜಪೇಯಿ' ಯವರ ನಡುವೆ ಪರಸ್ಪರ ತಿಳುವಳಿಕೆ ಇದ್ದೇ ಇದು ನಡೆಯುತ್ತಿದೆ ಎಂಬುದು ಸತ್ಯ.

ಈವಾರ ಕರ್ನಾಟಕ
ಒಂದು ನೋಟ

ಎಸ್.ವೈ.ಗುರುಶಾಂತ್

ದೇಶವನ್ನು ಹರಾಜಿಗಿಡಲು, ಜನರನ್ನು ಸರ್ವನಾಶ ಮಾಡಲು 'ಬಲ' ಕೊಡಬೇಕೆಂದು ಹೊರಟ ಈ ಬಿಜೆಪಿ ಚಿತಾವಣೆಯನ್ನು ಜನ ಭಗ್ನಗೊಳಿಸಬೇಕು. ದಕ್ಷಿಣ ಭಾರತದ ರಾಜ್ಯಗಳಲ್ಲಿ ಕರ್ನಾಟಕದ ಮೂಲಕವೇ ವಿಧ್ವಂಸಕ ಕನಸನ್ನು ಜನತೆ ನುಚ್ಚು ನೂರಾಗಿಸಬೇಕು. ಇಂತಹ ಹುಸಿ ಪೋಜು ಕೊಡುವಲ್ಲಿ ಬಿಜೆಪಿಗೆ ಬಿಜೆಪಿಯೇ ಸಾಟಿ ಎಂಬುದು ತಿಳಿದದ್ದೇ. ಅಡ್ವಾಣಿಯ ಈ ಯಾತ್ರೆ, ಜಾತ್ರೆಗಳಿಗೆ ರಾಜ್ಯದ ಜನ ಮರುಳಾಗಬೇಕಿಲ್ಲ.

ಬಾಬಾ ಬುಡನ್ ಗಿರಿ : ವಿಧ್ವಂಸಕರ ವಿಕೃತಿಗೆ ಉತ್ತರ ಈ ಸೌಹಾರ್ದ 'ಉರುಸ್'

ಬಾಬಾಬುಡನ್ ಸ್ವಾಮಿ ದತ್ತಪೀಠ ದರ್ಗಾದಲ್ಲಿ ಶಾಂತವಾಗಿ ಎಂದಿನಂತೆ ಉರುಸ್ ನಡೆದಿದೆ. ಇಂತಹ ಉರುಸ್ ಸುಮಾರು 800 ವರುಷಗಳಿಂದ ನಡೆದುಬಂದ ಸಂಪ್ರದಾಯ. ಹಿಂದೂಗಳು-ಮುಸ್ಲಿಮರು ವಿವಿಧ ಜಾತಿ, ಭಾಷೆ, ಪ್ರದೇಶಗಳಿಗೂ ಸೇರಿದ ಸಾವಿರಾರು ಜನರು ಬಂದು ಹೋಗಿದ್ದಾರೆ. ದರ್ಗಾದಲ್ಲಿನ ಈ ದರ್ಶನ-ಆಚರಣೆ ಮಾರ್ಚ್ 6 ರಂದು ಆರಂಭವಾಗಿ 7, 8 ಮುಖ್ಯ ಆಚರಣೆ - ಬಳಿಕ ಒಂದು ತಿಂಗಳ ಕಾಲ ನಡೆಯಲಿದೆ. ಶಾಂತಿ, ಸೌಹಾರ್ದತೆ- ಮತೀಯ ಸಾಮರಸ್ಯವನ್ನು ಎತ್ತಿ ಹಿಡಿದ 'ಸೂಫಿ' ಪರಂಪರೆಯು ಮತ್ತೊಮ್ಮೆ ಅನಾವರಣಗೊಂಡಿತು. ಭೀಕರ ಬರ- ಬಡತನವಿದ್ದರೂ ಸಾವಿರಾರು ಜನ ಭಾಗವಹಿಸಿ 'ಸೌಹಾರ್ದತೆ'ಯ ಪರಂಪರೆಯನ್ನು, ತಮ್ಮ ಬದ್ಧತೆಯನ್ನು ಸಾರಿದರು, ಸಾಂಕೇತಿಸಿದರು. ಈ ಜನರಲ್ಲಿ ತ್ರಿಶೂಲ, ಖಡ್ಗ, ಭರ್ಜಿ, ಬಾಂಬ್ ಹಾಗೂ ನಾಡಿಗೆ ಬೆಂಕಿ ಹಚ್ಚುವ 'ವಿದ್ವೇಷ'ದ ಮಾತುಗಳಿರಲಿಲ್ಲ. ಮತಾಂಧತೆ ಮುಗ್ಧ ಶ್ರದ್ಧೆ ಇತ್ತು, ಪ್ರೀತಿ ಇತ್ತು.

ಭಜರಂಗದಳ - ವಿಶ್ವಹಿಂದೂ ಪರಿಷತ್‌ನ ಹಿಂಸೆ, ಬಹು ಸಂಸ್ಕೃತಿಯ ಭಾರತದ ನಾಶಕ್ಕೆ ಪಣತೊಟ್ಟ ಆರ್ಭಟಗಳಿಗೆ ದಿಟ್ಟ ಉತ್ತರವಾಗಿತ್ತು ಈ ಉರುಸ್ ಈ ಉರುಸ್. ದತ್ತ ಮಾಲೆ, ದತ್ತ ಜಯಂತಿ, ದತ್ತ ಯಜ್ಞ, ಶೋಭಾ ಯಾತ್ರೆಗಳಂತಹ ಅಕ್ರಮ ಹಾಗೂ ನೆಲದ ಕಾನೂನು, ಪರಂಪರೆ, ಸಂಸ್ಕೃತಿ ಬಾಹಿರ ಭಯೋತ್ಪಾದನೆಗಳನ್ನು ಈಚೆಗಷ್ಟೇ ನೋಡಿದವರು ಉರುಸ್ ಗೆ ಬಂದ ಜನತೆಯ ಈ ಪ್ರಕ್ರಿಯೆಯಿಂದ ಅತ್ಯಂತ ಪ್ರಬಲವಾದ ಉತ್ತರವನ್ನು ನೀಡಿದ್ದಾರೆ. ಪ್ರಶಾಂತ ಗಿರಿಯಲ್ಲಿ ಈ ಕಣಿವೆ ಘಟ್ಟಗಳಲ್ಲಿ ಅರಳಬೇಕಿರುವುದು ಶಾಂತಿ ಸೌಹಾರ್ದತೆ, ಸಹಬಾಳ್ವೆ -ಬಹುಸಂಸ್ಕೃತಿ. ಜಾಗತೀಕರಣ - ಉದಾರೀಕರಣದ ದುಷ್ಟ ರಾಜಕಾರಣದಲ್ಲಿ ಹುಟ್ಟುವ ಫ್ಯಾಸಿಸ್ಟ್ ಮನೋಭಾವದ ವಿಕೃತಿಗಳನ್ನು ಇಂತಹ ಜನ ಸಂಸ್ಕೃತಿಯಿಂದಲೇ ಮೆಟ್ಟಬೇಕು.

ಆತ್ಮಹತ್ಯೆ ಮಾಡಿಕೊಂಡ ರೈತರು: ಅಬ್ಬರದಲ್ಲಿ ಅಡ್ವಾಣಿ-ಕೃಷ್ಣರು

ಅಡ್ವಾಣಿ ಉದಯಯಾತ್ರೆ, ಕೃಷ್ಣರ ವಿಜಯದುಂದುಬಿ ಯಾತ್ರೆಗಳಿಂದ ರಾಜಕೀಯ ದೊಂಬರಾಟಕ್ಕೆ, ಭರವಸೆಗಳ ರಂಗಿನಾಟಕ್ಕೆ ಇಳಿದಿರುವಾಗಲೇ ನಾಡಿನ ಅನ್ನದಾತ ರೈತರಿಬ್ಬರು ಆತ್ಮಹತ್ಯೆ ಮಾಡಿಕೊಂಡು ಸತ್ತಿದ್ದಾರೆ. ಟೊಮೊಟೋ ಬೆಳೆದ ರೈತರು ಒಂದು ಕಿಲೋಗೆ 30 ಪೈಸೆ ಕುಸಿದಿರುವುದರಿಂದ ಸಾಗಾಣಿಕೆ ವೆಚ್ಚವೂ ಸಿಗದೇ ರಸ್ತೆಗಳಿಗೆ ಸುರಿದು ಹತಾಶೆ ವ್ಯಕ್ತಪಡಿಸಿದ್ದಾರೆ. ಬದುಕಿಯೂ ದಿನವೂ ಸಾಯುವರದ್ದು ಈ ಬಗೆಯಾದರೆ, ಕೃಷಿ ಸಾಲ ತೀರಿಸಲಾಗದೆ ಜೀವ ಕಳೆದುಕೊಂಡುವರ ಕೆಲವರು. ಧಾರವಾಡ ಜಿಲ್ಲೆಯ ಬೇಲೂರು ಗ್ರಾಮದ ಬಸವನಗೌಡ ಮಲ್ಲಪ್ಪ ಗೌಡ ರಾಮನಗೌಡರ(50) ನೇಣಿಗೆ ಕೊರಳೊಡ್ಡಿದ್ದಾರೆ. ಮುಮ್ಮಿಗಟ್ಟಿಯ ಮಹಾದೇವಪ್ಪ (55) ಎಂಬ ರೈತ ಸರಾಯಿಯೊಳಗೆ ವಿಷ ಬೆರೆಸಿ ಕುಡಿದು ಸತ್ತುಹೋಗಿದ್ದಾನೆ. ಸತ್ತ ವಿಧಾನ ಬೇರೆಯಾದರೂ ಕಾರಣ ಒಂದೇ. ಅದು ಸಾಲ - ತೀರಿಸಲಾಗದ ಸಾಲ.

ಸತತ ಮೂರು ವರುಷಗಳಿಂದಲೂ ಬೆನ್ನಟ್ಟಿರುವ ಬರ, ಬೆಳೆಯೂ ಅಷ್ಟಕ್ಕಷ್ಟೇ. ಫಸಲಿಗೆ ಸರಿಯಾದ ಬೆಲೆ ಇಲ್ಲ. ಬೆಟ್ಟದಂತೆ ಬೆಳೆದ ಬೆಳೆ ಸಾಲ. ತೀರಿಸಲೇಬೇಕಾದ ಒತ್ತಡ, ಬದುಕಬೇಕಾದ ಅನಿವಾರ್ಯತೆ. ಇವುಗಳ ನಡುವೆ ದಾರಿಕಾಣದೇ ಮೊರೆಹೋದದ್ದು ಸಾವಿಗೆ.

ಈ ಘಟನೆಗಳು ಇಂದಿನ ಪರಿಸ್ಥಿತಿಗೆ ಹಿಡಿದ ಕನ್ನಡಿ. ಇಂತಹ ಅನೇಕ ಕ್ರೂರ ವಾಸ್ತವಗಳನ್ನು ಪತ್ರಿಕೆ, ಟಿ.ವಿ. ಮಾಧ್ಯಮಗಳು, ಅಧಿಕಾರಸ್ಥರು ಮರೆ ಮಾಡುತ್ತಿದ್ದಾರೆ. ಬಡಜನರ ಹೆಸರಲ್ಲಿ ದೋಚುತ್ತಿದ್ದಾರೆ. ಉದಾರೀಕರಣ, ಜಾಗತೀಕರಣ, ವಿದೇಶಿ ಸಾಲ- ಶರತ್ತುಗಳು, ಉತ್ಪನ್ನಗಳ ಆಮದು.... ಶೂಲದಂತೆ ಇರಿಯುತ್ತಲೇ ಇವೆ, ಬಲಿ ತೆಗೆದುಕೊಳ್ಳುತ್ತಲೇ ಇವೆ. ಭಾರತ ಪ್ರಕಾಶಿಸುತ್ತಿದೆ, ಉದಯವಾಗುತ್ತಿದೆ ಎಂಬ ವಾಜಪೇಯಿ ಅಡ್ವಾಣಿಗಳು,, ಕರ್ನಾಟಕ ಪ್ರಜ್ವಲಿಸುತ್ತಿದೆಯೆಂಬ ಕೃಷ್ಣ-ಪೂಜಾರಿಗಳಿಗೆ ಕಾಣಿಸುತ್ತಿಲ್ಲ. ಇವರು ಊರೂರಿಗೆ ಬಂದಾಗ ಛೀಮಾರಿ ಹಾಕಬೇಕು. ಸತ್ತ ರೈತರ ಕುಟುಂಬಕ್ಕೆ ಸಾಂತ್ವನ ಹೇಳದಂತಹ ಕ್ರೂರಿಗಳನ್ನು ಅಧಿಕಾರದಿಂದ ತೊಲಗಿಸಬೇಕು. ಇದು ಜನರ ರಣಕಹಳೆಯಾಗಬೇಕು.

ಕೋಮುವಾದಿ - ಜಾಗತೀಕರಣವಿರೋಧಿ ಕರ್ನಾಟಕ ಜನಪರ ಚಳುವಳಿಗಳ ಒಕ್ಕೂಟ ರಚನೆ



ಪ್ರೊ.ನಂಜುಂಡಸ್ವಾಮಿಯವರ ನಿಧನದ ಬಳಿಕ ಶ್ರದ್ಧಾಂಜಲಿ ಸಲ್ಲಿಸಲು ಅಭಿಮಾನಿಗಳು ಸಭೆ ಸೇರಿದ್ದಾಗ 'ಕರ್ನಾಟಕದಲ್ಲಿ ಜನ ಚಳುವಳಿಗಳ ಕುರಿತ ವಿಚಾರ ಮಂಥನ ನಡೆಯಿತು. ದಲಿತ ಹಾಗೂ ರೈತ ಚಳುವಳಿಗಳನ್ನು ಬೆಸೆಯುವ ಹೋರಾಡುವ ಅಗತ್ಯತೆಯ ಇಂಗಿತ ವ್ಯಕ್ತವಾಯಿತು. ನಂತರ ದಲಿತ ಸಂಘರ್ಷ ಸಮಿತಿಗಳು, ಕರ್ನಾಟಕ ರಾಜ್ಯ ರೈತ ಸಂಘ ಸಭೆ ಸೇರಿ ಈ ಚಿಂತನೆಗೆ ಚಾಲನೆ ನೀಡಲು ಬಯಸಿದವು. ಸಾಮಾನ್ಯ ಉದ್ದೇಶವಿರಿಸಿ ಕೊಂಡಿರುವ ಎಲ್ಲಾ ಚಳುವಳಿಗಳು ಒಂದಾಗಿ ಕೆಲಸ ಮಾಡಬೇಕು ಎಂಬುದು ಬಯಕೆ.

ಈ ಹಿನ್ನೆಲೆಯಲ್ಲಿ 'ಜನಮತ' ಸಂಘಟನೆಯು ಫೆಬ್ರವರಿ 22 ರಂದು ಬೆಂಗಳೂರಿನಲ್ಲಿ ವಿಚಾರಸಂಕಿರಣವೊಂದನ್ನು ಏರ್ಪಡಿಸಿತು. ಇದರಲ್ಲಿ ರೈತಸಂಘದ, ದಲಿತ ಸಂಘರ್ಷ ಸಮಿತಿಗಳ ಎಲ್ಲಾ ಬಣಗಳೂ ಭಾಗವಹಿಸಿದ್ದವಲ್ಲದೆ, ಸಿಪಿಐ(ಎಂ), ಸಿಪಿಐ ಪಕ್ಷಗಳಿಗೂ ಆಹ್ವಾನ ನೀಡಲಾಗಿತ್ತು. ಮುರುಘರಾಜೇಂದ್ರ ಸ್ವಾಮಿಗಳು ಇದನ್ನು ಉದ್ಘಾಟಿಸಿ ಮಾತನಾಡಿದುದು ವಿಶೇಷವಾಗಿತ್ತು. ಈ ವಿಚಾರ ಸಂಕಿರಣದಲ್ಲಿ ಜನಪರ ಚಳುವಳಿ ಹಾಗೂ ವಿವಿಧ ಸಂಘಟನೆಗಳು ಒಂದು ಸಾಮಾನ್ಯ ಉದ್ದೇಶದತ್ತ ಒಂದಾಗಿ ಕಾರ್ಯನಿರ್ವಹಿಸುವ ನಿರ್ಧಾರಕ್ಕೆ ಬರಲಾಯಿತು. ಇನ್ನೂ ಆಳವಾಗಿ ಚಿಂತನ - ಮಂಥನ ನಡೆಸಲು ಹಾಗೂ ಪ್ರಾಸ್ತಾವಿತ ಜನಪರ

ಪುಟ 4 ಕ್ಕೆ


ಕಾರ್ಮಿಕರ ಹಕ್ಕುಗಳಿಗಾಗಿ ತೀವ್ರ ಹೋರಾಟದತ್ತ ಹೆಜ್ಜೆ

ಬೆಳಗಾಂವಿ ಜಿಲ್ಲಾ ಸಿಐಟಿಯು ಸಮ್ಮೇಳನ ಫೆಬ್ರವರಿ 4-5 ರಂದು ಬೆಳಗಾವಿಯಲ್ಲಿ ನಡೆಯಿತು. ಸಮ್ಮೇಳನವನ್ನು ಅಖಿಲ ಭಾರತ ಸಿಐಟಿಯು ಅಧ್ಯಕ್ಷರಾದ ಎಂ.ಕೆ.ಪಂಧೆ ಉದ್ಘಾಟಿಸಿದರು.

ಸಮ್ಮೇಳನ ಉದ್ಘಾಟಿಸಿದ ಡಾ.ಎಂ.ಕೆ.ಪಂಧೆಯವರು ಕಾರ್ಮಿಕರಿಗೆ ಅಪಾಯಕಾರಿ ಆಗಿರುವ ಉದಾರೀಕರಣ ಹಾಗೂ ಜಾಗತೀಕರಣ ಕೇಂದ್ರ ಸರಕಾರದ ಧೋರಣೆಗಳು ಬಂಡವಾಳಶಾಹಿಗಳ ಪರವಾಗಿದ್ದು ಅವುಗಳನ್ನು ತೀವ್ರವಾಗಿ ಖಂಡಿಸಲು ಎಲ್ಲಾ ದುಡಿಯುವ ವರ್ಗವು ಒಂದಾಗಿ ಈ ಕಾರ್ಮಿಕ ವಿರೋಧಿ ನೀತಿಗಳಿಗೆ ಉಗ್ರ ಹೋರಾಟ ನಡೆಸಲು ಕರೆ ನೀಡಿದರು. ಉದಾರೀಕರಣ ಹಾಗೂ ಜಾಗತೀಕರಣ ನೀತಿಯನ್ನು ಬಂಡವಾಳಶಾಹಿ ರಾಷ್ಟ್ರಗಳ ಒಪ್ಪಂದದಿಂದ ನಮ್ಮ ದೇಶದ ಮೇಲೆ ಹೇರಲಾಗಿದ್ದು ಅದರಿಂದ ಕಾರ್ಮಿಕ ವರ್ಗಕ್ಕೆ ಯಾವುದೇ ಪ್ರಯೋಜನ ಆಗದೆ ಭಾರತೀಯ ಸರಕುಗಳು ಬೇರೆ ರಾಷ್ಟ್ರಗಳಲ್ಲಿನ ಸರಕುಗಳಿಗೆ ಸ್ಪರ್ಧೆಯಲ್ಲಿ ನಿಲ್ಲಲು ಸಾಧ್ಯವಾಗುತ್ತಿಲ್ಲ. ಹಾಗೂ ಹೊರರಾಷ್ಟ್ರಗಳಿಂದ ಬಂದಿರುವ ಸರಕುಗಳು ನಮ್ಮ ದೇಶದಲ್ಲಿನ ಸರ್ಕಾರಗಳಿಂದ ಸಹಾಯಧನ ಪಡೆದು ಸ್ಪರ್ಧಾತ್ಮಕವಾಗಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಸರಕುಗಳ ಬೆಲೆಗಿಂತಲೂ ಕಡಿಮೆ ಬೆಲೆಯಲ್ಲಿ ದೊರೆಯುತ್ತವೆ. ಆದ್ದರಿಂದ ಭಾರತದಲ್ಲಿನ ಹಲವಾರು ಕಾರ್ಖಾನೆಗಳು ಕಳೆದ 5 ವರ್ಷಗಳಲ್ಲಿ ಮುಚ್ಚಿಹೋಗಿವೆ. ಆದರಿಂದ ಹಲವಾರು ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ ಎಂದರು. ಸರ್ಕಾರ ಘೋಷಿಸಿದ 'ಫೀಲ್ ಗುಡ್' ನೀತಿ ಸರ್ವಸಾಮಾನ್ಯರಿಗೆ ಪ್ರಯೋಜನ ಆಗದೆ ಬಂಡವಾಳಶಾಹಿಗಳಿಗೆ ಮಾತ್ರ ಲಾಭಕರ ಆಗಿದೆ ಎಂದು.

ಅನ್ಯಾಯದ ಬಗ್ಗೆ ಯಾವ ಕಾಳಜಿ ವಹಿಸಿರುವುದಿಲ್ಲ ಎಂದು ಹೇಳಿ 'ಫೀಲ್ ಗುಡ್'

ಬೆಳಗಾವಿ ಜಿಲ್ಲಾ ಸಿಐಟಿಯು ಸಮ್ಮೇಳನ



ಎಂಬ ಶಬ್ದ ಪ್ರಯೋಗವು ಕಣ್ಣುಗಳಲ್ಲಿ ಧೂಳ ಎಸೆದಂತಾಗಿದೆ ಎಂದು ಪ್ರಸ್ತಾಪಿಸಿದರು. ಅದೇ ರೀತಿ ಎಲ್ಲಾ ಕಾರ್ಮಿಕ ಸಂಘಗಳು ಒಂದಾಗಿ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಖಂಡಿಸಿ ದುಡಿಯುವ ವರ್ಗದ ಮೇಲೆ ಆಗುತ್ತಿರುವ ಅನ್ಯಾಯಗಳನ್ನು ಸಂಘಟಿತರಾಗಿ ಪ್ರತಿಭಟನೆ ನಡೆಸಬೇಕೆಂದು ಹೇಳಿದರು.

ಸಮ್ಮೇಳನದಲ್ಲಿ ಕರ್ನಾಟಕ ಸರ್ಕಾರದಿಂದ ಸಹಕಾರಿ ರಂಗದಲ್ಲಿನ 6 ಸಕ್ಕರೆ ಕಾರ್ಖಾನೆಗಳನ್ನು ಮುಚ್ಚುವ ಬಗ್ಗೆ ಹಾಗೂ ಅವುಗಳನ್ನು ಖಾಸಗೀಯವರಿಗೆ ಮಾರಲು ಅವಕಾಶ ನೀಡುವ ಬಗ್ಗೆ ತೀವ್ರ ವಿರೋಧ ವ್ಯಕ್ತಪಡಿಸಿ ಈ 6 ಕಾರ್ಖಾನೆಗಳು ಪುನಃಶ್ಚೇತನಗೊಳಿಸಿ ಸಹಕಾರಿ ರಂಗದಲ್ಲಿ ಪ್ರಾರಂಭಿಸಬೇಕು ಎಂದು ನೀಡಿದ ಠರಾವು ಪ್ರಸ್ತಾಪವನ್ನು ಸಮ್ಮೇಳನದಲ್ಲಿ ಒಮ್ಮತದಿಂದ ಅಂಗೀಕರಿಸಲಾಯಿತು.

ಅದೇ ರೀತಿ ಕೇಂದ್ರ ಸರ್ಕಾರದ ಉದಾರೀಕರಣ ಹಾಗೂ ಜಾಗತೀಕರಣ ನೀತಿ ಖಂಡಿಸಲು ಠರಾವು ಅಂಗೀಕರಿಸಲಾಯಿತು.

ತಮಿಳುನಾಡಿನಲ್ಲಿನ ಸರ್ಕಾರಿ ನೌಕರರ ಮುಷ್ಕರದ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪನ್ನು ದುಡಿಯುವ ವರ್ಗಕ್ಕೆ ಸಂವಿಧಾನಾತ್ಮಕವಾಗಿ ದೊರಕಿರುವ ಹಕ್ಕುಗಳನ್ನು ಕಸಿದುಕೊಂಡಂತಾಗಿದೆ ಎಂದು ಪ್ರಸ್ತಾಪಿಸಿ, ಮುಷ್ಕರದ ಹಕ್ಕನ್ನು ದುಡಿಯುವ ವರ್ಗಕ್ಕೆ ನಿರಂತರ ಹಾಗೂ ಅಬಾಧಿತವಾಗಿ ದೊರಕಿಸಲು ರಾಷ್ಟ್ರೀಯ ಮಟ್ಟದಲ್ಲಿನ ಎಲ್ಲಾ ಸರ್ಕಾರಿ ಸಂಘಗಳು, ಬ್ಯಾಂಕ್ ನೌಕರರು, ವಿಮಾ ನೌಕರರು, ಪೋಸ್ಟ್ ಮತ್ತು ಟೇಲಿಗ್ರಾಫ್ ಹಾಗೂ ಔದ್ಯಮಿಕ ರಂಗದಲ್ಲಿನ ಕಾರ್ಮಿಕರ ಸಾರ್ವತ್ರಿಕ 24 ಫೆಬ್ರುವರಿ ಮುಷ್ಕರಕ್ಕೆ ಸಾರ್ವಜನಿಕರು ದುಡಿಯುವ ವರ್ಗಕ್ಕೆ ಸಹಾನುಭೂತಿ ನೀಡಿ ಸಾರ್ವತ್ರಿಕ ಬಂದ್‌ಗೆ ಸಹಕರಿಸಬೇಕೆಂದು ಕೋರಲಾಯಿತು.

ಉಗಾರ ಸಕ್ಕರೆ ಕಾರ್ಖಾನೆ ಕಾರ್ಮಿಕರ ಪರವಾಗಿ ಫ್ಯಾಕ್ಟರಿ ವರ್ಕರ್ಸ್ ಯೂನಿಯನ್ನಿನ ಅಧ್ಯಕ್ಷರಾದ ಜಿ.ಟಿ.ಪಾಟೀಲ ,ಇಂಡಾಲ ಎಂಪ್ಲಾಯಿಸ್ ಯೂನಿಯನ್ನಿನ ಪದಾಧಿಕಾರಿ ಗಿರೀಶ ಶೆಟ್ಟಿ, ಗೋಗಟೆ ಟೆಕ್ಸ್‌ಟೈಲ್ ಕಾರ್ಮಿಕರ ಸಂಘದ ಜೆ.ಬಿ.ಸಂಗೋಡಿ, ಜಿ.ವ್ಹಿ.ಕುಲಕರ್ಣಿ, ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಮಿಕರ ಪರವಾಗಿ ಡಿ.ಎನ್.ಬನೊಸಿ ಪಾಲ್ಗೊಂಡಿದ್ದರು.

ಉಪಾಧ್ಯಕ್ಷರು: ಡಿ.ಬಿ.ಪವಾರ್, ಬಾಬು.ಬಿ.ಘಸ್ತಿ, ಜೆ.ಟಿ.ಪಾಟೀಲ, ಪರಶುರಾಮ ದೋಂಜಿ, ಅನ್ನಪೂರ್ಣಾ ದೇವಾಂಗಮಠ

ಪ್ರಧಾನ ಕಾರ್ಯದರ್ಶಿ: ಎಸ್.ಎಸ್.ಕಾಂಬಳೆ

ಕಾಯದರ್ಶಿಗಳು: ಗಿರೀಶ.ಶೆಟ್ಟಿ, ಸತೀಷ.ತಲೆಗಾಂವ, ಕಾ.ಜಿ.ವಿ.ಕುಲಕರ್ಣಿ

ಸಹಾಯಕ ಕಾರ್ಯದರ್ಶಿಗಳು: ಬಿ.ಡಿ.ಮಾಳಗೆ, ಡಿ.ಎಸ್.ಬನೋಶಿ, ಗೈಬುಸಾಬ ಎಂ.ಜುನೇಖಾನ

ಖಜಾಂಚಿ: ವಿ.ವೈ.ಕೋಟಗಿ

ಖಜಾಂಚಿ : ಗಿರೀಶ ಕುಲಕರ್ಣಿ

ಸಹಾಯಕ ಖಜಾಂಚಿ: ಜೆ.ಬಿ.ಸಂಗೋಡಿ

ಕರ್ನಾಟಕ ಜನಪರ ಚಳುವಳಿಗಳ ಒಕ್ಕೂಟ ರಚನೆ

ಪುಟ 3 ರಿಂದ

ಚಳುವಳಿಗಳ ವೇದಿಕೆ ಸ್ಥಾಪಿಸಲು ಜಾನಪದಲೋಕದಲ್ಲಿ (ರಾಮನಗರ ಬಳಿ) 28,29 ರಂದು ಎರಡು ದಿನಗಳ ಕಾರ್ಯಾಗಾರವು ನಡೆದು ಒಂದು ವೇದಿಕೆಯಲ್ಲಿ ಸಂಘಟನೆಗಳು ಹಾಗೂ ಕೆಲವು ವ್ಯಕ್ತಿಗಳು ಕೆಲಸ ಮಾಡಲು ನಿರ್ಧರಿಸಲಾಯಿತು ಹಾಗೂ ಕರ್ನಾಟಕ ಜನಪರ ಚಳುವಳಿಗಳು ಒಕ್ಕೂಟ ಸ್ಥಾಪನೆಗೆ ನಿರ್ಣಯಿಸಲಾಯಿತು.

ಅದರಂತೆ ಮಾರ್ಚ್ 11 ರಂದು ವೇದಿಕೆ ಘೋಷಿತವಾಗಿದೆ. ಒಟ್ಟು ರಾಜಕೀಯ ನಿಲುವು ಸ್ಪಷ್ಟಗೊಳಿಸಲಾಗದ ಭಿನ್ನ ರಾಜಕೀಯ ಅಜೇಂಡಾ ಇರಿಸಿಕೊಂಡ ಬಿ.ಎಸ್.ಪಿ ಈ ವೇದಿಕೆಯ ಭಾಗವಾಗಿಲ್ಲ. ಹಾಗೆಯೇ ಪೀಪಲ್ಸ್ ವಾರ್ ಗ್ರೂಪ್‌ನ ನಕ್ಸಲೀಯ ಮುಖವಾಡದ ದುಸ್ಸಾಹದ ಛಿದ್ರಕಾರಿ ಸಂಘಟನೆ ಕರ್ನಾಟಕ ವಿಮೋಚನಾ ರಂಗ ಹೇಗಾದರೂ ಈ ವೇದಿಕೆಯಲ್ಲಿ ನುಸುಳಲು ಹಲವು ರೀತಿಯಲ್ಲಿ ಯತ್ನಿಸಿತಾದರೂ ಸಿಪಿಐ(ಎಂ)ನ ದೃಢ ನಿಲುವಿನಿಂದ ಹೊರಗುಳಿದಿದೆ.

ತಕ್ಷಣದಲ್ಲಿ ಚುನಾವಣೆಗಳು ಎದುರಾಗಿರುವುದರಿಂದ ರಾಜಕೀಯ ಕರ್ತವ್ಯದಲ್ಲಿ ಭಾಗವಹಿಸಲಿರುವ ಒಕ್ಕೂಟವು ಆಬಳಿಕ ಮುಖ್ಯ ಕರ್ನಾಟಕದಲ್ಲಿ ಅತ್ಯಂತ ಪ್ರಬಲವಾದ ಚಳುವಳಿಯನ್ನು ರೂಪಿಸುವುದೇ ಪ್ರಮುಖ ಗುರಿಯನ್ನಾಗಿಸಿದೆ.

ಪ್ರಸ್ತುತದಲ್ಲಿ ಹಣ ಅಧಿಕಾರಕ್ಕಾಗಿ ವಿವಿಧ ಪಕ್ಷಗಳಲ್ಲಿದ್ದ ರಾಜಕೀಯ ನಾಯಕರು ಆಡಳಿತ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗೆ ಬೆನ್ನು ತಿರುಗಿಸಿ ಪಕ್ಷದಿಂದ ಪಕ್ಷಕ್ಕೆ ಹಾರುತ್ತ ಮಾರಾಟವಾಗುತ್ತಿರುವ ಸಂದರ್ಭದಲ್ಲಿ 70-80 ರ ದಶಕದಲ್ಲಿ ಜನ ಚಳುವಳಿಗಳು ಕರ್ನಾಟಕದಲ್ಲಿ ಮಹತ್ವದ ರಾಜಕೀಯ ಬದಲಾವಣೆಗೆ ಪ್ರಮುಖ ಪಾತ್ರವಹಿಸಿದ್ದು ನೆನಪಿಸಿಕೊಳ್ಳಬೇಕಾಗಿದೆ.

ಕೋಮುವಾದ, ಜಾಗತೀಕರಣ, ಖಾಸಗೀಕರಣಗಳು ಜನಸಾಮಾನ್ಯರನ್ನು ಸುತ್ತುವರೆದು ಜನಸಮೂಹವನ್ನು ಹತಾಶೆ ಹಾಗೂ ಅಸಹಾಯಕತೆ ಅಂಚಿಗೆ ತಂದು ನಿಲ್ಲಿಸಿವೆ. ಇಂತಹ ಸಂದಿಗ್ಧ ಕಾಲದಲ್ಲಿ ಕರ್ನಾಟಕದ ಬಹುಮುಖ್ಯ ಜನಪರ ಚಳುವಳಿಗಳು ಸಾಮಾನ್ಯ ಕಾರ್ಯನೀತಿಗಳನ್ನು ರೂಪಿಸಲು ಹಾಗೂ ವ್ಯಾಪಕ ತಾತ್ವಿಕ ತಳಹದಿಯುಳ್ಳ, ಗ್ರಾಮೀಣ ಪರವಾದ, ಶ್ರಮಿಕ ವರ್ಗದ ಪರವಾದ ಹಾಗೂ ಬಹುಸಂಸ್ಕೃತಿ ಪರವಾದ ಜಾತ್ಯಾತೀತ ಒಕ್ಕೂಟ ರಚಿಸುವತ್ತ ಒಂದು ವಿಶಾಲ ವೇದಿಕೆಯಲ್ಲಿ ಸೇರಿವೆ. ಈ ಒಕ್ಕೂಟದಲ್ಲಿ ಸಿಪಿಐ(ಎಂ), ಸಿಪಿಐ ರಾಜ್ಯರೈತ ಸಂಘಗಳು ದಲಿತ ಸಂಘರ್ಷ ಸಮಿತಿಗಳು ಜನವಾದಿ ಮಹಿಳಾ ಸಂಘಟನೆ, ಸಮತಾ ಸೈನಿಕದಳ, ಚಕ್ರಪ್ರತಿಷ್ಠಾನ, ಜನಮತ ಮತ್ತು ಅಹಿಂದ ಸಂಘಟನೆಗಳು ಸೇರಿವೆ. ಇಂತಹ ಒಂದು ಒಕ್ಕೂಟವನ್ನು ಸ್ವಾಗತಿಸಿರುವ ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಒಕ್ಕೂಟದ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ ಎಂದು ಸಂಚಾಲಕರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಈ ಒಕ್ಕೂಟದಲ್ಲಿ ಖ್ಯಾತ ಲೇಖಕರಾದ ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ, ಕೆ.ರಾಮದಾಸ್, ಕಡಿದಾಳ ಶಾಮಣ್ಣ, ದು.ಸರಸ್ವತಿ, ಲೋಲಾಕ್ಷ, ಆರ್.ಪಿ.ವೆಂಕಟೇಶಮೂರ್ತಿ ಹಾಗೂ ಕಾಗೋಡು ಸತ್ಯಾಗ್ರಹದ ನಾಯಕ ಗಣಪತಿಯಪ್ಪ ಮುಂತಾದವರಿದ್ದು ಪ್ರೊ.ರವಿಕುಮಾರ್‌ವರ್ಮ ಸಂಚಾಲಕರಾಗಿದ್ದಾರೆ.

ಪ್ರಸ್ತುತ ರಾಜ್ಯ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಒಕ್ಕೂಟ ಸ್ವತಃ ಅಭ್ಯರ್ಥಿಗಳನ್ನು ಕಣಕ್ಕಿಳಿಸದಿದದರೂ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸುವ ನಿಟ್ಟಿನಲ್ಲಿ ಜಾತ್ಯಾತೀತ ಮತಗಳನ್ನು ರೂಪಿಸಲು ಒಕ್ಕೂಟ ಹೋರಾಡಲಿದೆ ಎಂದು ಒಕ್ಕೂಟ ತಿಳಿಸಿದೆ. ಈ ಒಕ್ಕೂಟದ ಕೆಲವು ಸಹಭಾಗಿ ಸಂಘಟನೆಗಳು ಚುನಾವಣೆಯಲ್ಲಿ ಸ್ಪರ್ಧಿಸಲಿದ್ದು ಅವು ಪರಸ್ಪರ ವಿರುದ್ಧ ಸ್ಪರ್ಧೆಗಿಳಿದಂತೆ ಒಕ್ಕೂಟ ಕಾರ್ಯಯೋಜನೆ ರೂಪಿಸಿ ಹಾಗೂ ಈ ಅಭ್ಯರ್ಥಿಗಳಿಗೆ ಸಹಮನಸ್ಕ ಸಂಘಟನೆಗಳ ಸಂಪೂರ್ಣ ಬೆಂಬಲ ಒಗ್ಗೂಡಿಸಲಿದೆ ಎಂದು ಪ್ರೊ.ರವಿಕುಮಾರ್‌ವರ್ಮ ಘೋಷಿಸಿದರು.

ಈ ಮೂಲಕ ಕರ್ನಾಟಕ ಚಳುವಳಿ ರಾಜಕಾರಣದ ಹೊಸ ಮಜಲನ್ನು 'ಕರ್ನಾಟಕ ಜನಪರ ಚಳುವಳಿಗಳ ಒಕ್ಕೂಟ' ಉದ್ಘಾಟಿಸಲಿದೆ. ಜೊತೆಗೆ ಹಾಲಿ ಸರ್ಕಾರಗಳ ರೈತ ವಿರೋಧಿ, ಕಾರ್ಮಿಕವಿರೋಧಿ, ದಲಿತ ವಿರೋಧಿ ನೀತಿಗಳ ವಿರುದ್ಧ, ಮತೀಯವಾದ ಮತ್ತು ಜಾಗತೀಕರಣದ ವಿರುದ್ಧ ವ್ಯಾಪಕ ಜನಾಂದೋಲನ ರೂಪಿಸುವ ಮೂಲಕ ಚಳುವಳಿ ರಾಜಕಾರಣಕ್ಕೆ ಹೊಸ ಸಂಘಟಿತ ದಿಕ್ಕು ನೀಡುತ್ತಲೇ ಜನದನಿಗೆ ಹೊಸಬಲ ಹಾಗೂ ಚೈತನ್ಯ ತರುವ ಮಹದುದ್ದೇಶವನ್ನು ಒಕ್ಕೂಟ ಹೊಂದಿದೆ.

ಮಾರ್ಚ್ 11 ರಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರೊ.ರವಿಕುಮಾರ್‌ವರ್ಮ, ಜಿ.ಎನ್.ನಾಗರಾಜ್, ಸಿದ್ದನಗೌಡ ಪಾಟೀಲ, ಕೆ.ಎಸ್.ಪುಟ್ಟಣ್ಣಯ್ಯ, ಅಗ್ನಿ ಶ್ರೀಧರ ಕಡಿದಾಳ ಶಾಮಣ್ಣ, ಸ್ವಾತಂತ್ರ್ಯ ಹೋರಾಟಗಾರ ಗಣಪತಯಪ್ಪ, ಕೋಡಿಹಳ್ಳಿ ಚಂದ್ರಶೇಖರ್, ಬಸವರಾಜಪ್ಪ, ವೆಂಕಟಸ್ವಾಮಿ ಲೋಲಾಕ್ಷ ಮೊದಲಾದವರು ಮಾತನಾಡಿ ಈ ಒಕ್ಕೂಟ ಹೊಸ ಮೌಲ್ಯ, ಹೊಸ ಸೃಷ್ಟಿಗಾಗಿ ಶ್ರಮಿಸಲಿದೆ ಎಂದು ಘೋಷಿಸಿದ್ದಾರೆ.

ತುಳಿದವರು

ತಲೆ ತಲಾಂತರದಿಂದ ಕೆಳವರ್ಗವನ್ನು
ತುಳಿಯುತ್ತ ಮಾಡುತ್ತ ಬಂದಿಹರೊ ಮಣ್ಣು
ಇಂಥಹಾ ಕೋಮು ಕುಲಿ ಎಂಬವರ ಕೈಲಿ
ಕೈ ಮುಗಿವೆ ಕೊಡಬೇಡಿ ಅಧಿಕಾರ ಕೀಲಿ.

- ವಿಡಂಬಾರಿ

'ಪ್ರೀತಿ ಹಂಚೋಣ ಬನ್ನಿ' ಸೌಹಾರ್ದ ಜಾಥಾ

ತುಮಕೂರಿನಲ್ಲಿ ಎಲ್ಲ ಪ್ರಗತಿಪರ ಜನಪದ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ಮಾಹಾತ್ಮಾ ಗಾಂಧಿ ಹುತಾತ್ಮ ದಿನವಾದ ಜನವರಿ 30ರಂದು 'ಪ್ರೀತಿ ಹಂಚೋಣ ಬನ್ನಿ' ಎನ್ನುವಂತಹ ಸೌಹಾರ್ದ ಜಾಥಾ ಕಾರ್ಯಕ್ರಮ ನಡೆಯಿತು.

ಮನುಷ್ಯ ದ್ವೇಷವನ್ನು ಹಬ್ಬಿಸುತ್ತಿರುವಂತಹ ಕೋಮುವಾದಿಗಳು ಗಾಂಧೀಜಿಯವರ ಕೊನೆಯನ್ನು ಬಹಿರಂಗವಾಗಿ ಸಮರ್ಥಿಸಿಕೊಳ್ಳಲು ಹೊರಟಿದ್ದಾರೆ. ಈ ಸಂದರ್ಭದಲ್ಲಿ ತಿನ್ನಲು ಅನ್ನವಿಲ್ಲದೆ, ದುಡಿಯಲು ಕೈಗೆ ಕೆಲಸವಿಲ್ಲದೇ, ನಿರುದ್ಯೋಗಿಗಳಾಗಿರುವಂತಹ ಯುವ ಜನತೆಯಲ್ಲಿ ಕೋಮು ದ್ವೇಷದ ಭಾವನೆಗಳನ್ನು ಬೆಳೆಸಿ ತಮ್ಮ ರಾಜಕೀಯದ ಬೇಳೆ ಬೇಯಿಸಿಕೊಳ್ಳಲು ಹೊರಟಿರುವಂತಹ ಕೋಮು ಶಕ್ತಿಗಳಿಗೆ ಎಚ್ಚರಿಕೆ ನೀಡಲಿಕ್ಕಾಗಿ ಅಲ್ಲದೆ ಈ ಕೋಮುವಾದಿ ಶಕ್ತಿಗಳ ನೀತಿಗಳ ಬಗ್ಗೆ ಎಚ್ಚರದಿಂದಿರುವಂತೆ ಸಂದೇಶವನ್ನು ಸಾರುವಂತಹ ನಾವೆಲ್ಲ ಮಾನವರಾಗೋಣ ಎಂಬುದಾಗಿ ಬೀದಿ ನಾಟಕಗಳನ್ನು ಸೌಹಾರ್ದ ಗೀತೆಗಳನ್ನೊಳಗೊಂಡಂತೆ ಕೋಮು ಸೌಹಾರ್ದತಾ ಜಾಥಾ ನಡೆಯಿತು.

ಈ ಜಾಥಾದಲ್ಲಿ ಕೋಮು ಸೌಹಾರ್ದತೆಯನ್ನು ಬಿಂಬಿಸುವಂತಹ ಪ್ರದರ್ಶನ ನಗರದ ಪ್ರಮುಖ ಬಡಾವಣೆಗಳಲ್ಲಿ ಮಾಡಲಾಯಿತು. ಸ್ನೇಹ ಕಲಾತಂಡದ ವತಿಯಿಂದ ಸೌಹಾರ್ದ ಗೀತೆಗಳನ್ನು ಹಾಡಲಾಯಿತು. ಈ ಜಾಥಾದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ), ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್ಎಫ್ಐ), ಭಾರತ ಜ್ಞಾನ ವಿಜ್ಞಾನ ಸಮಿತಿ (ಬಿ.ಜಿ.ವಿ.ಎಸ್.), ಕೋಮುಸೌಹಾರ್ದತಾ ವೇದಿಕೆ, ತುಮಕೂರು ಕೊಳಗೇರಿ ನಿವಾಸಿಗಳ ಹಿತರಕ್ಷಣಾ ವೇದಿಕೆ, ಜಿಲ್ಲಾ ಸಮಿತಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿ.ಐ.ಟಿ.ಯು) ಅಲ್ಲದೆ ಹಲವು ಜನಪರ ಸಂಘಟನೆಗಳು ಈ ಜಾಥಾದಲ್ಲಿ ಭಾಗವಹಿಸಿದ್ದವು.

ಭಾರತ ಪ್ರಕಾಶಿಸುತ್ತಿದೆ, ಉದಯವಾಗ್ತಾ ಇದೆ, ಮಜಾ ಆಗ್ತಿದೆ ಎಂಬ ಭಾರೀ ಪ್ರಚಾರದ ಸತ್ಯಾಸತ್ಯತೆ ತಿಳಿಯಲು ದುಡಿವ ಜನರ ಪ್ರಾಣಮಿತ್ರ ಬಯಸಿತು. ಎಷ್ಟೊತ್ತಿಗಾದರೂ ಎಲ್ಲೆಂದರಲ್ಲಿ ನುಗ್ಗಿ, ವಿಷಯಗಳ ಜಾತಕ ಜೋಡಿ ಸಂಗತಿಗಳ ಮೂಲಕ ಹುಡುಕಿ ತೆಗೆದಿಡುವಲ್ಲಿ ನಿಸ್ಸೀಮರಾದ ನಮ್ಮ ಹಿರಿಯ ವರದಿಗಾರ ನಕ್ಷತ್ರಕನಿಗೆ ರಕ್ಷಣೆ ವಹಿಸಿದೆವು. ಬಹುತೇಕ ವಿದೇಶಗಳಲ್ಲಿ ಸುತ್ತಾಡಿ, ಸುದ್ದಿ ಮೂಲ ಹುಡುಕುವ ನಕ್ಷತ್ರಕ ಈ ಬಾರಿ ಸ್ವದೇಶದ ತಾಜಾ ವರದಿ ನೀಡಿದ್ದಾನೆ. ಮೂರು ಥರದ ಜನರು ಏನೇನು ಹೇಳುತ್ತಿದ್ದಾರೆ?

ನಮ್ಮ ಟಿವಿ- ಪತ್ರಿಕೆಗಳಲ್ಲಿ ಜಾಹಿರಾತುಗಳನ್ನು ನೋಡಿ, ಕೇಳಿ ನಮಗೂ 'ಭಾರತ ಪ್ರಕಾಶಿಸುತ್ತಿದೆ', "ಎಲ್ಲರಿಗೂ ಮಜಾ ಆಗುತ್ತಿದೆ" - ಎಂಬ ಅನುಮಾನ ಬಂತು. ನಮ್ಮ ವಿಶೇಷ ವರದಿಗಾರ ನಕ್ಷತ್ರಕನನ್ನು ಸಂದರ್ಶನ ಮಾಡಿ ತಿಳಕೊಂಡು ಬಾ ಎಂದು ಕಳಿಸಿದೆವು. ಅವನು ಮೂವರನ್ನು ಸಂದರ್ಶನ ಮಾಡಿ ಬಂದು, ಸಾರ್.... ನನಗೂ ಈಗ ಮಜಾ ಆಗುತ್ತಿದೆ' ಅಂತಾನೆ! ಯಾಕೆ ಅಂತ ನಮಗೆ ಗೊತ್ತಾಗಲಿಲ್ಲ. ಅವನ ಸಂದರ್ಶನಗಳನ್ನು ಯಾವ ರೀತಿ ಅರ್ಥೈಸುವುದು ಅಂತ ಒದ್ದಾಡ್ತಾ ಇದ್ದೀವಿ. ಓದಿ ನಿಮಗೆ ಗೊತ್ತಾದರೆ, ನಿಮಗೂ 'ಮಜಾ' ಆದರೆ.... ಬರೆದು ತಿಳಿಸಿ!

ಭಾರತ ಪ್ರಕಾಶಿಸುತ್ತಿದೆ.... ನನಗೂ ಮಜಾ ಆಗ್ತಿದೆ!

"ಅಕ್ಕಿ ಬೆಲೆ ಜಾಸ್ತಿ ಆದ್ರೆ, ಪಿಜ್ಜಾಹಟ್'ಗೆ ಹೋಗಿ....."

ಮೊದಲಿಗೆ ನಾನು ವರುಣ ಪಾಟೀಲ ಎಂಬುವವರನ್ನು ಸಂದರ್ಶಿಸಿದೆ. ವರುಣ ಇನ್ಫೋಸಿಸ್ ಕಂಪನಿಯಲ್ಲಿ ಕೆಲಸ ಮಾಡುವ ಐಟಿ ಕಂಪ್ಯೂಟರ್ ಇಂಜನೀಯರು.

ನಕ್ಷತ್ರಕ : ಟಿವಿ ಪತ್ರಿಕೆಗಳಲ್ಲಿ 'ಭಾರತ ಪ್ರಕಾಶಿಸುತ್ತಿದೆ', "ಎಲ್ಲರಿಗೂ ಮಜಾ ಆಗುತ್ತಿದೆ" ಅಂತಾರೆ. ನಿಮಗೇನನ್ನಿಸುತ್ತಿದೆ?


ವರುಣ : ಖಂಡಿತವಾಗಿಯೂ ನಿಜ. ಇಲ್ಲಿ ನಮ್ಮ ಆಫೀಸಿನಲ್ಲಿ ಲೈಟು ಆರಿಸುವುದೇ ಇಲ್ಲ. 24 ಗಂಟೆ ಲೈಟು ಉರೀತಾ ಇರ್ತದೆ. ಮನೆಯಲ್ಲೂ ನಾನು ಲೈಟು ಆರಿಸುವುದೇ ಇಲ್ಲ.

ನ : ಲೈಟು ಉರಿಯುವುದರ ಬಗ್ಗೆ ನಾನು ಕೇಳ್ತಾ ಇಲ್ಲ.

ವರುಣ: ಬೆಳಿಗ್ಗೆ ಕೆಲಸ ಇಲ್ಲದೆ ಬೋರಾಗ್ತಾ ಇತ್ತು. ಜಿಮ್‌ಗೆ ಹೋಗಿ ಆಡಿದೆ. 'ಪಿಜ್ಜಾ' ತಿಂದು ಬಂದೆ. ಈಗ ಭಾರಿ ಮಜಾ ಅನ್ನಿಸ್ತಿದೆ. ಆಫೀಸಿನಲ್ಲಿ ಮಜಾ. ಸಂಜೆ ಬೀರು-ಬಾರು-ಡಿಸ್ಕೊ ಮಜಾವೋ ಮಜಾ.

ನ: ಅದಲ್ಲ ಕೇಳಿದ್ದು ನಾನು.. ಕಳೆದ ಐದು ವರ್ಷಗಳಲ್ಲಿ ದೇಶ ಪ್ರಗತಿ ಸಾಧಿಸುತ್ತಿದೆಯೆ? ಜನ ಹಿಂದಿಗಿಂತ ಹೆಚ್ಚು ಸುಖವಾಗಿದ್ದಾರೆ? ಅಂತ

ವರುಣ: ಖಂಡಿತ ಈ ಫೋನ್ ವಿಷಯವೇ



ತಗೊಳ್ಳಿ. ನಮ್ಮಪ್ಪ ಹೇಳ್ತಾ ಇದ್ರು. ಹಿಂದೆ ಫೋನು ಸಿಗಲಿಕ್ಕೆ ತಿಂಗಳುಗಟ್ಟಲೆ ಕಾಯ್ಬೇಕಾಗಿತ್ತು. ಮೊಬೈಲ್ ಫೋನ್ ಈಗ ಒಂದು ದಿನದಲ್ಲಿ ಸಿಗ್ತದೆ. ನನಗೆ ಗೊತ್ತಿರುವ ಎಲ್ಲಾರ ಬಳಿ ಫೋನ್ ಇದೆ. ಫೋನ್, ಎಸ್.ಎಂ.ಎಸ್ ಮಾಡಿ ನನಗೆ ಬೆರಳು ನೋವು ಬರ್ತಾ ಇದೆ.

ನ: ದೇಶದ ಹೆಚ್ಚಿನ ಹಳ್ಳಿಗಳ ಕಡೆ ಹೋದ್ರೆ ಲೈನೂ ಇಲ್ಲ, ಮೊಬೈಲ್ ಸಿಗುವುದೂ ಇಲ್ಲ. ಇದ್ದರೂ ಹೆಚ್ಚಿನವರಿಗೆ ಅದನ್ನು ಕೊಳ್ಳಲು ಬೇಕಾದಷ್ಟು ದುಡ್ಡು ಇಲ್ಲ, ಅಕ್ಕಿ, ನೀರು ಅವರ ಮೊದಲ ಆದ್ಯತೆ....

ವರುಣ: ಹಳ್ಳಿಗಳಲ್ಲಿ ಇಲ್ಲದಿದ್ದರೆ ಅವರು ಬೆಂಗಳೂರಿಗೆ ಬಂದು ಬಿಡಬಹುದಲ್ಲ! ಮೊಬೈಲ್ ಫೋನು ಇಲ್ಲದೆ ಹೆಂಗೆ ಬದುಕುತ್ತಾರೋ? ನನಗಂತೂ ಊಟ ಇಲ್ಲದೆ ಇದ್ರೂ ಪರವಾಗಿಲ್ಲಾ, ಮೊಬೈಲ್, ಎಸ್.ಎಂ.ಎಸ್ ಇಲ್ಲದಿದ್ರೆ ಬದುಕಲಿಕ್ಕೆ ಸಾಧ್ಯವೇ ಇಲ್ಲ.

ನ: ಸರಿ ಬಿಡಿ.. ದೇಶದ ಆರ್ಥಿಕ ಐದು ವರ್ಷಗಳಲ್ಲಿ ಉತ್ತಮ ಆಗಿದೆ ಅಂತಿರಾ?

ವ: ಖಂಡಿತ. ಶೇರು ಮಾರುಕಟ್ಟೆ ನೋಡಿ. ಇನ್ಫೋಸಿಸ್ ಶೇರು ಬೆಲೆ ನೋಡಿ, ಹೇಗೆ ಏರ್ತಾ ಇದೆ. ರಿಲೆಯನ್ಸ್ - ಅಂಬಾನಿ ಗುಂಪು ಎಷ್ಟು ವೇಗವಾಗಿ ಬೆಳೆದಿದೆ ನೋಡಿ. ಟಾಟಾನ್ನ ಹಿಂದೆ ಹಾಕಿ ನಂಬರ್ ವನ್ ಆಗಿಬಿಟ್ಟಿದ್ದಾರೆ. ಎಲ್ಲಾ ಕಂಪನಿಗಳ ಲಾಭ ನಾಗಾಲೋಟದಿಂದ ಏರ್ತಾ ಇದೆ.

ನ: ಆದರೆ ಎರಡು ಕೋಟಿ ಸಣ್ಣ - ಉದ್ಯಮ, ಕಾರ್ಖಾನೆಗಳು ಮುಚ್ಚಿದ್ದಾವೆ. ಐಟಿ ಬಿಟ್ರರೆ ಬೇರೆ ಯಾವ ಕ್ಷೇತ್ರದಲ್ಲೂ ಕೈಗಾರಿಕಾ ಪ್ರಗತಿ ಕಾಣ್ತಾ ಇಲ್ಲಾ?

ವ : ಐಟಿಯಲ್ಲಿ ಸುಗ್ಗಿ ಬಂದಿದೆ ಸಾಕಲ್ಲ. ಲಾಭ ಇಲ್ಲದ ಕಾರ್ಖಾನೆಗಳು ಮುಚ್ಚಿದರೆ ಒಳ್ಳೇದು.

ನ: ಎಲ್ಲಾ ಜೀವನಾವಶ್ಯಕ ಸರಕುಗಳಾದ ಅಕ್ಕಿ, ಗೋದಿ, ತರಕಾರಿ ಬೆಲೆ, ಮನೆಬಾಡಿಗೆ ಏರ್ತಾ ಇದೆಯಲ್ಲ. ಇದು ಸಮಸ್ಯೆಯಲ್ಲ ಅಂತೀರಾ?

ವ: ಅಕ್ಕಿ, ಬೆಲೆ ಜಾಸ್ತಿ ಆದ್ರೆ 'ಪಿಜ್ಜಾ ಹಟ್'ಗೆ ಹೋಗಿ ಪಿಜ್ಜಾ ತಿಂದ್ರಾಯ್ತು. ಮನೆ ಬಾಡ್ಗೆ ಜಾಸ್ತಿ ಆದ್ರೆ ಸ್ವಂತ ಮನೆ ತಗೊಂಡ್ರಾಯ್ತು. ಸುಲಭವಾಗಿ ಸಾಲ ಕೊಡ್ತಾ ಇದ್ದಾರಲ್ಲ? ಸಂಬಳಾನೂ ಜಾಸ್ತಿ ಆಗ್ತಾ ಇದೆಯಲ್ಲ.

ನ: ಸರಿ ಗೊತ್ತಾಯ್ತು ಬಿಡಿ. ಹಿಂದೆ ಫ್ರಾನ್ಸ್ ರಾಣಿ ಥರ ಹೇಳ್ತಾ ಇದ್ದೀರಾ, ಬಡ ಜನ ಬ್ರೆಡ್ಡು ಇಲ್ಲ ಅಂದ್ರಂತೆ. ರಾಣಿ ಕೇಕ್ ತಿನ್ನಿ ಅಂದ್ಲಂತೆ. ಅದು ಸರಿ. ಅಂದ್ರೆ ನೀವು ಬಿಜೆಪಿಗೆ ಖಂಡಿತ ಓಟಾಕ್ತೀರಿ ಅಂತಾಯ್ತು. ಬಿಜೆಪಿಯವರು ಕಳೆದ ಐದು ವರ್ಷದಲ್ಲಿ ಒಳ್ಳೆ ಸರ್ಕಾರ ಕೊಟ್ಟಿದ್ದಾರೆ ಅಂತೀರಾ...

ವ: ಯಾವ ಬಿಜೆಪಿ...? ಏನು ಓಟು...?

ನ: ಲೋಕಸಭಾ ಚುನಾವಣೆಯನ್ನು ಚುನಾವಣಾ ಕಮಿಶನ್ ನಡೆಸ್ತಾ ಇದೆಯಲ್ಲ. ಏಪ್ರಿಲ್- ಮೇನಲ್ಲಿ, ಕಳೆದ 4½ ವರ್ಷ ಆಳಿದ ಬಿಜೆಪಿಗೆ ಓಟಾಕ್ತೀರಾ ಅಂತ?

ವ: ಬಿಜೆಪಿ ಅಂತ ಒತ್ತಿ ಎಸ್.ಎಂ.ಎಸ್.ನಲ್ಲಿ ಓಟು ಕಳಿಸಬಹುದಾ? ಚುನಾವಣಾ ಕಮಿಶನ್ ಎಸ್.ಎಂ.ಎಸ್.ನ ನಂಬರ್ ಏನು?

ನನಗೆ ಸಖತ್ತು ಮಜಾ ಆಗ್ತಿತ್ತು. ಆಗಲೇ ಮಜಾ ಕಿತ್ತುಕೊಂಡು ಬರ್ತಾ ಇದ್ದ ಹೊಟ್ಟೆ ಹಿಡಕೊಂಡು ಓಟ ಕಿತ್ತೆ - ಮುಂದಿನ ಸಂದರ್ಶನಕ್ಕೆ.

ನಕ್ಷತ್ರಕ
ಮಾರ್ಚ್ 11

"ಏನ್ ಬದ್ನೆಕಾಯಿ ಪ್ರಕಾಸ... ಕರೆಂಟು ಇದ್ರೆ ತಾನೆ?

ಇನ್ಫೋಸಿಸ್ ಇಂಜನೀಯರ್ ವರುಣ ಪಾಟೀಲರ ಜತೆ ಸಂದರ್ಶನದ ನಂತರ ಸುಧಾರಿಸಿಕೊಂಡು, ಮುಂದೆ ಎಲ್ಲಿಗೆ ಹೋಗುವುದು ಅಂತ ಯೋಚಿಸುತ್ತಾ ನಿಂತೆ. ಸಮಾಜದ ಎಲ್ಲಾ ವಿಭಾಗಗಳ ಅಭಿಪ್ರಾಯ ಬೇಕು ಅಂತ ಸಂಪಾದಕರು ಹೇಳಿದ್ದು ನೆನಪಾಯ್ತು. ಮಳವಳ್ಳಿಯ ಕೆಳ-ಮಧ್ಯಮ ವರ್ಗದ ಗೃಹಿಣಿಯನ್ನು ಮಾತಾಡಿಸೋಣ ಅಂತ ಹೊರಟೆ. ಕೆಳ- ಮಧ್ಯಮ ವರ್ಗದ ಗೃಹಿಣಿಯನ್ನು ಹುಡುಕಿ ಸೀಮೆ ಎಣ್ಣೆ ಅಂಗಡಿಯಲ್ಲಿ ಕ್ಯೂ ನಿಂತಿದ್ದ ಮಹಿಳೆಯನ್ನು ಮಾತನಾಡಿಸಿದೆ.

ನಕ್ಷತ್ರಕ : ನಾನು ನಕ್ಷತ್ರಕ ಅಂತ. ಐಕ್ಯರಂಗ ಎಂಬ ವಾರಪತ್ರಿಕೆಯ ವಿಶೇಷ ವರದಿಗಾರ. ಓಟು ಬರ್ತಾ ಇದೆಯಲ್ಲ. ಆ ಬಗ್ಗೆ ನಿಮ್ಮ ಅಭಿಪ್ರಾಯ ತಿಳಕೊಳ್ಳುವಾ ಅಂತ. ನಿಮ್ಮ ಹೆಸರು?

ಮಹಿಳೆ: ಜಯಲಕ್ಷ್ಮಿ ಅಂತ. ನೀವು ಜಾಹೀರಾತು ಕಂಪನಿಯವರಲ್ಲ ತಾನೆ? ತಿಂಗಳ ಹಿಂದೆ ಯಾರೋ ಅಡ್ವರ್ಟೈಜ್ ಕಂಪನಿಯವರು ನಯವಾಗಿ ಮಾತಾಡ್ಸಿ ನನ್ನ ಫೋಟೋ ತೆಕ್ಕೊಂಡು ಹೋದ್ರು. ಆಮೇಲೆ ನೋಡ್ತೀನಿ. ನನ್ನ ಫೋಟೋ ಹಾಕ್ಬಿಟ್ಟು ನಾನು ಹೇಳದೆ ಇದ್ದದ್ದೆಲ್ಲಾ, ನಾನು ಹೇಳಿದ್ದು ಅಂತ ಪೇಪರಲ್ಲಿ ಹಾಕವ್ರೆ. ನೀವು ಹಾಗೆ ಮಾಡಲ್ಲ ತಾನೆ?

ನ: ಇಲ್ಲ ಖಂಡಿತಾ ಇಲ್ಲ. ಕೆಲವು ಪ್ರಶ್ನೆ ಕೇಳ್ತೀನಿ. ನಿಮ್ಮ ಉತ್ತರವನ್ನು ಹಾಗೇ ಹಾಕ್ತೀನಿ. ನಿಮ್ಮ ಫೋಟೋನೂ ತೆಗೆಯಲ್ಲ. ಹೇಗಿದ್ರೂ ಎಲ್ಲಾ ಪೇಪರಲ್ಲಿ ಬಂದ್ಬಿಟ್ಟಿದೆಯಲ್ಲಾ? ಈಗ ಪ್ರಶ್ನೆ ಕೇಳ್ಲಾ?

ಜಯಲಕ್ಷ್ಮಿ : ಕೇಳ್ಕಳಿ. ಪರ್ವಾಗಿಲ್ಲ.

ನ: ನಿಮಗೆ ಮಜಾ ಆಗ್ತಿದೆಯಾ?


ಜ: ಏನ್ರಿ? ಓಟಿನ ಬಗ್ಗೆ ಕೇಳ್ತೀನಿ ಅಂತ ಹೇಳಿ ರೇಗಿಸ್ತಾ ಇದ್ದೀರಾ? (ಅಂತ .... ಕೈಯಲ್ಲಿ ತೆಗೆದುಕೊಂಡಳು)

ನ: ನೀವು ನನ್ನನ್ನು ತಪ್ಪರ್ಥ ಮಾಡಿಕೊಂಡಿರಿ. ಸರ್ಕಾರದವ್ರು ಎಲ್ಲಾ ಕಡೆ "ಭಾರತ ಪ್ರಕಾಶಿಸುತ್ತಿದೆ", ಎಲ್ಲರಿಗೂ ಮಜಾ ಆಗ್ತಿದೆ' ಅಂತ ಹೇಳ್ತಾ ಇದ್ದಾರಲ್ಲ. ಅದು ನಿಜವಾ ಅಂತ ತಿಳಕೊಂಡು ಬಾ ಅಂತ ನಮ್ಮ ಸಂಪಾದಕರು ಹೇಳಿದ್ದಾರೆ. 'ಭಾರತ ಪ್ರಕಾಶಿಸುತ್ತಿದೆ' ಅಂತೀರಾ ನೀವು?

ಜ: ಏನು ಬದ್ನೆಕಾಯಿ ಪ್ರಕಾಸ.... ಕರೆಂಟ್ ಇದ್ರೆ ತಾನೆ ನಮ್ಮ ಮನೇಲಿ. ಕರೆಂಟೇ ಇಲ್ಲ. ನಮ್ಮೂರಲ್ಲಿ ಕರೆಂಟ್ ಇದ್ದವರ ಮನೇಲೂ ಪ್ರಕಾಸ ಅಪರೂಪವೇಯ ದಿನದಲ್ಲಿ ಮೂರು ಗಂಟೆ ಕರೆಂಟು ಇದ್ರೆ ಹೆಚ್ಚು.

ನ: ದೇಶದಲ್ಲಿ ಏನೂ ಪ್ರಗತಿ ಆಗ್ಲಿಲ್ಲ ಅಂತಿರಾ? ಒಟ್ಟು ಆರ್ಥಿಕ ಉತ್ಪನ್ನ ಶೇಕಡಾ 8.3 ದರದಲ್ಲಿ ಏರಿದೆ ಈ ವರ್ಷ. ವಿಜ್ಞಾನ ತಂತ್ರಜ್ಞಾನದಲ್ಲಿ ಅಗಾಧ ಪ್ರಗತಿ ಆಗಿದೆ. 'ಅಗ್ನಿ' ರಾಕೆಟ್ ತಯಾರಿಸಿದ್ದೀವಿ. ಅಣುಬಾಂಬು ಮಾಡಿ ಎಲ್ಲರಿಗೂ ದಿಗಿಲು ಮಾಡಿದ್ದೀವಿ....

ಜ: ರಾಕೆಟು- ಬಾಂಬು ತೆಕ್ಕೊಂಡು ಏನು ಮಾಡೋದಣ್ಣೋ. ತಿನ್ನೋದಕಾಯ್ತದಾ? ತಿನ್ನದ್ರ ಬೆಲೆ ಎಲ್ಲಾ ಏರಿ, ಕೈಗೆ ನಿಲುಕ್ತಾ ಇಲ್ಲ. ರೇಶನ್ ಅಕ್ಕಿ ಬೆಲೆ ಕೆ.ಜಿ.ಗೆ 5 ರೂ 90 ಪೈಸೆ ಇತ್ತು, ಐದು ವರ್ಷದ ಹಿಂದೆ. ಈಗ 11 ರೂ. 80 ಪೈಸೆ ಆಗಿದೆ. ಡಬ್ಬಲ್ ಆಗೋಯ್ತು.



ನ: ಬಡವರಿಗೆ ಕಮ್ಮಿಯಲ್ಲಿ ಕೊಡ್ತಾರಲ್ಲ.

ಜ: ಏನು ಕಮ್ಮಿ, ಬಡವರ ರೇಟು ಕೆ.ಜಿ.ಗೆ 3 ರೂ. 50 ಪೈಸೆ ಇತ್ತು. ಈಗ ಅದನ್ನು ಕೆ.ಜಿ.ಗೆ 5 ರೂ 90 ಪೈಸೆಗೆ ಏರಿಸಿದ್ದಾರೆ. ಮೊದ್ಲು ಎಲ್ಲರಿಗೂ ಒಂದೇ ರೇಟಿತ್ತು. ಆಮೇಲೆ ಬಡವರು, ಬೇರೆಯವರು ಅಂತ ಹೆಸರಲ್ಲಿ ರೇಟು ಹೆಚ್ಚಿಸಿದ್ರು. ನಾವೆಲ್ಲಾ ಬಡವರಲ್ಲಾ ಅಂತ ತೀರ್ಮಾನ ಮಾಡ್ಬಿಟ್ರು. ಯಾರು ಬಡವರು ಅಂತ ಇನ್ನೂ ತೀರ್ಮಾನ ಮಾಡಿಲ್ಲ, ಒಟ್ಟಾರೆ ರೇಶನ್ ಅಕ್ಕಿ ಸಾಕಷ್ಟು ಸ್ವಲ್ಪ ಕಡಿಮೆ ಬೆಲೆಯಲ್ಲಿ ಸಿಕ್ಕಿ, ಸ್ವಲ್ಪ ಅನುಕೂಲ ಆಗ್ತಿತ್ತು, ಅದಕ್ಕೂ ಕಲ್ಲು ಹಾಕಿದ್ರು.



ನ: ಹಂಗಂದ್ರೆ "ಎಲ್ಲರಿಗೂ ಮಜಾ ಆಗ್ತಿದೆ" ಅಂತ ಸರ್ಕಾರದವರು ಹೇಳೋದು ಸರಿ ಇಲ್ಲ ಅಂತೀರಾ?

ಜ: ಇಲ್ಲ, ನನಗೆ ಈಗ ಸ್ವಲ್ಪ ಮಜಾ ಬರ್ಲಿಕ್ಕೆ ಶುರುವಾಗಿದೆ.

ನ: ಆಂ! ಅದು ಹೇಗೆ? ನೀವು ಕ್ಯೂ ನಿಂತಿರುವ ಸೀಮೆ ಎಣ್ಣೆ ಲೀಟರಿಗೆ 2 ರೂ 58 ಪೈಸೆ ಇದ್ದಿದ್ದು, ಐದು ವರ್ಷದಲ್ಲಿ, 9 ರೂ. 2 ಪೈಸೆ ಆಗಿದೆ. ಆದರೂ ಮಜಾ ಆಗುತ್ತೆ ಅಂತೀರಾ?

ಜ: ಓಟಿನ ನಂತರ ಸೀಮೆ ಎಣ್ಣೆಗೆ ಲೀಟರಿಗೆ 15 ರೂ. ಆಗ್ತದೆ ಅಂತ ಜನ ಹೇಳ್ತಿದ್ದಾರೆ. ಅಷ್ಟರವರೆಗೆ ಸೀಮೆ ಎಣ್ಣೆ 3 ರೂ.ನಲ್ಲಿ ಸಿಗುತ್ತಲ್ಲಾ.. ಮಜಾ ಆಗಲ್ವಾ?

ನಾನು ಅರ್ಧ ಗಾಬರಿ, ಅರ್ಧ ಮಜಾ ತಡೆದುಕೊಳ್ಳಲಾರದೆ ಅಲ್ಲಿಂದ ಕಾಲ್ತೆಗೆದೆ.

ನಕ್ಷತ್ರಕ
ಮಾರ್ಚ್ 12

ಭಯಂಕರ ಮಜಾ ಬರ್‍ತೈತ್ರಿ

ಜಯಲಕ್ಷ್ಮಿ ಜತೆ ಸಂದರ್ಶನ ನಂತರ ಯೋಚಿಸುತ್ತಾ ನಿಂತೆ. ಮುಂದೆ ಯಾರ ಸಂದರ್ಶನ ಮಾಡುವುದು. ಮೊದಲು 'ಪ್ರಕಾಶಿಸುತ್ತಿದೆ' ಪ್ರಶ್ನೆ ಕೇಳುವುದಾ? ಅಥವಾ 'ಮಜಾ' ಪ್ರಶ್ನೆ ಕೇಳುವುದಾ? ಒಬ್ಬ ರೈತನ ಸಂದರ್ಶನ ಮಾಡಿದರೆ ಚೆನ್ನ ಅಂತ, ಹಗರಿಬೊಮ್ಮನ ಹಳ್ಳಿಗೆ ಹೊರಟೆ. ಅಲ್ಲಿ ಒಬ್ಬ ರೈತನನ್ನು ಭೇಟಿ ಮಾಡಿದೆ.

ನಕ್ಷತ್ರಕ : ನಮಸ್ಕಾರ. ನಾನು ನಿಮ್ಮ ಜತೆ ಓಟಿನ ಬಗ್ಗೆ ಸಂದರ್ಶನ ಮಾಡಕ್ಕೆ ಬಂದಿದ್ದೀನಿ. ಕೆಲವು ಪ್ರಶ್ನೆ ಕೇಳಬಹುದಾ?

ರೈತ : ಹೇಳ್ರಿ..

ನ: ನಿಮ್ಮ ಹೆಸರೇನು?

ರೈ: ಚನ್ನಪ್ಪ ಅಂತ್ರೀ

ನ: ಸರ್ಕಾರದವ್ರು 'ಭಾರತ ಪ್ರಕಾಶಿಸುತ್ತಿದೆ' ಅಂತಾರಲ್ಲ, ನಿಮಗೆ ಏನನಿಸ್ತದೆ?

ಚ: ಅದು ಬಿಡ್ರಿ ... ನೀವು ಯಾವೂರ ಪೇಪರ್‌ನೋರು? ಎಲ್ಲಾರೂ ಕೇಳೋದು ಮಜಾ ಬರ್‍ತಿದೆಯಾ ಅಂತ... ಅದನ್ನ ಕೇಳ್ರಿ!

ನ: ಮಜಾ ಬರ್‍ತಿದೆಯಾ?

ಚ: ಹೂನ್ರಿ. ಭಯಂಕರ ಮಜಾ ಬರ್ತಿದೇರಿ. ಹಂಗ ಹೇಳಿದ್ರಿಂದ ನನ್ನ ಫೋಟೋ ಪೇಪರ್ನಲ್ಲಿ ಬಂದೇತ್ರಿ.

ನ: ಅದ ಹೇಗ್ರೀ.. ಕಳೆದ ಐದು ವರ್ಷಗಳಲ್ಲಿ ರೈತನಿಗೆ ಭಾಳ ಕಷ್ಟ ಅಂತ ಕೇಳಿದ್ದೆ. ನೂರಾರು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತ ಬೇಸಾಯಕ್ಕೆ ಬಳಸುವ ಎಲ್ಲಾದರ ಬೆಲೆ ಏರಿದೆ. ರೈತನ ಬೆಳೆಗೆ ಬೆಲೆ ಮಾತ್ರ ಕುಸಿದಿದೆ.

ಚ: ಯೂರಿಯಾ ಬೆಲೆ ಟನ್‌ಗೆ ರೂ.3680 ಇದ್ದಿದ್ದು. ಐದು ವರ್ಷಗಳಲ್ಲಿ 4830 ರೂ.ಗೆ ಏರಿದೆ. ಡೀಸೆಲ್ ಬೆಲೆ ಲೀಟರಿಗೆ 10 ರೂ.ಇದ್ದದ್ದು 21 ರೂ. 73 ಪೈಸೆ ಆಗಿದೆ.

ನ: ವಿದ್ಯುತ್ ಬೆಲೆ ಹೆಚ್ಚು ಕಡಿಮೆ ಡಬಲ್ ಆಗಿದೆ.

ಚ : ನಮಗೆ ಇರುವ ಎಲ್ಲಾ ಸಬ್ಸಿಡಿ ಕಿತ್ತು ಹಾಕಿದ್ದಾರೆ. ಸಾಲದ್ದಕ್ಕೆ ಯುರೋಪ, ಅಮೇರಿಕ ಕೃಷಿ ಉತ್ಪನ್ನ ಬಂದು ಇಲ್ಲಿ ಬೀಳ್ತಾ ಇದೇರಿ. ನಮ್ಮ ಬೆಳೆಗೆ ಅದರಿಂದ ಬೆಲೆನೇ ಬರ್ತಾ ಇಲ್ರೀ.

ನ: ಆಂ.. ಹಾಗಾದರೆ ನಿಮಗೆ ಹೇಗೆ ಮಜಾ ಬರ್‍ತಿದೆ?

ಚ : ಅಲ್ಲೇ ಇರೋದು ಮಜಾ.. ಏಪ್ರಿಲ್‌ನಲ್ಲಿ ಓಟು ಬರ್‍ತೇವೋ ಇಲ್ವೊ?

ನ: ಓಟು ಎಂದ್ರೆ ನಿಮಗೆ ಮಜಾ ಬರುತ್ತಾ?

ಚ : ರೈತನಿಗೆ ತೊಂದ್ರೆ ಮಾಡಿದ ಸರ್ಕಾರಗಳನ್ನು ಮನಿಗೆ ಕಳಿಸಕ್ಕ ಛಾನ್ಸು ಸಿಗ್ತೋ ಇಲ್ವೋ? ಅದನ್ನ ನೆನ್ಸಿಕೊಂಡು ಮಜಾ ಬರ್‍ತೈತ್ರಿ?

ನಕ್ಷತ್ರಕ
ಮಾರ್ಚ್ 13

ಚುನಾವಣೆಗಳೂ ರಥಯಾತ್ರೆಗಳೂ.....

ಹರ್ಕಿಶನ್ ಸಿಂಗ್ ಸುರ್ಜಿತ್



ಕೇಂದ್ರ ಗೃಹಮಂತ್ರಿ - ಕಂ - ಉಪ ಪ್ರಧಾನಮಂತ್ರಿಗಳು, ನಿಸ್ಸಂದೇಹವಾಗಿಯೂ ಬಿಜೆಪಿಯ ನಂಬರ್ ಎರಡು ಆಗಿರುವ ಎಲ್.ಕೆ.ಅಡ್ವಾಣಿಯವರು ಇನ್ನೊಂದು ರಥಯಾತ್ರೆ ಆರಂಭಿಸಿರುವುದರಿಂದ ದೇಶದಲ್ಲಿ ಮತ್ತೆ ಆತಂಕದ ವಾತಾವರಣ ಉಂಟಾಗಿದೆ - ವಿಶೇಷವಾಗಿ ಅಲ್ಪಸಂಖ್ಯಾತರು ಭಯಭೀತರಾಗಿದ್ದಾರೆ.

ಇದಕ್ಕೆ ಕಾರಣ ಸ್ಪಷ್ಟ. ಈಗಾಗಲೇ ಒಂದು ಸುಸಜ್ಜಿತ ಮೋಟಾರು ವಾಹನದಲ್ಲಿ ಆರಂಭವಾಗಿರುವ ರಥಯಾತ್ರೆ ತನ್ನ 33 ದಿನಗಳ ದಾರಿಯುದ್ದಕ್ಕೂ ವಿನಾಶದ, ರಕ್ತಸಿಕ್ತ ಚಿಹ್ನೆಗಳನ್ನು ಬಿಟ್ಟು ಹೋಗಲಿದೆ. ಈ ತೀವ್ರಗಾಮಿಯೆನಿಸಿಕೊಂಡಿರುವ ಬಿಜೆಪಿ ಮುಖಂಡರ ಹಿಂದಿನ ರಥಯಾತ್ರೆಗಳಲ್ಲಿ ಕಂಡದ್ದು ಅದನ್ನೇ. ಬಿಜೆಪಿ ಅಧಿಕೃತವಾಗಿ ಒಪ್ಪಿಕೊಳ್ಳದ (ಏಕೆಂದರೆ ಅವು ಠುಸ್ಸೆಂದವು) ಎರಡು ಯಾತ್ರೆಗಳನ್ನು ಬಿಟ್ಟರೆ ಇದು ಅಡ್ವಾಣಿಯವರ ಮೂರನೇ ರಥಯಾತ್ರೆ. ಈ ಎರಡೂ ಯಾತ್ರೆಗಳಲ್ಲಿ ಅದು ಹಾದುಹೋದ ದೊಡ್ಡ ನಗರ, ಪಟ್ಟಣಗಳೆಲ್ಲೆಲ್ಲಾ ಕೋಮುಗಲಭೆಗಳು, ಬಿಗುವಾತಾವರಣವನ್ನು ಸೃಷ್ಟಿಸಿದವು. ಅಲ್ಲದೆ ಸ್ವತಃ ಅಡ್ವಾಣಿಯವರೇ ಈ ಯಾತ್ರೆಗೂ ಹಿಂದಿನ ಎರಡು ಯಾತ್ರೆಗಳಿಗೂ ಸಹಜ ಸಂಬಂಧವಿದೆ ಎಂದು ಒಪ್ಪಿಕೊಂಡಿದ್ದಾರೆ. ಜನಸಮೂಹಗಳೂ ಕೂಡಾ ಹೀಗೇ ಭಾವಿಸುತ್ತಾರೆ. ಹಿಂದಿನ ಯಾತ್ರೆಗಳು ಮುಗ್ಧ ಜನಗಳ ಕೊಲೆ, ಸುಲಿಗೆಗಳಿಗೆ ಕುಖ್ಯಾತ ವಾಗಿರುವಾಗ ಈಗಿನ ಯಾತ್ರೆ ಭಿನ್ನವಾಗಿರುತ್ತದೆಯೇ ಎಂದು ಅವರು ಕೇಳುತ್ತಿದ್ದಾರೆ.

ಹತಾಶೆಯ ಚಿಹ್ನೆಗಳು

ಬಿಜೆಪಿ ಮುಖಂಡರಿಗೆ ಅದೇಕೋ ರಥಗಳಲ್ಲಿ ಓಡಾಡುವುದೆಂದರೆ ಭಾರಿ ಇಷ್ಟ. ಸಕಲ ವೈಭೋಗಗಳಿಂದ, ಇಲೆಕ್ಟ್ರಾನಿಕ್ ಉಪಕರಣಗಳೂ ಸೇರಿದಂತೆ ಆಧುನಿಕ ಸೌಲಭ್ಯಗಳಿಂದ ಸಜ್ಜಿತವಾದ ಮೋಟಾರು ವಾಹನವನ್ನು ಅವರು ರಥ ಎಂಬ ಪುರಾತನ ನೆನಪಿನ ಹೆಸರು ಕೊಡುತ್ತಾರೆ. ಈ ರಥದ ಹಿಂದೆ ವಾಹನಗಳ ಹಿಂಡೇ ಇರುತ್ತದೆ. ಇದರಲ್ಲಿ ಇರುವವರಲ್ಲಿ ಅನುಯಾಯಿಗಳಿಗಿಂತ ಹೆಚ್ಚು ಅವರ ವೈಯಕ್ತಿಕ ಸೇವಕರೇ. ಇದುವರೆಗೆ ಅಡ್ವಾಣಿ ಈ ಬಾರಿಯ ಯಾತ್ರೆಯನ್ನೂ ಸೇರಿಸಿ ಮೂರು ಅಧಿಕೃತ ಯಾತ್ರೆಗಳನ್ನು, ಐದು ಅನಧಿಕೃತ ಯಾತ್ರೆಗಳನ್ನು ಕೈಗೊಂಡಿದ್ದಾರೆ. ಮುರಳಿ ಮನೋಹರ ಜೋಷಿ ಬಿಜೆಪಿಯ ಅಧ್ಯಕ್ಷರಾದಾಗ ಅವರು ಹೇಗೆ ಹಿಂದುಳಿಯಲು ಸಾಧ್ಯ? ಆದ್ದರಿಂದ 1991 ರಲ್ಲಿ ಅವರು ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗಿನ ಯಾತ್ರೆ ಕೈಗೊಂಡರು. ಅದು ಠುಸ್ಸಾಯಿತು. ಈ ಎರಡು-ಮೂರು ಉನ್ನತ ನಾಯಕರಲ್ಲದೆ ಸಿಂಘಾಲ್, ತೊಗಾಡಿಯಾರಂತವರಿಗೂ ಯಾತ್ರೆಗಳೆಂದರೆ ಇಷ್ಟ - ಅವರೂ ಸ್ಥಳೀಯ, ರಾಜ್ಯಮಟ್ಟದ ಯಾತ್ರೆಗಳನ್ನು ಕೈಗೊಂಡಿದ್ದಾರೆ.

ಈ ಯಾತ್ರೆಗಳ ಒಂದು ಲಕ್ಷಣವೆಂದರೆ ಬಿಜೆಪಿ ಹತಾಶೆಗೊಂಡಾಗ ಅಥವಾ ಯಾವುದಾದರೂ ಚುನಾವಣೆ ಸಮೀಪಿಸಿದಾಗ ಇದನ್ನು ಕೈಗೊಳ್ಳಲಾಗುತ್ತದೆ. ಉದಾಹರಣೆಗೆ ಅಡ್ವಾಣಿಯವರ ಯಾತ್ರೆಗಳನ್ನು ನೆನಪಿಸುತ್ತಾ ಪ್ರಖ್ಯಾತ ಪತ್ರಕರ್ತ ಜಿ.ಎಸ್.ಚಾವ್ಲಾ "ಅಡ್ವಾಣಿ ಯಾತ್ರೆ ಕೈಗೊಂಡಾಗಲೆಲ್ಲಾ ಅದನ್ನು ಹತಾಶೆಯಿಂದಲೇ ಕೈಗೊಂಡಿದ್ದಾರೆ" ಎಂದು ಗಮನಿಸುತ್ತಾರೆ. 1990 ರಲ್ಲಿ ವಿ.ಪಿ.ಸಿಂಗ್ ಸರ್ಕಾರ ಹತ್ತು ವರ್ಷಗಳಿಂದ ಧೂಳು ತಿನ್ನುತ್ತಿದ್ದ ಮಂಡಲ್ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸುತ್ತೇನೆ ಎಂದಾಗ ಬಿಜೆಪಿಗೆ ಬೆದರಿಕೆಯ ಲಕ್ಷಣಗಳು ಕಂಡುಬಂದವು. ಆಗ ಬಿಜೆಪಿ ದೇವಸ್ಥಾನದ ಪ್ರಶ್ನೆ ಎಬ್ಬಿಸಿತು - ಇದನ್ನು ಮಂಡಲಕ್ಕೆ ಎದುರಾಗಿ ಕಮಂಡಲ ಎನ್ನಲಾಗುತ್ತದೆ. ಆಗ ಬಿಜೆಪಿ ಅಧ್ಯಕ್ಷರಾಗಿದ್ದ ಅಡ್ವಾಣಿ ಕೈಗೊಂಡ ಯಾತ್ರೆ ಅಂತಹ ರಕ್ತಸಿಕ್ತವಾದ ಯಾತ್ರೆ. ಈ ಯಾತ್ರೆಯ ಫಲಶೃತಿಯಾಗಿ ಇತರ ಕೆಲವು ಸ್ವಾರ್ಥಸಾಧಕರೊಡಗೂಡಿ ಬಿಜೆಪಿ ತಾನೇ ಬೆಂಬಲಿಸಿದ್ದ ವಿ.ಪಿ.ಸಿಂಗ್ ಸರ್ಕಾರವನ್ನು ಬೀಳಿಸುವಲ್ಲಿ ಯಶಸ್ವಿಯಾಯಿತು. ಆದರೆ ಅದಕ್ಕೆ ದೇಶ ತೆತ್ತ ಬೆಲೆ ಅಪಾರ. ಏಕೆಂದರೆ ಅನಂತರ ದೇಶದ ಐಕ್ಯತೆಗೆ ತೀವ್ರ ಧಕ್ಕೆ ಬರುವ ಸ್ಥಿತಿ ಬಂದಿತು. ಅದು ದೇಶದ ವಿಭಜನೆಯ ನಂತರ ಎಂದೂ ಕಾಣದ ಅಭೂತಪೂರ್ವ ಬೆದರಿಕೆ.

ಈ ಹಿಂದೆ 1984 ರಲ್ಲಿ ವಿಹೆಚ್‌ಪಿ ಅಯೋಧ್ಯೆಯಲ್ಲಿ 'ರಾಮಜನ್ಮಭೂಮಿ' ಯ ವಿಮೋಚನೆಗಾಗಿ ಯಾತ್ರೆ ನಡೆಸಿತ್ತು. 1985 ರಲ್ಲಿ ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿದ್ದಾಗ, ಇದು ಇಂದಿರಾಗಾಂಧಿಯ ಭೀಕರ ಕೊಲೆಯ ಮೊದಲು. ಆ ಕೊಲೆ ಬಿಜೆಪಿಯ ಲೆಕ್ಕಾಚಾರಗಳನ್ನು ತಲೆಕೆಳಗಾಗಿಸಿತು. ಆ ಚುನಾವಣೆಗಳಲ್ಲಿ ಬಿಜೆಪಿಗೆ ಸಿಕ್ಕಿದ್ದು ಎರಡೇ ಸ್ಥಾನಗಳು.

1991 ರಲ್ಲಿ ಜೋಷಿಯವರ ಯಾತ್ರೆಯೂ ಮಂಬರಲಿದ್ದ ಲೋಕಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡೇ ನಡೆಯಿತು. 1998 ರಲ್ಲಿ ಅಡ್ವಾಣಿಯವರ ಎರಡನೇ ಯಾತ್ರೆಯ ಬಗ್ಗೆಯೂ ಅದನ್ನೇ ಹೇಳಿ ಮುಂದೆ ಜನವರಿ-ಫೆಬ್ರವರಿ 2002 ರಲ್ಲಿ ವಿಹೆಚ್‌ಪಿ ಲಕ್ನೌನಿಂದ ದಿಲ್ಲಿಯವರೆಗಿನ 'ಸಂಕಲ್ಪ ಯಾತ್ರೆ' ಕೈಗೊಂಡಿತು. ಆಗ ಉತ್ತರ ಪ್ರದೇಶದಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿದ್ದವು. ಅದೇ ವರ್ಷದ ಅಂತ್ಯದಲ್ಲಿ ಗುಜರಾತಿನಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿದ್ದಾಗ ನರೇಂದ್ರಮೋದಿಯವರ 'ಗೌರವಯಾತ್ರೆ' ನಡೆಯಿತು. ಆದ್ದರಿಂದ ದೇಶ ಇನ್ನೂ ಒಂದು ತಿಂಗಳೊಳಗೆ ಲೋಕಸಭಾ ಚುನಾವಣೆಗಳಿಗೆ ಮತದಾನ ಮಾಡಲಿರುವಾಗಲೇ ಅಡ್ವಾಣಿಯವರು ಇನ್ನೊಂದು ಯಾತ್ರೆಗೆ ಹೊರಟಿರುವುದರಲ್ಲಿ ಆಶ್ಚರ್ಯವಿಲ್ಲ.

ಈ ಯಾತ್ರೆಗಳ ಫಲ ಮಿಶ್ರವಾಗಿತ್ತು - ಕೆಲವಂತೂ ಶೋಚನೀಯವಾಗಿ ವಿಫಲಗೊಂಡವು. ಆದರೆ ಇವೆಲ್ಲದರಲ್ಲಿ ಒಂದು ಸಮಾನ ಅಂಶ ಇತ್ತು. ಮೊದಲನೆಯದಾಗಿ ನಿರ್ಣಾಯಕ ಚುನಾವಣೆಗಳನ್ನು ಎದುರಿಸುವಾಗ ಬಿಜೆಪಿಯ ಹತಾಶ ಭಾವನೆ ಮತ್ತು ಎರಡನೆಯದಾಗಿ, ಈ ಎಲ್ಲಾ ಯಾತ್ರೆಗಳು, ಚುನಾವಣಾ ದೃಷ್ಟಿಯಿಂದ ವಿಫಲವಾದ ಯಾತ್ರೆಗಳು ಕೂಡಾ. ನಮ್ಮ ರಾಷ್ಟ್ರೀಯ ಐಕ್ಯತೆ ಮತ್ತು ಕೋಮುಸಾಮರಸ್ಯಕ್ಕೆ ಗಂಭೀರ ಹಿನ್ನಡೆ ಉಂಟುಮಾಡಿದವು. ಸಂಘ ಪರಿವಾರದ ಗುರಿಯೂ ಅದೇ ತಾನೆ?

ಆರ್‌ಎಸ್‌ಎಸ್ ಬಯಸುವ ವಿಷವೃತ್ತ

ಆದರೆ ದೇಶದಲ್ಲಿ ಕೋಮು ವಾತಾವರಣವನ್ನು ಕೆಡಿಸುವಲ್ಲಿ ಸಂಘ ಪರಿವಾರ ನೇರವಾಗಿ ತನ್ನನ್ನು ತೊಡಗಿಸಿಕೊಂಡಿದೆ ಎಂಬುದು ಅರೆಸತ್ಯವಷ್ಟೆ. ಏಕೆಂದರೆ ಅಲ್ಪಸಂಖ್ಯಾತರ ನಡುವೆ ಭಯ ಹುಟ್ಟಿಸಿ ಅದರ ನಡುವೆಯೂ ಕೋಮುವಾದಕ್ಕೆ, ಮೂಲಭೂತವಾದಕ್ಕೆ ಸಂಘ ಪರಿವಾರ ಪ್ರೋತ್ಸಾಹ ನೀಡುತ್ತದೆ ಮತ್ತು ಅಲ್ಪಸಂಖ್ಯಾತರ ನಡುವೆ ಇಂತಹ ಶಕ್ತಿಗಳ ಉದಯ ಸಂಘ ಪರಿವಾರದ ಧ್ವಂಸ ಕಾರ್ಯಗಳಿಗೆ ಮತ್ತಷ್ಟು ಪ್ರೋತ್ಸಾಹ ನೀಡುತ್ತವೆ, ತನ್ನ ಕ ಕೃತ್ಯಗಳಿಗೆ ಇದನ್ನು ಒಂದು ಸಮರ್ಥನೆಯಾಗಿಯೂ ಅದು ಮುಂದಿಡುತ್ತದೆ. ಎಲ್ಲಾ ರೀತಿಯ ಮೂಲಭೂತವಾದಗಳು ಪರಸ್ಪರ ಒಂದಕ್ಕೊಂದು ಆಹಾರವುಣ್ಣಿಸುತ್ತವೆ ಎಂಬುದರ ಅರ್ಥ ಇದೇ. ಆದರೆ ಈ ವಿಷ ವೃತ್ತದಲ್ಲಿ ಅತಿ ಹೆಚ್ಚು ಪ್ರಯೋಜನವಾಗುವುದು ಸಂಘ ಪರಿವಾರಕ್ಕೆ ಎಂಬುದು ನಿಸ್ಸಂದೇಹ. ಆದ್ದರಿಂದ ಇಂತಹ ವಿಷವೃತ್ತ ನಿರ್ಮಿಸುವುದರಲ್ಲಿ ಸಂಘ ಪರಿವಾರಕ್ಕೆ ಪಟ್ಟಭದ್ರ ಹಿತಾಸಕ್ತಿಯಿದೆ. ಹಾಗೂ ಅದನ್ನೇ ಅದು ಇದುವರೆಗೂ ಮಾಡಿಕೊಂಡು ಬಂದಿದೆ. ಗುಜರಾತ್ ಚುನಾವಣೆಗಳನ್ನು ಗೆಲ್ಲಲು, ನರೇಂದ್ರಮೋದಿ ಅಕ್ಷರ ಧಾಮ ದೇವಸ್ಥಾನದ ಮೇಲೆ ಭಯೋತ್ಪಾದಕ ಧಾಳಿಯ ಸಂಪೂರ್ಣ ಪ್ರಯೋಜನ ಪಡೆದದ್ದು ಇದಕ್ಕೊಂದು ಉದಾಹರಣೆ.

ಅಡ್ವಾಣಿಯವರ ಹೊಚ್ಚಹೊಸ ಯತ್ನ ದೇಶದ ಕೆಲವು ಭಾಗಗಳಲ್ಲಿ ಈ ಪ್ರಕ್ರಿಯೆಯನ್ನು ಈಗಾಗಲೇ ಆರಂಭಿಸಿದಂತಿದೆ. ಉದಾಹರಣೆಗೆ ಈ ರಥಯಾತ್ರೆಯನ್ನು 'ಬಿಜೆಪಿಯ ಮೂಲಭೂತವಾದಿ ರಕ್ತಸಿಕ್ತ ಅಜೆಂಡಾ' ದ ಒಂದು ಪ್ರತಿಮೆಯಾಗಿ ಕಾಣಲಾಗುತ್ತಿದೆ ಎಂದು ಪಂಜಾಬಿನಿಂದ ಜಿ.ಎಸ್.ಚಾವ್ಲಾ ವರದಿ ಮಾಡಿದ್ದಾರೆ. ಅವರ ಪ್ರಕಾರ "ರಾಜ್ಯ ಬಿಜೆಪಿ ಘಟಕ ಪ್ರತ್ಯೇಕತಾವಾದಿಗಳೆಂಬ ಜನಗಳಿಗೆಲ್ಲಾ ಗೊತ್ತಿರುವ ಶಕ್ತಿಗಳಿಂದ ಯಾವುದೇ ಛಿದ್ರಕಾರಿ ಪ್ರಯತ್ನಗಳನ್ನು ರಾಜ್ಯದ ಯುವಜನತೆ ಮೂಕಪ್ರೇಕ್ಷಕರಂತೆ ನೋಡುತ್ತಾ ನಿಲ್ಲುವುದಿಲ್ಲ ಎಂದು ರಥಯಾತ್ರೆಯನ್ನು ವಿರೋಧಿಸುವವರಿಗೆ ಬೆದರಿಕೆ ಹಾಕಿದೆ". ಪಂಜಾಬಿನಲ್ಲಿ ಗಂಭೀರ ವಿವಾದಗಳೆದ್ದಿವೆ, ಹಿಂದೂ ಮತ್ತು ಸಿಖ್ ಮೂಲಭೂತವಾದಿಗಳು ಬೆದರಿಕೆ, ಪ್ರತಿಬೆದರಿಕೆಗಳನ್ನು ಹಾಕುತ್ತಿದ್ದಾರೆಎಂದೂ ಅವರು ವರದಿ ಮಾಡಿದ್ದಾರೆ.

ಚಾವ್ಲಾರವರು ಪಂಜಾಬಿನಲ್ಲಿನ ಈ ಪ್ರಕ್ರಿಯೆಯಿಂದ ತಲುಪುವ ತೀರ್ಮಾನ ನಮ್ಮ ರಾಷ್ಟ್ರೀಯ ಐಕ್ಯತೆ ಮತ್ತು ಕೋಮುಸೌಹಾರ್ದಕ್ಕೆ ಧಕ್ಕೆ ಬರದಿರಲಿ ಎಂದು ಆಶಿಸುವ ಶಾಂತಿಪ್ರಿಯ ಭಾರತೀಯರಿಗೆಲ್ಲಾ ಕಳವಳವುಂಟು ಮಾಡುವಂತದ್ದು. "1981-82 ರಲ್ಲಿ ಪಂಜಾಬಿನಲ್ಲಿ ಪ್ರತ್ಯೇಕವಾದ ಮತ್ತು ಮೂಲಭೂತವಾದ ಎದಯಿಸಿ, ನಂತರಇಡೀ ದೇಶ ಉರಿಯುವಂತೆ ಮಾಡಿದ್ದಕ್ಕೆ ಕಾರಣವಾದ ಸನ್ನಿವೇಶದಂತಹುದೇ ಸನ್ನಿವೇಶ ಈಗ ಇದೆ" ಎನ್ನುತ್ತಾರೆ ಅವರು. ಇಬ್ಬರು ಹಿರಿಯ ಸಿಖ್ ಮುಖಂಡರು - ರಥ ಯಾತ್ರೆಯನ್ನು ಬೆಂಬಲಿಸುವ ಪ್ರಕಾಶ್ ಸಿಂಗ್ ಬಾದಲ್ ಮತ್ತು ವಿರೋಧಿಸುವ ಸಿಮ್ರನ್‌ಜಿತ್ ಸಿಂಗ್ ಮಾನ್ - ನಡುವೆ ಕಿತ್ತಾಟ ಪಂಜಾಬಿನಲ್ಲಿ ಪರಿಸ್ಥಿತಿಯನ್ನು ಹದಗೆಡಿಸಬಹುದು ಎಂದೂ ಈ ಹಿರಿಯ ಪತ್ರಕರ್ತ ಹೇಳುತ್ತಾರೆ.

ಮುಂದಿನ 33 ದಿನಗಳಲ್ಲಿ ದೇಶದ ಇತರ ಭಾಗಗಳಿಂದ ಇಂತಹ ಅಥವಾ ಇನ್ನೂ ಹೆಚ್ಚು ವರದಿಗಳು ಬಂದರೆ ಆಶ್ಚರ್ಯವಿಲ್ಲ, ಕಳೆದ ಐದು ಅಥವಾ ಆರು ವರ್ಷಗಳಲ್ಲಿ ಬಿಜೆಪಿ ಸರ್ಕಾರದ 'ಸಾಧನೆ'ಗಳನ್ನು ಜನಪ್ರಿಯಗೊಳಿಸುವ ಯಾತ್ರೆ ಇದು ಎಂದು ಹೇಳಿಕೊಳ್ಳುವುದನ್ನು ತಳ್ಳಿಹಾಕುವ ಸುಮಾರಾಗಿ ಎಲ್ಲಾ ಟಿಪ್ಪಣಿಕಾರು ಇದರ ನಿಜ ಉದ್ದೇಶ ದೇಶದಲ್ಲಿ ಕೋಮು ಧ್ರುವೀಕರಣ ತರುವುದು ಎಂಬುದನ್ನು ಒಪ್ಪಿಕೊಳ್ಳುತ್ತಾರೆ.

ಇದು ಆಕಸ್ಮಿಕವೇ ? ನಿಜ ಸಂಗತಿಯೆಂದರೆ, 'ಭಾರತ ಪ್ರಕಾಶಿಸುತ್ತಿದೆ' ಪ್ರಚಾರದಲ್ಲಿ ಏನಾದರೂ ಹೊಳಪು ಇದ್ದಿದ್ದರೆ, ಈಗ ಅದೂ ಹೋಗಿದೆ. ಅದರ 'ಹಿತಾನುಭವ'ದಸ ಅಂಶ ಅನುಭೂತಿ ಉಂಟು ಮಾಡುವ ಬದಲು ಸೋಲಿಗೆ ಕಾರಣವಾಗಿ ಬಿಜೆಪಿಗೆ ಇದ್ದಕ್ಕಿದ್ದಂತೆ ಕಾಡು ಹೊಕ್ಕಂತಾಗಿದೆ. ಇಂತಹ ಒಂದು ಸನ್ನಿವೇಶದ್ದಲ್ಲೂ ಕೋಮುವಾದಿ ಪ್ರಶ್ನೆಗಳನ್ನೆತ್ತುದ್ದೆ. ತಾನು ಎಂದೂ ಗುರಿ ತಲುಪಲಾರೆ ಎಂದು ಅದಕ್ಕೆ ಅನಿಸುತ್ತಿರಬೇಕು. ಆದ್ದರಿಂದಲೇ ಅಯೋಧ್ಯೆಯಿಂದಲೇ ವಾಜಪೇಯಿಯವರು ದೇವಸ್ಥಾನ ಕಟ್ಟಲು ಇನ್ನೈದು ವರ್ಷಗಳ ಅವಧಿ ಕೊಡಿ ಎಂದು ಬೇಡಿಕೊಂಡರೆ, ಅಡ್ವಾಣಿಯವರನ್ನು ದೇಶದ ಉದ್ದಗಲದಲ್ಲಿ ಇನ್ನೊಂದು ಯಾತ್ರೆ ನಡೆಸುವಂತೆ ಮುಂದೆ ತಳ್ಳಲಾಯಿತು.

ಆರ್‌ಎಸ್‌ಎಸ್ ಕೂಡಾ ಚುನಾವಣೆಯ ಮೊದಲು ಬಿಜೆಪಿ ಒಂದು 'ಕಣ್ಣೋಟ'ದ ದಸ್ತಾವೇಜು ತರಬೇಕೆಂದು ಏಕೆ ..... ಎಂಬುದಕ್ಕೂ ಇದು ವಿವರಣೆ ನೀಡುತ್ತದೆ. ಎನ್‌ಡಿಎ ಚುನಾವಣಾ ಪ್ರಣಾಳಿಕೆಯಲ್ಲಿ ಮುಂದಿಡಲಾಗದ ವಿವಾದಾತ್ಮಕ ಪ್ರಶ್ನೆಗಳನ್ನೆಲ್ಲಾ ಮುಂದಿಡುವುದು ಇದರ ಗುರಿ. ಅದೂ ಇರುತ್ತದೆ, ಇದೂ ಇರುತ್ತದೆಎಂಬ ಚತುರತೆಯ ಪ್ರಯತ್ನ.

'ಅವರ ಕೃತ್ಯ ರಾಷ್ಟ್ರ-ವಿರೋಧಿ'

ಈ ರಥಯಾತ್ರೆ ಸರ್ಕಾರದ ಸಾಧನೆಗಳನ್ನು ಜನಪ್ರಿಯಗೊಳಿಸಲು ಎಂಬ ಬಿಜೆಪಿಯ ದಾವೆಯನ್ನು ಬೇರೆಯವರು ಒಪ್ಪುತ್ತಿಲ್ಲ ಎಂಬುದರಿಂದ ತನಗೆ ನೋವಾಗಿದೆಯೆಂದು ಅದು ನಟಿಸುತ್ತಿದೆ. ಅಡ್ವಾಣಿಯವರ ಹಿಂದಿನ ರಥಯಾತ್ರೆಗಳು ತಮ್ಮ ಬೆನ್ನಹಿಂದೆ ರಕ್ತಮಯ ಜಾಡನ್ನೇ ಬಿಟ್ಟುಹೋದವು ಎಂಬ ಆಪಾದನೆ ಸರಿಯಲ್ಲ ಎಂದೂ ಅದು ಹೇಳುತ್ತಿದೆ.

ಇದನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಅಡ್ವಾಣಿಯವರೇ ಈಗ ಕೇಂದ್ರ ಗೃಹಮಂತ್ರಿಗಳು ಎಂಬ ಸಣ್ಣ ವಿಷಯವನ್ನು ಆ ಪಕ್ಷ ಮರೆತಿದೆ. ಉಳಿದವರೂ ಮರೆಯಬೇಕು ಎಂದು ಬಯಸುತ್ತಿದೆ. ತನ್ನ ಹಿಂದಿನ ಎರಡು ರಥಯಾತ್ರೆಗಳು ಏನೆಲ್ಲಾ ಮಾಡಿದವು ಎಂಬುದನ್ನು ತನ್ನ ಗೃಹಮಂತ್ರಾಲಯದ ವರದಿಗಳಿಂದಲೇ ಅವರು ನೋಡಬಹುದು. "ಅವರಿಗೆ ಗೃಹಮಂತ್ರಿಯಾಗಿ ಏನಾದರೂ ಜವಾಬ್ದಾರಿಯ ಭಾವನೆಯಿದ್ದರೆ ಅವರು ಹಿಂದಿನ ರಥಯಾತ್ರೆಗಳಿಗೆ ಸಂಬಂಧಪಟ್ಟ ತನ್ನೇದ ಮಂತ್ರಾಲಯದ ವರದಿಗಳನ್ನಿ ಓದಬೇಕು. 1989 ರ (1990 ರ ಎಂದು ಓದಿಕೊಳ್ಳಿ) ಅವರ ರಥಯಾತ್ರೆಯ ಫಲಿತಾಂಶವಾಗಿ ದೇಶದ ಹಲವು ಭಾಗಗಳಲ್ಲಿ ಹಲವು ಕೋಮು ತಿಕ್ಕಾಟಗಳು ನಡೆದವು ಎಂದು ಅದರಲ್ಲಿ ಬರೆಯಲಾಗಿದೆ, ಎಂದು ಚಾವ್ಲಾ ಹೇಳುತ್ತಾರೆ.

"ಮಾರ್ಚ್ 1991 ರಲ್ಲಿ ರಾಜಧಾನಿಯಲ್ಲಿ ನಡೆದ ರಾಜ್ಯಪೋಲೀಸ್ ಮುಖ್ಯಸ್ಥರ ಸಭೆಗೆ ಗೃಹಮಂತ್ರಾಲಯ ತಯಾರಿಸಿದ ಅಜೆಂಡಾವನ್ನು ಅಡ್ವಾಣಿಯವರು ನೋಡಿದರೆ, ಅದರಲ್ಲಿ ಅಡ್ವಾಣಿಯವರ ರಥಯಾತ್ರೆಯಿಂದ ದೇಶದ ಹಲವು ಭಾಗಗಳಲ್ಲಿ ಕೋಮು ತಿಕ್ಕಾಟಗಳು ನಡೆದಿವೆ ಎಂದು ಸ್ಪಷ್ಟವಾಗಿ ಹೆಸರಿಡಿದು ಹೇಳಲಾಗಿದೆ. ಸೆಪ್ಟೆಬರ್ 1997 ರಲ್ಲಿ ಅಯೋಧ್ಯಾ ಮೊಕದ್ದಮೆಯ ವಿಚಾರಣೆ ನಡೆಸುತ್ತಿದ್ದ ಸೆಶನ್ಸ್ ನ್ಯಾಯಾಧೀಶರು ನೀಡಿದ ತೀರ್ಪು ಕೂಡಾ ಸಿಬಿಐ ನೇತೃತ್ವದ(!) ಸಾಕ್ಷಿಯ ಆಧಾರದಲ್ಲಿ ಅಡ್ವಾಣಿಯವರು ತಮ್ಮ ರಥಯಾತ್ರೆಯಿಂದ ಬಾಬ್ರಿ ಮಸೀದಿ ಧ್ವಂಸದ ಪಿತೂರಿ ಮಾಡಲು ಆರಂಭಿಸಿದರು ಎಂಬ ತೀರ್ಮಾನಕ್ಕೆ ಬಂದಿದೆ"

ಎಂದು ಚಾವ್ಲಾ ಮುಂದುವರೆದು ಹೇಳುತ್ತಾರೆ.

"ಹೀಗಿದ್ದರೂ ಇಂತಹ ವರದಿಗಳಿದ್ದರೂ ಅವರು ರಥಯಾತ್ರೆ ನಡೆಸಿಯೇ ನಡೆಸುತ್ತೇವೆ ಎನ್ನುವುದಾದರೆ ಅವರ ಕೃತ್ಯಗಳು ರಾಷ್ಟ್ರ-ವಿರೋಧಿ, ದೇಶದಲ್ಲಿ ಕೋಮುಧ್ರುವೀಕರಣವನ್ನು ಉಂಟು ಮಾಡುವಂತದ್ದು ಎಂಬುದು ಸ್ಪಷ್ಟವಾಗಿ ಸಿದ್ಧವಾಗುತ್ತದೆ" ಎನ್ನುತ್ತಾರೆ ಚಾವ್ಲಾ.

ನೇರ ವಂಚನೆ

ಆದರೂ ಅಡ್ವಾಣಿ ತಮಗೆ ಅಗತ್ಯವಾದಲ್ಲಿ ಮರೆಗುಳಿಯಾಗುತ್ತಾರೆ ಎನ್ನುವಂತಿಲ್ಲ. ನಿಜವಾಗಿ ಇದು ನೇರ ವಂಚನೆಯೇ. ಅದರಲ್ಲಿ ಅವರು ನುರಿತವರು. 2002 ರ ಗುಜರಾತ್ ಹತ್ಯಾಕಾಂಡದ ಗಂಭೀರತೆಯನ್ನು ತಗ್ಗಿಸಲು ಅವರು ಮಾಡಿರುವ ಪ್ರಯತ್ನ ಇಂತಹ ವಂಚನೆಗೆ ಇತ್ತೀಚಿನ ಉದಾಹರಣೆ. ಅವರು ಮಾರ್ಚ್ 8 ರಂದು ಒಂದು ಅಧಿಕೃತ ಸಮಾರಂಭದಲ್ಲಿ ಗುಜರಾತಿನ 'ಗಲಭೆ'ಗಳ ಬಗ್ಗೆ ಮಾತಾಡಿದರು. ಮೊದಲನೆಯದಾಗಿ, ಅದು



ನಿಜವಾದ ಅರ್ಥದಲ್ಲಿ 'ಗಲಭೆ' ಯಾಗಿರಲಿಲ್ಲ. ಎಂಬುದು ಇಡೀ ಜಗತ್ತಿಗೇ ಗೊತ್ತು. ಅದೊಂದು ಮುಸ್ಲಿಮರ ಪೂರ್ಣಪ್ರಮಾಣದ ಹತ್ಯಾಕಾಂಡವಾಗಿತ್ತು. ಗೋದ್ರಾ ಕಾಂಡದ ಕನಿಷ್ಟ ಆರು ತಿಂಗಳ ಮೊದಲಿಂದ ಇದಕ್ಕೆ ಯೋಜನೆ ನಡೆದಿತ್ತು.

ಎರಡನೆಯದಾಗಿ, ಇದು ದೇಶದ ಮೇಲೊಂದು 'ಕರಿಚುಕ್ಕೆ' ಎಂದು ಚುನಾವಣಾ ಕಾರಣಗಳಿಂದಾಗಿ ಅಡ್ವಾಣಿ ಹೇಳಬೇಕಾಗಿ ಬಂದರೂ, ಅದೇ ಉಸಿರಿನಲ್ಲಿ ಈ ಮನುಷ್ಯರು ಅದೊಂದು ದಾರಿ ತಪ್ಪಿದ ಘಟನೆ (ಅಬರೇಷನ್)ಯಷ್ಟೇ ಅಥವಾ ಅಪವಾದವಷ್ಟೇ ಎಂದರು. ಇದಂತೂ ಅತ್ಯಂತ ಖಂಡನೀಯ. ಗುಜರಾತಿನಲ್ಲಿ ಆ ಭಯ ತುಂಬಿದ ತಿಂಗಳುಗಳಲ್ಲಿ 2000ಕ್ಕೂ ಹೆಚ್ಚು ಮುಸ್ಲಿಮರ ಕಗ್ಗೊಲೆಯಾಯಿತು, ಅದಕ್ಕಿಂತ ಎಷ್ಟೋ ಹೆಚ್ಚು ಮುಸ್ಲಿಮರು ಗಾಯಗೊಂಡರು, ಅಂಗವಿಕಲರಾದರು. ಕನಿಷ್ಟ 80,000 ಕುಟುಂಬಗಳು ನೆಲೆ ಕಳಕೊಂಡರು. ನೂರಾರು ಮಹಿಳೆಯರ ಮಾನಭಂಗ ನಡೆಯಿತು. ಮಕ್ಕಳನ್ನು ಕೊಂದು ಹಾಕಲಾಯಿತು, ಮುಸ್ಲಿಂ ಕೋಮಿನ ಆರ್ಥಿಕ ಬೆನ್ನೆಲುಬನ್ನೇ ಮುರಿದು ಹಾಕುವ ಪ್ರಯತ್ನ ನಡೆಯಿತು ಎಂದು ಎಲ್ಲರಿಗೂ ಗೊತ್ತು. ಆದರೂ ಅಡ್ವಾಣಿಯವರಿಗೆ ಇದು ಕೇವಲ ದಾರಿ ತಪ್ಪಿದ ಪ್ರಕರಣ ಅಷ್ಟೇ!.

ಕೊನೆಯದಾಗಿ, ಈ ನರಹತ್ಯಾಕಾಂಡ ನಡೆದದ್ದು ಒಬ್ಬ ಆರ್‌ಎಸ್‌ಎಸ್ ಪ್ರಚಾರಕ, ಬಿಜೆಪಿಯ ನಾಯಕಮಣಿಯ ನೇತೃತ್ವದಲ್ಲಿ ಇರುವ ರಾಜ್ಯ ಸರ್ಕಾರದ ಪೂರ್ಣ ಬೆಂಬಲದಿಂದ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಇದೇ ನರೇಂದ್ರಮೋದಿಯನ್ನು, ಗುಜರಾತಿನ ಈ ಮುಖ್ಯ ಕಟುಕನನ್ನು ವಾಜಪೇಯಿ ಮತ್ತು ಅಡ್ವಾಣಿ ಒಂದಲ್ಲ ಹಲವು ಬಾರಿ ಹಾಡಿಹೊಗಳಿದ್ದಾರೆ. ಮೋದಿಯ ಪೋಲೀಸ್ ಮತ್ತು ಆಡಳಿತ ಕೊಲೆಗಾರರಿಗೆ ಎಲ್ಲಾ ನೆರವು, ಪೋಷಣೆ ಕೊಡುವಂತೆ ಮಾಡಿದ್ದಾರೆ. ಇದು ಅಡ್ವಾಣಿ ಹೇಳುವಂತೆ ಕೇವಲ ದಾರಿ ತಪ್ಪಿದ ಪ್ರಕರಣವೆ?

ಇದನ್ನು ತೊಲಗಿಸಬೇಕು

ಆದರೂ ಅಡ್ವಾಣಿಯವರಿಗೆ ಒಂದು ಪ್ರಶ್ನೆ ಕೇಳಬೇಕು, ಅದಕ್ಕೆ ಅವರು ಉತ್ತರಿಸುವಂತೆ ಮಾಡಬೇಕು. 1998 ರಲ್ಲಿ ಗೃಹಮಂತ್ರಿಯಾದ ಕೂಡಲೇ ಅವರು ವಿರೋಧ ಪಕ್ಷ ಆಡಳಿತವಿದ್ದ

ಪುಟ 11 ಕ್ಕೆ

ಮತ್ತೊಂದು ಘೋಷಣೆ – ಭಾರತ ಒಂದು ಮಹಾಶಕ್ತಿಯೇ ?

ಒಂದು ಸುಳ್ಳು (ಪ್ರತಿಯೊಬ್ಬರಿಗೂ ಹಿತಕರ ಭಾವನೆ), ಹಸಿಸುಳ್ಳು (ಪ್ರತಿಯೊಬ್ಬರಿಗೂ ಭಾರತ ಪ್ರಕಾಶಿಸುತ್ತಿದೆ ಮತ್ತು ವಾಜಪೇಯಿ ಅಂಕಿಅಂಶಗಳನ್ನು ಎರಚಿದ ನಂತರ ಈಗ ಭಾರತ 'ಮಹಾಶಕ್ತಿ'ಯಾಗುತ್ತಿದೆ ಎಂಬ ಘೋಷಣೆ ಬಂದಿದೆ.

ಪ್ರತಿಯೊಬ್ಬರೂ ಹಿತಕರವಾಗಿ ಭಾವಿಸುವಂತೆ ಮಾಡಲು, ಭಾರತದಲ್ಲಿರುವ ಎಲ್ಲರೂ ಹೊಳಪಿನ ಪ್ರತಿಬಿಂಬವಾಗಲೂ ವಾಜಪೇಯಿ ನಾಯಕತ್ವದ ಕೋಮುವಾದ ಸಂದರ್ಭಸಾಧಕ ಮೈತ್ರಿಕೂಟದ ಸೋಲನ್ನು ಖಾತ್ರಿಗೊಳಿಸಬೇಕು. ಭಾರತವನ್ನು ನೈಜ ಮಹಾಶಕ್ತಿಯಾಗಿಸುವ ಉದ್ದೇಶದಿಂದ ಮಾಡಬೇಕಾದ ಕಾರ್ಯವಿದು. ದೇಶದಲ್ಲಿರುವ ಪ್ರತಿಯೊಬ್ಬರೂ ಭಾರತ ಒಂದು ಮಹಾಶಕ್ತಿಯಾಗಬೇಕೆಂದು ಬಯಸುತ್ತಾರೆ. (ಅಮೇರಿಕಾದಂತೆ ದಗಾಕೋರ ಮಹಾಶಕ್ತಿಯ ಮಾದರಿಯಲ್ಲಿಲ್ಲ) ಆದರೆ ಮಹಾಶಕ್ತಿಯ ಸ್ಥಾನಮಾನ ಬರಬಹುದಾಗಿರುವುದು ಕೇವಲ ಬಲಿಷ್ಠ ಆರ್ಥಿಕತೆ, ಸಮಾಜ ಮತ್ತು ರಾಜಕೀಯ ನೆಲೆಗಟ್ಟಿನ ಮೇಲೆ ಮಾತ್ರ. ಆದರೆ ಈ ಸರ್ಕಾರ ಅನುಸರಿಸುತ್ತಿರುವ ಆ ನೀತಿಗಳು ಭಾರತವನ್ನು ಮಹಾಶಕ್ತಿಯಾಗಿಸುವುದರ ಬದಲು ಅದರ ತದ್ವಿರುದ್ಧವನ್ನೇ ಮಾಡುತ್ತಿವೆ. ಅತಿ ಸರಳವಾಗಿ ಹೇಳುವುದೇನೆಂದರೆ ಭಾರತ ಮಹಾಶಕ್ತಿಯಾಗಬೇಕಾದರೆ ವಾಜಪೇಯಿ ನೇತೃತ್ವದ ಎನ್.ಡಿ.ಎಯನ್ನು ಅಧಿಕಾರದಿಂದ ಬಹಳ ದೂರದಲ್ಲಿಡಲೇಬೇಕು.

ಮೊದಲಿಗೆ ನಮ್ಮ ಸಮಾಜವನ್ನೇ ತೆಗೆದುಕೊಳ್ಳೋಣ. ಭಾರತದ ಶಕ್ತಿ ಅಡಗಿರುವುದೇ ಅದರ ವೈವಿದ್ಯತೆಯನ್ನು ಆಚರಿಸುವುದರಲ್ಲಿ. ಇದರ ಬಹುತ್ವ ಕೇವಲ ಧರ್ಮದಲ್ಲಿ ವಿಚಾರದಲ್ಲಿ ಮಾತ್ರವೇ ಅಡಗಿಲ್ಲ, ಭಾಷೆ, ಸಂಸ್ಕೃತಿ, ಹವ್ಯಾಸಗಳು ಹೀಗೆ ಇತರೆ ವಿಚಾರಗಳಲ್ಲೂ ವೈವಿದ್ಯತೆಯಿದೆ. ಈ ವೈವಿದ್ಯತೆಯನ್ನು ಆಚರಿಸುವುದು ಮತ್ತು ಈ ವೈವಿದ್ಯತೆಯಲ್ಲಿರುವ ಸಮಾನ ಅಂಶಗಳನ್ನು ಬಲಗೊಳಿಸಿ ದೇಶದ ಐಕ್ಯತೆಯನ್ನು ಗಟ್ಟಿಗೊಳಿಸುವ ಬದಲು ಆರ್.ಎಸ್.ಎಸ್/ಬಿಜೆಪಿಗಳು ಈ ವೈವಿದ್ಯತೆಯ ಮೇಲೆ ಏಕರೂಪತೆಯನ್ನು ಹೇರಲು ಬಯಸುತ್ತಿವೆ. ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರನನ್ನೂ ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟಿಕ್ 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸುವ ಭಾರತೀಯ ಸಾಮಾಜಿಕ ಸಂರಚನೆಯನ್ನು ಗಟ್ಟಿಗೊಳಿಸುವುದರ ಮೂಲಕ ಭಾರತವನ್ನು ಒಂದು ಮಹಾಶಕ್ತಿಯಾಗಿಸಲು ಗಟ್ಟಿನೆಲೆ ಒದಗಿಸುವುದಕ್ಕೆ ಸಂಪೂರ್ಣ ವಿರುದ್ಧವಾಗಿದೆ.

ಕಳೆದ ಐದು ವರ್ಷಗಳಲ್ಲಿ ನಿರಂತರವಾಗಿ ಜಾರಿಗೊಳಿಸಿದ ಕೋಮುವಾದ ಅಜೆಂಡಾವು ದೇಶದಾದ್ಯಂತ ಕೋಮು ಹಿಂಸಾಚಾರಗಳನ್ನು ಹರಿಯಬಿಟ್ಟಿದೆ. ಇದರ ಮುಖ್ಯಾಂಶವಾಗಿ ಪ್ರಭುತ್ವ ಪ್ರಾಯೋಜಿತ ಗುಜರಾತಿನ ಕೋಮುವಾದಿ ನರಮೇದವನ್ನು ಕಾಣಬಹುದು. ಗುಜರಾತ್ ರಾಜ್ಯವು ನಮ್ಮ ಐದು ವರ್ಷಗಳ ಆಳ್ವಿಕೆಯ ಕಪ್ಪು ಚುಕ್ಕೆ ಎಂದು ಅದ್ವಾನಿಯವರು ಹೇಳಿದ್ದಾರೆ. ನೂರಾರು ಮುಗ್ಧ ಜೀವಗಳನ್ನು ಬಲಿತೆಗೆದುಕೊಂಡ ಇತರೆ ಅನೇಕ ಕೋಮುವಾದಿ ಆಕ್ಟೋಪಸ್ ಹರಿಯಬಿಟ್ಟ ಪ್ರಚಾರದಿಂದ ನಡೆದ ಇಂತಹ ಘಟನೆಗಳನ್ನು ಈ ದೇಶ ಮರೆತುಬಿಡಬೇಕೆಂದು ಅದ್ವಾನಿ ಬಯಸುತ್ತಾರೆ. ಉದಾಹರಣೆಯಾಗಿ ಗ್ರಾಹಂ ಸ್ಟೇನ್ಸ್ ಮತ್ತವನ ಮಕ್ಕಳನ್ನು ಜೀವಂತ ದಹಿಸಿದ ಘಟನೆ, ಅತ್ಯಾಚಾರ ಮತ್ತು ಕ್ರಿಶ್ಚಿನ್ ವಿರೋಧಿ ಧಾಳಿಗಳು, ಗುಜರಾತಿನ ಡಾಂಗ್ ಜಿಲ್ಲೆಯಲ್ಲಿ ಕ್ರಿಶ್ಚಿಯನ್ನರ ಮೇಲೆ ನಡೆದ ಅನೇಕ ಧಾಳಿಗಳು, ಗುಜರಾತಿನಲ್ಲಿ ಮತ್ತೆ ನಿರಂತರವಾಗಿ ಮುಸ್ಲೀಮರನ್ನು ಭಯಗ್ರಸ್ತಗೊಳಿಸುತ್ತಿರುವುದು, ಅತ್ಯಂತ ಹೇಯ ಅಮಾನವೀಯ ಅಪರಾದಕ್ಕೆ ಕಾರಣರಾದವರನ್ನು ರಕ್ಷಿಸಲು ಗುಜರಾತಿನ ಸರ್ಕಾರ ಮತ್ತವರ ಏಜೆನ್ಸಿಗಳು ಅನುಸರಿಸುತ್ತಿರುವ ಇಬ್ಬಗೆ ಧೋರಣೆ, ಬಿಗುವನ್ನು ಸೃಷ್ಟಿಸುತ್ತಿರುವುದು ಮತ್ತು ತ್ರಿಶೂಲ ಹಂಚಿಕೆ ಕಾರ್ಯಕ್ರಮಗಳು, ಹೀಗೆ ಪಟ್ಟಿ ಕೊನೆಯಿಲ್ಲದೆ ಬೆಳೆಯುತ್ತಲೇ ಹೋಗುತ್ತದೆ. ಕೋಮು ಹಗೆತನ ಮತ್ತು ವೈಷಮ್ಯವನ್ನು ಪೋಷಿಸಲು ಕಳೆದ ಐದು ವರ್ಷಗಳಲ್ಲಿ ಆಡಳಿತದ ಅಂಗಗಳು ಮತ್ತು ಪ್ರಭುತ್ವ ಶಕ್ತಿಯನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳಲಾಗಿದೆ. ವೈವಿದ್ಯತೆಯ ಭಾರತೀಯ ಸಮಾಜವನ್ನು ಗಟ್ಟಿಗೊಳಿಸುವುದರ ದೂರ ಉಳಿದ ವಾಜಪೇಯಿ ಸರ್ಕಾರದ ನೀತಿಗಳು ಸಮಾಜದ ಸ್ವಾಸ್ಥ್ಯವನ್ನೇ ಹಾಳುಗೆಡವಿದೆ. ಭಾರತವನ್ನು ಮಹಾನ್ ಶಕ್ತಿಯಾಗಿಸಲು ಈ ಸ್ವಾಸ್ಥ್ಯವೇ ಅತ್ಯಗತಿಯವಾದುದು.


ನಾವೀಗ ಆರ್ಥಿಕತೆಯನ್ನು ತೆಗೆದುಕೊಳ್ಳೋಣ. ಕಳೆದ ಐದು ವರ್ಷಗಳಲ್ಲಿ ಜಗತ್ತಿನಲ್ಲಿ ಭಾರತದ ಜನತೆಯನ್ನು ಬಡತನದ ಕೊಂಪೆಗೆ ನೂಕಿದ ಕುಖ್ಯಾತ ದಾಖಲೆಯನ್ನು ನಾವು ಕಾಣಬಹುದು. (ಜಗತ್ತಿನ ಬಡವರಲ್ಲಿ ಭಾರತದವರ ಸಂಖ್ಯೆ ಶೇ.25, ಆದರೆ ಭಾರತದ ಜನಸಂಖ್ಯೆ ಜಗತ್ತಿನ ಶೇ.17) ಮಾನವ ಅಭಿವೃದ್ಧಿಯಲ್ಲೂ ಭಾರತ ತೀವ್ರವಾಗಿ ಕುಸಿದಿದೆ. ಈ ಐದು ವರ್ಷಗಳಲ್ಲಿ ಅತಿಹೆಚ್ಚು ಹಸಿವಿನಿಂದ ಸತ್ತ ಪ್ರಕರಣಗಳು ದಾಖಲಾಗಿವೆ, ಹಾಗೆಯೇ ಈ ಐದು ವರ್ಷಗಳಲ್ಲಿ ಹತಾಶ ಆತ್ಮಹತ್ಯೆಗಳೂ ದೊಡ್ಡ ಸಂಖ್ಯೆಯಲ್ಲಿ ಜರುಗಿವೆ.


ಮಾನವ ಸಂಪನ್ಮೂಲವನ್ನು ಯಾವ ದೇಶ ತನ್ನ ಆಸ್ತಿ ಎಂದು ಪರಿಗಣಿಸದೆ, ಹೊರೆ ಎಂದು ಪರಿಗಣಿಸಿದರೆ ಆ ದೇಶ ಮಹಾನ್ ಶಕ್ತಿಯಾಗಲು ಸಾಧ್ಯವಾಗದು. ಆದರೆ ವಾಜಪೇಯಿ ಸರ್ಕಾರ ಇಂತಹ ನೀತಿಯನ್ನೇ ಅನುಸರಿಸುತ್ತಿದೆ.

ನಾವೀಗ ರಾಜಕೀಯದತ್ತ ಬರೋಣ. ಭಾರತವನ್ನು ಅಣುಶಕ್ತಿರಾಷ್ಟ್ರವನ್ನಾಗಿ ಪರಿವರ್ತಿಸಿದೆವು ಎಂಬುದು ಈ ಸರ್ಕಾರದ ದೊಡ್ಡ ಗಂಟಲಿನ ಪ್ರಚಾರ. ಈ ತಂತ್ರಜ್ಞಾನ ಭಾರತಕ್ಕೆ ಗೊತ್ತಿದೆ. ಅದು ಅಣ್ವಸ್ತ್ರವನ್ನು ಕೂಡ ತಯಾರು ಮಾಡಬಲ್ಲದು, ಆದರೆ ಜಗತ್ತನ್ನು ಅಣ್ವಸ್ತ್ರ ಮುಕ್ತವಾಗಿಸುವ ಅಮೂಲ್ಯ ಉದ್ದೇಶದಿಂದ ಹೀಗೆ ಮಾಡುತ್ತಿಲ್ಲ ಎಂಬುದು ಇಡೀ ಜಗತ್ತಿಗೆ 1974ರಿಂದಲೇ ಗೊತ್ತಿದ್ದ ವಿಚಾರ. ಇದನ್ನು ತಿರುವುಮುರುವುಗೊಳಿಸಲು ಮತ್ತು ಅಣ್ವಸ್ತ್ರ ಪರೀಕ್ಷೆ ನಡೆಸಲು ಈ ಸರ್ಕಾರ ಪ್ರಯತ್ನಿಸಿ ಪಾಕಿಸ್ತಾನವೂ ಅಂತಹದ್ದೇ ಪ್ರಯತ್ನಕ್ಕೆ ಕೈಹಾಕುವಂತೆ ಮಾಡಿತು. ಪಾಕಿಸ್ತಾನವೂ ಅಣ್ವಸ್ತ್ರ ಸ್ಥಾನಮಾನವನ್ನು ಗಳಿಸುವುದರೊಡನೆ ಹಲವಾರು ದಶಕಗಳ ಕಾಲ ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳಲ್ಲಿ ಹೊಂದಿದ ಹಿರಿಮೆಯನ್ನು ಒಂದೇ ಬಾರಿಗೆ ಹಾಳುಗೆಡವಲಾಯಿತು. ಈ ಸರ್ಕಾರದ ಒಂದೇ ಸಾಧನೆಯೆಂದರೆ ಭಾರತದ ಹಿರಿಮೆಯನ್ನು ಪಾಕಿಸ್ತಾನದ ಮಟ್ಟಕ್ಕಿಳಿಸಿದ್ದು.

ಇಡೀ ಹಾದಿಯಲ್ಲಿ, ಭಾರತದ ವಿದೇಶಾಂಗ ನೀತಿ ಹಲವಾರು ದಶಕಗಳ ಕಾಲ ಅಲಿಪ್ತ ಧೋರಣೆ ಮತ್ತು ಪೋರಾದಂತಹ ನೀತಿಗಳ ಮೂಲಕ ಜಗತ್ತಿನ ಮೂರನೇ ಜಗತ್ತಿನ ದೇಶಗಳ ನಾಯಕಸ್ಥಾನವನ್ನು ಅಲಂಕರಿಸಿದ್ದ ಭಾರತ ಈಗ ಸಂಪೂರ್ಣವಾಗಿ ಪಾಕಿಸ್ತಾನ ಕೇಂದ್ರಿತ ಎನ್ನುವ ಮಟ್ಟಕ್ಕಿಳಿದಿದೆ. ಜಾಗತಿಕ ನಾಯಕ ಸ್ಥಾನದಿಂದ ಈ ವಾಜಪೇಯಿ ನಾಯಕತ್ವದಲ್ಲಿ ಭಾರತವು ನೆರೆಯ ದೇಶದೊಡನೆ ಕಾದಾಡುವ ಜಗಳಗಂಟಿಯ ಮಟ್ಟಕ್ಕಿಳಿದಿದೆ. ಪರಿಣಾಮವಾಗಿ ಸಾಮ್ರಾಜ್ಯಶಾಹಿಯು 'ಶಾಂತಿಯ ದಲ್ಲಾಳಿ' ಹೆಸರಿನಲ್ಲಿ ಈ ಪ್ರದೇಶದ ವಿಚಾರಗಳಲ್ಲಿ ಮಧ್ಯಪ್ರವೇಶಿಸುವಂತಾಗಿದೆ. ಈಗ ಕೈಗೊಳ್ಳುತ್ತಿರುವ ಕ್ರಮಗಳನ್ನು ಇಡೀ ಜಗತ್ತೇ ಸ್ವಾಗತಿಸಿದೆಯಾದರೂ ಅವೆಲ್ಲವೂ ಕೇವಲ ರಾಜಕೀಯ ಲಾಭಲೆಕ್ಕಾಚಾರದ ಕ್ರಮಗಳು. ಅದ್ವಾನಿಯವರು ಭಾರತ-ಪಾಕಿಸ್ತಾನದ ನಡುವೆ ಉತ್ತಮಗೊಳ್ಳುತ್ತಿರುವ ಸಂಬಂದವನ್ನು ಹಿಂದೂ-ಮುಸ್ಲಿಂರ ನಡುವೆ ಉತ್ತಮಗೊಳ್ಳುತ್ತಿರುವ ಸಂಬಂದ ಎಂದು ಬಣ್ಣಿಸಿ ಭಾರತೀಯ ಮುಸಲ್ಮಾನರ ರಾಷ್ಟ್ರಪ್ರೇಮವನ್ನೇ ಅನುಮಾನದಿಂದ ನೋಡುವ ಎಚ್ಚರಿಕೆ ಕೊಡುವುದರಲ್ಲಿ ಇದನ್ನು ಕಾಣಬಹುದು. ದೇಶದೊಳಗಡೆ ಕೂಡ ಗಣತಾಂತ್ರಿಕ ರಾಜಕಾರಣವು ತೀವ್ರ ಒತ್ತಡ ಮತ್ತು ಬಳಲಿಕೆಯನ್ನು ಅನುಭವಿಸುತ್ತಿದೆ. ಏಕೆಂದರೆ ಈ ಸರ್ಕಾರವು ನಿರಂತರವಾಗಿ ಅನುಸರಿಸಿದ ನೀತಿಗಳು ಭಾರತೀಯ ಗಣತಾಂತ್ರಿಕ ರಾಜಕೀಯ ಸ್ಫೂರ್ತಿಗೆ ವಿರುದ್ಧವಾಗಿವೆ. ರಾಜ್ಯಗಳಲ್ಲಿ ಯಾರು (ಮಿತ್ರರೋ-ಶತ್ರುಗಳೋ) ಅಧಿಕಾರ ನಡೆಸುತ್ತಿದ್ದಾರೆ ಎಂಬುದರ ಮೇಲೆ ಕೇಂದ್ರ-ರಾಜ್ಯ ಸಂಬಂದಗಳನ್ನು ನೋಡಲಾಗುತ್ತಿದೆ. ಈ ನಗ್ನ ತಾರತಮ್ಯವು ಭಾರತೀಯ ರಾಜಕಾರಣದ ಆರೋಗ್ಯಕರ ಗಣತಾಂತ್ರಿಕ ಅಂಶದ ನಿರ್ಲಕ್ಷ್ಯದ ಮುಂದುವರಿಕೆಯಾಗಿದೆ.

ಒಟ್ಟಾರೆಯಾಗಿ, ಭಾರತ ಮಹಾಶಕ್ತಿಯಾಗಬೇಕಾದರೆ ಈ ಸರ್ಕಾರ ಅನುಸರಿಸುತ್ತಿರುವ ಎಲ್ಲಾ ನೀತಿಗಳನ್ನು ತಿರುವು-ಮುರುವುಗೊಳಿಸಬೇಕಾಗಿದೆ. ಈ ಹಿಂದೆ ಈ ಕೂಟವನ್ನು ರಾಷ್ಟ್ರೀಯ ಸರ್ವನಾಶ ಒಕ್ಕೂಟ ಎಂದು ಕರೆಯಲಾಗಿತ್ತು. ದುರಾದೃಷ್ಟವಶಾತ್ ಈ ಸರ್ಕಾರ ಐದು ವರ್ಷದ ಸಾಧನೆಗಳು ಇದನ್ನು ಸಾಧಿಸಿ ತೋರಿಸಿವೆ. ಭಾರತ, ಮಹಾನ್ ಶಕ್ತಿ ಯಾಗಬೇಕಾದರೆ, ಈ ಕೋಮುವಾದಿ ಕೂಟವನ್ನು ಎಷ್ಟು ಸಾಧ್ಯವೋ ಅಷ್ಟು ಪ್ರಭುತ್ವದ ಅಧಿಕಾರದಿಂದ ದೂರ ಇಡಬೇಕು.





ಟೀಚರ್ ಮಾಸಪತ್ರಿಕೆ 2ನೇ ವಾರ್ಷಿಕೋತ್ಸವ

ಅದೊಂದು ಶೈಕ್ಷಣಿಕ ಹಬ್ಬ. ಭಾರತ ಜ್ಞಾನ ವಿಜ್ಞಾನ ಸಮಿತಿಯು ಹೊರತರುತ್ತಿರುವ "ಟೀಚರ್" ಮಾಸಪತ್ರಿಕೆಯ 2ನೇ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ 2 ದಿನಗಳ ಶೈಕ್ಷಣಿಕ ಸಮಾವೇಶ. ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳಿಂದ ಸುಮಾರು 700 ಶಿಕ್ಷಕರು ಆಗಮಿಸಿದ್ದರು. ಶೈಕ್ಷಣಿಕ ಪುಸ್ತಕಗಳು, ಕ್ಯಾಸೆಟ್‌ಗಳ ಸ್ಟಾಲ್‌ಗಳು, ಸ್ವ ಸಹಾಯ ಗುಂಪಿನ ಮಹಿಳೆಯರು ತಯಾರಿಸಿದ ವಸ್ತುಗಳ ಸ್ಟಾಲ್‌ಗಳು, ಕ್ರೆಡಲ್ ಸಂಸ್ಥೆಯ ಪುನರ್ ನವೀಕರಿಸಬಹುದಾದ ಶಕ್ತಿಯ ಬಳಕೆಗೆ ಸಂಬಂಧಿಸಿದ ಪ್ರದರ್ಶನದ ವಾಹನ. ಸೌರಶಕ್ತಿಗೆ ಸಂಬಂಧಿಸಿದ ಸ್ಟಾಲ್, ಮಕ್ಕಳ ಆಟಿಕೆಗಳನ್ನು ಒಳಗೊಂಡ ಸ್ಟಾಲ್, ಶಿಕ್ಷಕರೇ ತಯಾರಿಸಿದ ಬೋಧನೆ – ಕಲಿಕಾ ಸಾಮಗ್ರಿಗಳ ಪ್ರದರ್ಶನ, ವರ್ಲ್ಡ್ ಸೋಷಿಯಲ್ ಫೋರಂನಲ್ಲಿ ಸಂಗ್ರಹಿಸಿದ ಪೋಸ್ಟರ್‌ಗಳ ಪ್ರದರ್ಶನ, ತುಮಕೂರು ಕಾರ್ಯಕರ್ತರ ಚಿತ್ರಕಲಾ ಪ್ರದರ್ಶನ ಹೀಗೆ ಹತ್ತು ಹಲವು ಸ್ಟಾಲ್‌ಗಳಿಂದ ಒಂದು ಶೈಕ್ಷಣಿಕ ಜಾತ್ರೆಯ ವಾತಾವರಣ ನಿರ್ಮಾಣವಾಗಿತ್ತು.

ಫೆಬ್ರವರಿ 16 ಮತ್ತು 17 ರಂದು ನಡೆದ ಹಬ್ಬಕ್ಕೆ ಮಂಡ್ಯದ ಗೆಳೆಯರು ಊಟ, ವಸತಿಯ ವ್ಯವಸ್ಥೆಗಳನ್ನು ಮಾಡಿದ್ದರು. ಶ್ರೀ ಶಂಕರೇಗೌಡ ಅವರು ಎಲ್ಲರನ್ನೂ ಆಹ್ವಾನಿಸಿದರು. ಈ ಬಸವರಾಜು ಪ್ರಾಸ್ತಾವಿಕ ಭಾಷಣ ಮಾಡಿದರು.

ಕಾರ್ಯಕ್ರಮ ರಾಷ್ಟ್ರಕವಿ ಕುವೆಂಪು ಅವರ ಭಾವಚಿತ್ರವನ್ನು ಅನಾವರಣಗೊಳಿಸುವ ಮೂಲಕ ನವೀನ ರೀತಿಯಲ್ಲಿ ಲಿಂಗದೇವರು ಹಳೆಮನೆಯವರು ಉದ್ಘಾಟಿಸಿ ಮಾತನಾಡಿದರು. ಪುಸ್ತಕದ ವಸ್ತುವನ್ನು ಮಸ್ತಕಕ್ಕೆ ರವಾನಿಸುವುದೇ ಶಿಕ್ಷಕರ ಕೆಲಸವಲ್ಲ ಪಠ್ಯಪುಸ್ತಕಗಳು ವಿಷಯದ ಕುರಿತು ಕೇವಲ ಸೀಮಿತ ಮಾಹಿತಿ ನೀಡುತ್ತವೆ. ಆದರಾಚೆಗಿನ ಬದುಕನ್ನು ಅರ್ಥಮಾಡಿಕೊಳ್ಳಲು ಅನುಕೂಲಕರ ಶಿಕ್ಷಣವನ್ನು ಮಕ್ಕಳಿಗೆ ನೀಡಬೇಕಾದ ಜವಾಬ್ದಾರಿ ಶಿಕ್ಷಕರ ಮೇಲಿದೆ. 1990ರಲ್ಲೇ ಭಾರತ ಸರ್ಕಾರವು 2000ದ ವೇಳೆಗೆ ಸಾರ್ವತ್ರಿಕ ಶಿಕ್ಷಣದ ಗುರಿಯನ್ನು ತಲುಪುತ್ತದೆ ಎಂದು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಸಹಿ ಹಾಕಿತ್ತು. ಅದನ್ನು ಇನ್ನೂ ಸಾಧಿಸಲಾಗಿಲ್ಲ. ಪ್ರಸ್ತುತ ಯೋಜನೆಗಳಿಂದ ಶಿಕ್ಷಣದ ಸಾರ್ವತ್ರೀಕರಣ ಸಾಧ್ಯವಿಲ್ಲ. ಆದ್ದರಿಂದ ಪರ್ಯಾಯ ಶಿಕ್ಷಣದ ಕುರಿತು ತಜ್ಞರು ಚಿಂತನೆ ಮಾಡಬೇಕಾದ ಅವಶ್ಯಕತೆ ಇದೆ. ಸರ್ಕಾರ 1ನೇ ತರಗತಿಯಿಂದ ಇಂಗ್ಲಿಷ್ ಅಳವಡಿಸುವ ಅಗತ್ಯವಿಲ್ಲ ಆರಂಭದಲ್ಲಿ ಮಾತೃಭಾಷಾ ಶಿಕ್ಷಣವೇ ದೊರೆಯಬೇಕು ಎಂದರು.

ಜಾತ್ಯಾತೀತ ಚೌಕಟ್ಟನ್ನೇ ಕಿತ್ತುಹಾಕುವಂತಹ ಹುನ್ನಾರ ನಡೆಯುತ್ತಿರುವ ಈ ಸಂದರ್ಭದಲ್ಲಿ ಏಕಪ್ರಕಾರದ ಪ್ರಾಥಮಿಕ ಶಿಕ್ಷಣ ಸಾಧ್ಯವೇ? ಶಿಕ್ಷಣವೆಂಬುದು ಅಧಿಕಾರ ಶಾಹಿಗಳ ಕೈಲಿರಬಾರದು. ಸಮುದಾಯದ ಕೈಯಲ್ಲಿರಬೇಕು ಎಂದರು.

ಟೀಚರ್ ಪತ್ರಿಕೆ ಉತ್ತಮವಾಗಿ ಮೂಡಿಬರುತ್ತಿದೆ. ಇನ್ನಷ್ಟು ವಿಶ್ಲೇಷಣಾತ್ಮಕ ಲೇಖನಗಳು ಹೊರಬಂದು ಶಿಕ್ಷಕ ಸಮುದಾಯಕ್ಕೆ ಬೆಂಬಲವಾಗಲಿ ಎಂದು ಆಶಿಸಿದರು.

ಕಾವೇರಿ ನಿಗಮದ ನಿರ್ದೇಶಕರಾದ ತಿಮ್ಮೇಗೌಡ, ಎಸ್.ಜಿ.ಆರ್.ಕ್ರಿಯೇಷನ್ಸ್ ಅವರು ಹೊರತಂದಿರುವ "ನಮ್ಮ ವಿಶ್ವ" ಸಿ.ಡಿ. ಬಿಡುಗಡೆ ಮಾಡಿ ಮಾತನಾಡಿದರು. ಡಾ.ಮಹದೇವ ಅವರು, ಈ.ನಂಜಪ್ಪ ಅವರ "ನನ್ನ ಶಾಲಾ ದಿನಗಳು", ಶ್ರೀನಿವಾಸಗೌಡರ ಮಕ್ಕಳ ಮನರಂಜನೆಯ ಆಟಗಳು, ಲಕ್ಷ್ಮೀನಾಥ ಗುಪ್ತ ಅವರ ವಿಜ್ಞಾನ ಕ್ವಿಜ್ ಪುಸ್ತಕಗಳನ್ನು ಬಿಡುಗಡೆ ಮಾಡಿ ಮಾತನಾಡಿದರು.

ರಾಷ್ಟ್ರಕವಿ ಕುವೆಂಪು ಅವರ ಪೋಸ್ಟರನ್ನು ಟಿ.ಎಲ್. ಪುರುಷೋತ್ತಮ್ ಬಿಡುಗಡೆ ಮಾಡಿದರು. ಪತ್ರಿಕೆ ಸಂಪಾದಕಿ ಜಿ.ವಿನುತರವರು ಪತ್ರಿಕೆಯ ಒಂದು ವರ್ಷದ ಪಯಣವನ್ನು ಪರಿಚಯಿಸಿದರು. ಅಧ್ಯಕ್ಷರಾದ ಪ್ರೊ.ಎಂ.ಕೆ.ಸೂರಪ್ಪನವರು ದೇಶದ ಅಭಿವೃದ್ಧಿ ಅಂಕಿ ಅಂಶಗಳಿಂದ ಮಾತ್ರ ಸಾಧ್ಯವಿಲ್ಲ. ಅಭಿವೃದ್ಧಿ ಎಂದರೆ ಸ್ತ್ರೀ ಸಮಾನತೆ, ಸಮಾನ ಶಿಕ್ಷಣ ಹಾಗೂ ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವವನ್ನು ಬಿತ್ತುವುದು ಎಂದು ಹೇಳಿದರು.

"ಶಿಕ್ಷಣದ ಸಾರ್ವತ್ರೀಕರಣ ನಮ್ಮ ಬದ್ಧತೆ" ಎಂಬ ವಿಷಯದ ಬಗ್ಗೆ ಆಳುವ ಪಕ್ಷವನ್ನು ಒಳಗೊಂಡಂತೆ ಎಲ್ಲ ರಾಜಕೀಯ ಪಕ್ಷಗಳಿಂದ ವಿಷಯ ಮಂಡಿಸಲು ಆಹ್ವಾನಿಸಲಾಗಿತ್ತು. ಆದರೆ ಆಗಮಿಸಿದವರು ಸಿ.ಪಿ.ಐ (ಎಂ) ಮತ್ತು ಸಿ.ಪಿ.ಐ ಪಕ್ಷಗಳು ಮಾತ್ರ. ಗಂಗಾಧರ ಮೂರ್ತಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. 1986ರ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣದ ಎರಡು ಅಂಶಗಳನ್ನು ಒಳಗೊಂಡಿತ್ತು, ಮೊದಲನೆಯದು ಮಗುವಿನಲ್ಲಿ ರಾಷ್ಟ್ರೀಯತೆಯನ್ನು ಬೆಳೆಸುವುದು. ಶಿಕ್ಷಕರಿಗೆ ಶಿಕ್ಷಣದ ಬಗ್ಗೆ ಕಾಳಜಿಯಿರಬೇಕು. ಶಿಕ್ಷಕ ಅನ್ವೇಷಕರ ರೀತಿ ಕೆಲಸ ಮಾಡಬೇಕು. ಇಲ್ಲವಾದಲ್ಲಿ ಶಿಕ್ಷಣ ಕ್ಷೇತ್ರ ಅಥವಾ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಮಗುವಿನ ಸುತ್ತಮುತ್ತಲ ಪರಿಸರವನ್ನು ಅರಿಯುವಂತಹ ಪಠ್ಯಕ್ರಮ ಜಾರಿಗೆ ಬರಬೇಕು. ಅದೂ ಶಿಕ್ಷಕರೇ ರಚಿಸಬೇಕು.

ಎರಡನೆಯದು ಶಿಕ್ಷಣದ ಸಾರ್ವತ್ರೀಕರಣ: ಶಿಕ್ಷಣದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳಿರಬೇಕು. ಇದಿಲ್ಲದ ಶಿಕ್ಷಣ ಸ್ಥಗಿತವಾಗುತ್ತದೆ ರಾಜಕೀಯ ಇಚ್ಛಾಶಕ್ತಿ ಎಲ್ಲಿಯವರೆಗೆ ಇರುವುದಿಲ್ಲವೋ ಅಲ್ಲಿಯವರೆಗೆ ಶಿಕ್ಷಣದ ಅಭಿವೃದ್ಧಿ ಸಾಧ್ಯವಿಲ್ಲ. ಇತ್ತೀಚಿನ ವಿಶ್ವಬ್ಯಾಂಕ್ ವರದಿಗಳ ಪ್ರಕಾರ ಭಾರತವು 53 ಬಿಲಿಯನ್ ಡಾಲರ್ ನೆರವು ಪಡೆದಿರುವ ಅತಿ ದೊಡ್ಡ ಸಾಲಗಾರ ದೇಶವಾಗಿದೆ. ಪ್ರಾಥಮಿಕ ಶಾಲೆಯ ಮಕ್ಕಳ ಸಂಖ್ಯೆ ಇಳಿಮುಖವಾಗುತ್ತಿದೆ. ಹಾಗೂ ವಿದೇಶೀ ಸಾಲ ಹೆಚ್ಚಾಗಿರುವುದನ್ನು ಅಂಕಿ ಅಂಶಗಳು ತೋರಿಸುತ್ತವೆ ಎಂದರು.

ಸಿ.ಪಿ.ಐ (ಎಂ) ಕಾರ್ಯದರ್ಶಿ ಜಿ.ಎನ್. ನಾಗರಾಜ್ ಅವರು ತಮ್ಮ ಪಕ್ಷದ ನಿಲುವನ್ನು ವ್ಯಕ್ತಪಡಿಸಿದರು.

ತಮ್ಮ ಪಕ್ಷ ಕನಿಷ್ಠ 12 ವರ್ಷಗಳ ಉಚಿತ ಶಿಕ್ಷಣ ನೀಡುವ ಗುರಿ ಹೊಂದಿದೆ. ಕಿರಿಯ ಪ್ರಾಥಮಿಕ ಶಾಲೆಗಳು 2 ಪಟ್ಟು, ಹಿರಿಯ ಪ್ರಾಥಮಿಕ ಶಾಲೆಗಳು 3 ಪಟ್ಟು, ಪ್ರೌಢ ಶಾಲೆಗಳು 5 ಪಟ್ಟು, ಪಿ.ಯು ಕಾಲೇಜುಗಳು 7 ಪಟ್ಟು ಹೆಚ್ಚಾಗಲು ಅವಶ್ಯಕತೆಯಿದೆ. ಇದರಿಂದಾಗಿ ಶಿಕ್ಷಕರ ಸಂಖ್ಯೆ 4 ಪಟ್ಟು ಹೆಚ್ಚಾಗುವ. ಶಿಕ್ಷಣಕ್ಕೆ ಬೇಕಾದ ಮೂಲಸೌಲಭ್ಯಗಳಿಗಾಗಿ ಅನೇಕರಿಗೆ ಉದ್ಯೋಗ ದೊರೆಯುತ್ತದೆ 'ಎಲ್ಲರಿಗೂ ಶಿಕ್ಷಣ ಎಲ್ಲರಿಗೂ ಉದ್ಯೋಗ' ಇದು ನಮ್ಮ ಗುರಿ. ಪ್ರಸ್ತುತ ರಾಷ್ಟ್ರ ಮತ್ತು ರಾಜ್ಯ ಬಜೆಟ್‌ನಲ್ಲಿ ಶಿಕ್ಷಣಕ್ಕೆ 2 ರಿಂದ 3% ಮಾತ್ರ ಮೀಸಲಿಡಲಾಗಿದೆ. 10% ನಷ್ಟು ಹಣವನ್ನು ಮೀಸಲಿಡಬೇಕೆಂದು ನಮ್ಮ ಒತ್ತಾಯ. ಶಸ್ತ್ರಾಸ್ತ್ರಗಳಿಗೆ ಖರ್ಚು ಮಾಡುವ ಅರ್ಧದಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಡಬೇಕು. ನಮ್ಮ ದೇಶದಲ್ಲಿ ತೆರಿಗೆ ಕೊಡದೆ ವಂಚಿಸಿದ ಕಪ್ಪು ಹಣ 6 ಲಕ್ಷ ಕೋಟಿ ರೂ. ಇದಕ್ಕೆ ತೆರಿಗೆ ವಿಧಿಸಿದರೇನೇ ಎಷ್ಟೊಂದು ಆದಾಯ ಪಡೆಯಬಹುದು. ಬಜೆಟ್‌ನಲ್ಲಿ ಹೆಚ್ಚಿನ ರಿಯಾಯ್ತಿಗಳನ್ನು ನೀಡಲಾಗಿದೆ. ಆದರೆ ಈ ರಿಯಾಯ್ತಿ ಯಾರಿಗಾಗಿ? ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತ ಅವಕಾಶ ನೀಡಲಾಗಿದೆ. ರಿಲೆಯನ್ಸ್ ಕಂಪನಿಗೆ 16 ಸಾವಿರ ಕೋಟಿ ತೆರಿಗೆ ವಿನಾಯ್ತಿ, ಐ.ಟಿ.ಸಿ ಕಂಪನಿಗೆ 800 ಕೋಟಿ ರೂ ತೆರಿಗೆ ವಿನಾಯ್ತಿ ನೀಡಲಾಗಿದೆ. ಇಂತಹ ವಿನಾಯ್ತಿಗಳನ್ನು ನೀಡದಿದ್ದರೆ ಶಿಕ್ಷಣಕ್ಕೆ ಸಾಕಷ್ಟು ಹಣ ಒದಗಿಸಲು ಕೊರತೆಯೇನೂ ಇರುವುದಿಲ್ಲ ಎಂದರು.

ಶಿಕ್ಷಣ ಸಾರ್ವತ್ರೀಕರಣವಾಗ ಬೇಕು, ಇದಾಗದಿರುವುದು ಆಳುವ ಸರ್ಕಾರದ ಜನರ ಮನದ ಬಡತನ. ಪಶ್ಚಿಮಬಂಗಾಳದಲ್ಲಿ District primary Education Council ಗೆ ಶಿಕ್ಷಣಕ್ಕೆ ಸಂಬಂಧಪಟ್ಟ ಎಲ್ಲ ಅಧಿಕಾರಗಳನ್ನೂ ನೀಡಲಾಗಿದೆ. ಉಚಿತ ಸಮವಸ್ತ್ರ, ಊಟದ ವ್ಯವಸ್ಥೆ ಮೊದಲು ಪ್ರಾರಂಭವಾದದ್ದೇ ಪಶ್ಚಿಮ ಬಂಗಾಳದಲ್ಲಿ, 1983ರಲ್ಲಿ ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆಯವರು ಇದನ್ನು ಜಾರಿಗೆ ತಂದರು. ಕೂಲಿಕಾರರ ಮಕ್ಕಳು ಕನಿಷ್ಠ 12 ವರ್ಷಗಳ ಉಚಿತ ಶಿಕ್ಷಣ ಪಡೆಯಬೇಕು. ಕೂಲಿಕಾರರು ವರ್ಷದಲ್ಲಿ ಕನಿಷ್ಠ 250 ದಿನಗಳ ಕಾಲ ದುಡಿದು ಕನಿಷ್ಠ ಕೂಲಿ ಪಡೆಯುವಂತಾಗಬೇಕು, ಸರ್ವರಿಗೂ ಸಾರ್ವಜನಿಕ ಶಿಕ್ಷಣವನ್ನು ಜಾರಿಗೆ ತರಬೇಕು, ಅಂದರೆ ಖಾಸಗಿ ಸಂಸ್ಥೆಗಳೆ ಇರಬಾರದು. ಧಾರ್ಮಿಕ ಶಿಕ್ಷಣ ಸಂಸ್ಥೆಗಳನ್ನು ಮುಚ್ಚಬೇಕು. ವೈಭವಯುತ ಕಟ್ಟಡಗಳಿಂದ ಮಾತ್ರ ಎಲ್ಲರಿಗೂ ಶಿಕ್ಷಣ ದೊರೆಯುವಂತಾಗುವುದಿಲ್ಲ. ಮಗುವಿನ ಅನುಭವದ ಜೊತೆ ಶಿಕ್ಷಣ ಸಮೀಕರಿಸಬೇಕು. ಎಲ್ಲ ಬಗೆಯ ಶಿಕ್ಷಣವನ್ನೂ ಮಾತೃಭಾಷೆಯಲ್ಲೇ ನೀಡಬೇಕು. ತ್ರಿಭಾಷಾ ಸೂತ್ರ ಕಿತ್ತುಹಾಕಬೇಕು. ಯೋಜನೆಗಳು ಮೇಲಿನಿಂದ ಕೆಳಗಿನವರೆಗೆ ಪರಿಣಾಮಕಾರಿಯಾಗಿ ತಲುಪ ಬೇಕಾದರೆ ಜನಾಂದೋಲನಗಳು ಮತ್ತು ಚಳುವಳಿಗಳು ತೀರಾ ಅವಶ್ಯಕ. ರಾಜ್ಯದಲ್ಲಿ 5 ಕೋಟಿ ಮಕ್ಕಳಿಗೆ ಶಿಕ್ಷಣ ದೊರೆಯಬೇಕಾದರೆ ಇಂಗ್ಲಿಷ್ ಭಾಷೆ ತೊಡಕಾಗಿದೆ. ಸ್ವ ಇಚ್ಛೆಯಿಂದ ಕಲಿಯುವರಿಗೆ ಮಾತ್ರ ಇಂಗ್ಲಿಷ್ ಭಾಷೆ ಕಲಿಸಿದರೆ ಸಾಕು. ಅದನ್ನು ಯಾವ ಹಂತದಲ್ಲಿ ಬೇಕಾದರೂ ಕಲಿಯಬಹುದು. ಪರೀಕ್ಷೆ ಮಾತ್ರ ಇರಬಾರದು. ಈ ಮೇಲಿನ ಎಲ್ಲ ಅಂಶಗಳನ್ನು ಶಿಕ್ಷಣ ಸಾರ್ವತ್ರೀಕರಣಕ್ಕಾಗಿ ತಮ್ಮ ಪಕ್ಷ ಬದ್ಧತೆಯನ್ನು ಹೊಂದಿದೆ ಎಂದರು.

ಸಿ.ಪಿ.ಐ ಪಕ್ಷದ ಕಾರ್ಯದರ್ಶಿ ಡಾ.ಸಿದ್ಧನಗೌಡ ಪಾಟೀಲರು ಶಿಕ್ಷಣದ ಸಾರ್ವತ್ರೀಕರಣ ಮತ್ತು ಬದ್ಧತೆಯ ಬಗ್ಗೆ ಪಕ್ಷದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

* ಶಿಕ್ಷಣದ ಸಾರ್ವತ್ರೀಕರಣಕ್ಕೆ ಸುಮಾರು 25000 ಕೋಟಿ ರೂಗಳ ಅವಶ್ಯಕತೆ ಇದೆ.
* ಯಾವ ಯೋಜನೆಗಳು ದೋಷಪೂರಿತವಾಗಿರುವುದಿಲ್ಲ. ಆದರೆ, ಅತೀ ಆಸಕ್ತಿ, ಅತೀ ನಿರಾಸಕ್ತಿಗಳಿಂದ ಯೋಜನೆಗಳು ವಿಫಲವಾಗುತ್ತವೆ.
* ಶಿಕ್ಷಣದ ಸಾರ್ವತ್ರೀಕರಣದ ಬದಲು ವ್ಯಾಪಾರೀಕರಣವಾಗುತ್ತಿದೆ. ಹಿಂದಿನ ಕಾಲದಲ್ಲಿ (1900) ಇದ್ದ ಕಮ್ಮಾರಿಕೆಯೇ ಇಂದಿನ Automobile Engineering ಆಗಿ

ಪುಸ್ತಕದ ಹಬ್ಬ - ಶಿಕ್ಷಕರ ಸಂಭ್ರಮ

ಆವರಣದ ತುಂಬೆಲ್ಲಾ ಪುಸ್ತಕಗಳ ಪ್ರದರ್ಶನದ ಮಳಿಗೆಗಳು, ಗೋಡೆಗಳ ಮೈಯಲ್ಲೆಲ್ಲಾ ವಿವಿಧ ಭಿತ್ತಿ ಪತ್ರಗಳ ಚಿತ್ರಗಳು, ಮಳಿಗೆಗಳ ತುಂಬ ಶಿಕ್ಷಕರ ಗುಂಪು. ಸಂಭ್ರಮ, ಉಲ್ಲಾಸ ಉತ್ಸಾಹ ಇವು ಬಿ.ಜಿ.ವಿ.ಎಸ್ ಏರ್ಪಡಿಸಿದ್ದ 2ನೇ ವರ್ಷದ 'ಟೀಚರ್ ಪತ್ರಿಕೆಯ ವಾರ್ಷಿಕೋತ್ಸವ ಹಾಗೂ ರಾಜ್ಯ ಮಟ್ಟದ ಶೈಕ್ಷಣಿಕ ಸಮಾವೇಶದಲ್ಲಿ ಕಂಡು ಬಂದ ದೃಶ್ಯಗಳು. ಹೌದು, ಇಲ್ಲಿ ನಿಜವಾಗಿಯೂ ಶಿಕ್ಷಕರು ತಮ್ಮ ಪತ್ರಿಕೆಯ 2ನೇ ಹುಟ್ಟುಹಬ್ಬವನ್ನು ಪುಸ್ತಕಗಳ ಜೊತೆ ಆಚರಿಸಿಕೊಂಡರು. ಪುಸ್ತಕಗಳು ಶಿಕ್ಷಕರ ಜೊತೆ ಮಾತಾಡಿದ್ದವು.

ಕಾರ್ಯಕ್ರಮದ ಭಾಗವಾಗಿ ಹಮ್ಮಿಕೊಂಡಿದ್ದ ಚರ್ಚೆ, ವಿವಿಧ ಗೋಷ್ಠಿಗಳು ನಡೆಯುತ್ತಿದ್ದ ವಿಶಾಲವಾದ ಕಲಾಮಂದಿರದ ಆವರಣ ಶಿಕ್ಷಕರ ಗುಂಪು ಗುಂಪು ಓಡಾಟಕ್ಕೆ ಸಾಕ್ಷಿಯಾದವು. ಜಾಗತೀಕರಣದ ವಿರುದ್ಧ ಹಾಗೂ ಅದರ ಅಪಾಯಗಳನ್ನು ಪರಿಚಯಿಸುವ ಭಿತ್ತಿ ಪತ್ರಗಳು ಗಮನ ಸೆಳೆದು ಮೊದಲನೆಯ ವಾಗಿದ್ದವು. ಸ್ವಸಹಾಯ ಮಹಿಳಾ ಸಂಘಗಳು ತಾವೇ ತಯಾರಿಸಿದ್ದ ಚಹಾ, ಮಸಾಲೆ ಪದಾರ್ಥಗಳು ಮುಂತಾದವು ಗಳ ಮಾರಾಟ ಬಿ.ಜಿ.ವಿ.ಎಸ್ ನ ಬಹುಮುಖ ಕಾರ್ಯಗಳನ್ನು ನೆನಪಿಸುತ್ತಿದ್ದವು. ಶಿಕ್ಷಣದ ಬೋಧನ ಸಾಮಗ್ರಿಗಳ ಪ್ರದರ್ಶನ, ಅವುಗಳನ್ನು ಬಳಸಿಕೊಳ್ಳುವ ರೀತಿಯಲ್ಲಿನ ವಿವಿಧ ಆಯಾಮಗಳ ಬಗ್ಗೆ ಶಿಕ್ಷಕರು ಗಂಭೀರ ಚರ್ಚೆಯಲ್ಲಿ ತೊಡಗಿದ್ದುದ್ದು, ಹಿಂದಿನ ತುಮಕೂರು ಪ್ರಥಮ ಸಮಾವೇಶಕ್ಕೆ ಬಂದಿರುವರು ತಮ್ಮ ಹಿಂದಿನ ನೆನಪುಗಳನ್ನು ಹೊಸಬರ ಜೊತೆ ಹಾಗೂ ತಮ್ಮ ಹಳೆಯ ಗೆಳೆಯರ ಜೊತೆ ಹಂಚಿಕೊಳ್ಳುತ್ತಿದ್ದುದ್ದು ವಿಶೇಷವಾಗಿತ್ತು.

ನೀಕಾರಿಕೆಯು- Text-tile Engineering ಆಗಿ ಪರಿವರ್ತನೆಯಾಗಿದೆ. ಉದ್ಯೋಗವನ್ನು ಮಾತ್ರ ಅಭಿವೃದ್ಧಿಗೊಳಿಸಲಾಗಿದೆಯೇ ಹೊರತು ಅದನ್ನು ಮಾಡುತ್ತಿರುವ ಕಾರ್ಮಿಕರನ್ನಲ್ಲ.

* ಬಾಲಕಾರ್ಮಿಕತೆಯನ್ನು ನಿರ್ಮೂಲನ ಗೊಳಿಸುವವರೆಗೂ ಶಿಕ್ಷಣದ ಸಾರ್ವತ್ರೀಕರಣ ಸಾಧ್ಯವಿಲ್ಲ. ಇದರ ಕುರಿತಂತೆ ಗಂಭೀರ ಚಿಂತನೆಯ ಅವಶ್ಯಕತೆ ಇದೆ.

* ಸಮುದಾಯದ ಸಕ್ರೀಯ ಪಾಲ್ಗೊಳ್ಳುವಿಕೆಯ ಕೊರತೆಯೂ ಕೂಡ ಒಂದು ಕಾರಣವಾಗಿದೆ. ಶಾಲೆಯಲ್ಲಿರುವ ವಿವಿಧ ಸಮಿತಿಗಳಲ್ಲಿ ರಾಜಕೀಯ ಹಸ್ತಕ್ಷೇಪಸಲ್ಲದು.

ಅಧ್ಯಕ್ಷತೆ ವಹಿಸಿದ್ದ ಪ್ರೊ.ಲಿಂಗದೇವರು ಹಳೆಮನೆಯವರು ಮಾತನಾಡಿ ಶಿಕ್ಷಣದ ಸಾರ್ವತ್ರೀಕರಣಕ್ಕೆ ಸಂಬಂಧಪಟ್ಟಂತೆ ಕ್ಯೂಬಾ ಮತ್ತು ನಮ್ಮ ದೇಶದ ಹೋಲಿಕೆಯನ್ನು ಕೊಟ್ಟರು, ಪಶ್ಚಿಮ ಬಂಗಾಳವನ್ನು ಮಾದರಿಯಾಗಿ ತೆಗೆದುಕೊಂಡು ಶಿಕ್ಷಣದ ಸಾರ್ವತ್ರೀಕರಣ ಮಾಡಬೇಕಾಗಿದೆ ಎಂದರು.

ಫಿಡೆಲ್‌ಕಾಸ್ಟ್ರೋರ ಶಿಕ್ಷಣದ ಸಾರ್ವತ್ರೀಕರಣದ ಯೋಜನೆ ಬಗ್ಗೆ ಅತಿಮುಖ್ಯ ಅಂಶವನ್ನು ವಿವರಿಸಿದರು. 6 ವರ್ಷಗಳ ಕಾಲ ಉನ್ನತ ಶಿಕ್ಷಣವನ್ನು ನಿಲ್ಲಿಸಿ ಎಲ್ಲ ಯುವಕರೂ ಬೆಳಗಿನ ಹೊತ್ತು ಹೊಲಗದ್ದೆಗಳಲ್ಲಿ ದುಡಿಯುವುದು, ರಾತ್ರಿ ವೇಳೆ ಶಿಕ್ಷಣವನ್ನು ನೀಡುವ ಯೋಜನೆ ಮಾಡಿದರು. ಬ್ರೆಜಿಲ್ ದೇಶದ ಪಾದ್ರಿ ಸಾಕ್ಷರತೆಗಾಗಿ ಜೀವನವನ್ನೇ ಮುಡುಪಾಗಿಟ್ಟರು. ನನ್ನ ಒಂದೇ ಕನಸು "ಒಂದು ದಿನ ಭೂಗೋಳದಲ್ಲಿ ಒಬ್ಬ ಅನಕ್ಷರಸ್ಥನೂ ಇರಲಾರದ ದಿನ ಬರುತ್ತದೆ" ಎಂದು ಅವರು ನಂಬಿದ್ದರು ಎಂದು ಹಳೆಮನೆ ತಿಳಿಸಿದರು.

ಎರಡನೇ ದಿನ

ಬೆಳಿಗ್ಗೆ 8.30ಕ್ಕೆ ಎಲ್ಲ ಸ್ಟಾಲ್‌ಗಳು ಆರಂಭಗೊಂಡು ಜಾತ್ರೆಯ ಸಂಭ್ರಮ ತಂದಿತ್ತು. ಸಮಾಂತರ ಗೋಷ್ಠಿಗಳ ಅತಿಥಿಗಳು ಆಗಮಿಸತೊಡಗಿದರು. 9.30ಕ್ಕೆ "ಟೀಚರ್ ಪತ್ರಿಕೆ" ಯು ಬಗ್ಗೆ ಪ್ರತಿಕ್ರಿಯೆ ಅವಧಿ ಆರಂಭಗೊಂಡಿತು. ಪತ್ರಿಕೆಯ ಸಂಪಾದಕ ಮಂಡಳಿಯ ಅನೇಕರು ಹಾಜರಿದ್ದರು. ಪುಟಾಣಿ ವಿಜ್ಞಾನ ಸಂಪಾದಕರಾದ ಚಳ್ಳಕೆರೆ ಯುರ್ರಿಸ್ವಾಮಿ ಮತ್ತು 'ಐಕ್ಯರಂಗ' ಸಂಪಾದಕರಾದ ಗುರುಶಾಂತ್ ಅವರು ಪತ್ರಿಕೆಯನ್ನು ವಿಶ್ಲೇಷಿಸಿ ಮಾತನಾಡಿದರು.

ಎರಡನೇ ಗೋಷ್ಠಿಯ 'ವೈಚಾರಿಕತೆ ಮತ್ತು ಶಿಕ್ಷಣ' ಎಂಬ ವಿಷಯದ ಮೇಲೆ ನಡೆಯಿತು. ವಿ.ಎಸ್.ಲಕ್ಷ್ಮಿನಾರಾಯಣ್ ಮತ್ತು ಫಾಲಾಕ್ಷಯ್ಯ ಇವರು ವಿಷಯ ಮಂಡಿಸಿದರು. ಹೆಚ್.ಎಲ್.ಕೇಶವ ಮೂರ್ತಿ ಅಧ್ಯಕ್ಷತೆ ವಹಿಸಿದ್ದರು.

ಮೂರನೇ ಗೋಷ್ಠಿಯಲ್ಲಿ 'ಇತ್ತೀಚಿನ ಶೈಕ್ಷಣಿಕ ಕಾರ್ಯಕ್ರಮಗಳು', 'ಹೊಸ ಶೈಕ್ಷಣಿಕ ಪ್ರಯತ್ನಗಳು", ವಿಷಯಗಳನ್ನು ಆಯೋಜಿಸಲಾಗಿತ್ತು.

ಸಮಾರೋಪ ಸಮಾರಂಭದಲ್ಲಿ ಡಿ.ಎಸ್.ಇ.ಆರ್.ಟಿ ಸಹ ನಿರ್ದೇಶಕರಾದ ಪಿ.ಶಾರದಮ್ಮ, ಮಂಗಳೂರು ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ಡಾ.ಬಿ.ಹನುಮಯ್ಯ ರಾಜ್ಯ ರೈತ ಸಂಘದ ಕೆ.ಎಸ್.ಪುಟ್ಟಣ್ಣಯ್ಯ, ಶಿವಲಿಂಗಯ್ಯ, ಹೆಚ್.ಹೊನ್ನಪ್ಪ ಮಾಜಿ ಶಾಸಕರು, ಮರಿತಿಬ್ಬೇಗೌಡ ವಿಧಾನ ಪರಿಷತ್ ಸದಸ್ಯರು ಇವರು ಭಾಗವಹಿಸಿದ್ದರು.

ದೇವಣ್ಣ ಭಾಗವಹಿ ಎಲ್ಲರಿಗೆ ವಂದನೆ ಸಲ್ಲಿಸಿದರು.

ಎಣೆಯಿಲ್ಲದ ಅಸ್ಸಾಂ ಸಂಗಾತಿಗಳ ಪ್ರೀತಿ-ಆದರ



ನಮಗೆಲ್ಲಾ ಅಸ್ಸಾಂ ಎಂದರೆ ಭಯೋತ್ಪಾದಕರು, ಪ್ರತ್ಯೇಕವಾದಿಗಳು ನೆನಪಾಗಬಹುದು. ಆದರೆ ಆ ಅಸ್ಸಾಂ ನಾಡಿನ ಜನರ ಜೀವನದ ಶೈಲಿ, ಅವರ ಬೇಕು ಬೇಡಗಳು ನಮ್ಮ ನೆನಪಿಗೆ ಬರುವುದಿಲ್ಲ. ಮಾಧ್ಯಮಗಳೂ ಈಶಾನ್ಯ ಭಾರತದ ಜನಕ್ಕೆ ವಂಚನೆ ಮಾಡುತ್ತಿವೆ ಎನ್ನುವ ಅಭಿಪ್ರಾಯವಂತೂ ಸತ್ಯವಾಗಿದೆ.

ಈಶಾನ್ಯ ಭಾರತದ ಜನರ ಅದರಲ್ಲೂ ಅಸ್ಸಾಂ ಜನರ ಹೃದಯವಂತಿಕೆ, ಪ್ರಕೃತಿಯಷ್ಟೇ ಕಲ್ಮಶರಹಿತವಾಗಿದೆ. ಎತ್ತರೆತ್ತರದ ಬೆಟ್ಟದ ಸಾಲುಗಳು, ಗಿರಿ ಶಿಖರಗಳು, ಸದಾ ಹಚ್ಚ ಹಸಿರಾಗಿರುವ ವನಗಳು, ಅಡ್ಡ ಅಡ್ಡವಾಗಿ ಪರ್ವತಗಳಂತೆ ವಿಜೃಂಭಿಸುವ ಆ ತಪೋವನಗಳು, ಸದಾ ಹರಿಯುವ, ಸುರಿಯುವ ಝರಿಗಳು, ಬೇಸಿಗೆ ಮಳೆಗಾಲವೆಂಬ ವ್ಯತ್ಯಾಸ ಕಾಣದಂತ ಭೂ ಪ್ರದೇಶಗಳು, ಫಲಭರಿತ ಹಲಸಿನ ಮರಗಳೂ, ಬಾಳೇ ಗಿಡಗಳು, ಅವುಗಳ ಮಧ್ಯ ಏರಿಳಿತದ ರಸ್ತೆಗಳು, ರಸ್ತೆಯ ಪಕ್ಕದಲ್ಲೇ ಹರಿಯುವ ನೀರಿನ ತೊರೆಗಳು.

ಆ ದೂರದ ಬೆಟ್ಟದ ತುದಿಯಲ್ಲೊಂದು ಪುಟ್ಟ ಮನೆ, ಈ ದೂರದ ಬೆಟ್ಟದ ಮಧ್ಯದಲ್ಲೊಂದು ದೊಡ್ಡ ಮನೆ. ಭತ್ತದ ಗದ್ದೆಗಳು, ಗದ್ದೆಗಳಲ್ಲಿ ನಾಟಿ ಮಾಡುತ್ತಿರುವ ಅಸ್ಸಾಂ ಮಹಿಳೆಯರು. ಅವರ ಉಡುಗೆ ತೊಡುಗೆಯೇ ಅವರ ಸಾಂಸ್ಕೃತಿಕ ಪ್ರತೀಕ. ಅಸ್ಸಾಂನ ಗ್ರಾಮಾಂತರ ಪ್ರದೇಶ ಯಾವ ಉದಾರೀಕರಣ, ಜಾಗತೀಕರಣ ಅಬ್ಬರದ ಬಲೆಗೆ ಬೀಳದ ಸಂಪ್ರದಾಯಸ್ಥ ಜೀವನ, ಆ ಜೀವನದ ಸ್ವಾದ ಅನುಭವಿಸುವವರಿಗೆ ಗೊತ್ತು. ಆ ಅಸ್ಸಾಂನ ಸಾಂಸ್ಕೃತಿಕ ಜೀವನದ ಶೈಲಿ.

ಕೇಂದ್ರ-ರಾಜ್ಯ ಸರ್ಕಾರಗಳ ತಾರತಮ್ಯದಿಂದ ಯಾವ ಆಧುನಿಕ ಸೌಲಭ್ಯಗಳಿಲ್ಲದೆ ವಂಚಿತರಾಗಿ ತಾವಾಯಿತು ತಮ್ಮ ಪಾಡಾಯಿತು ಎಂದು ಪ್ರಕೃತಿಯ ಮಡಿಲಲ್ಲಿ ಮಿಂದು ಬದುಕುತ್ತಿರುವ ಈ ಹೃದಯಗಳ ವೈಶಾಲ್ಯತೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ತಮ್ಮೂರಿಗೆ ಬಂದ ಅತಿಥಿಗಳನ್ನು ಸತ್ಕರಿಸುವ ಪರಿ ನೋಡಿ ನಾನು ಹೌಹಾರಿದೆ. ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್ಸೆಫೈ)ನ ಅಖಿಲ ಭಾರತ ವಿಶೇಷ ಸಮ್ಮೇಳನದಲ್ಲಿ ಭಾಗವಹಿಸುವ ಸಲುವಾಗಿ ಈಶಾನ್ಯ ಭಾರತದ ದರ್ಶನವಾಯಿತು. ಐದಾರು ದಿನದಲ್ಲೇ ಅಸ್ಸಾಂನ ಮಣ್ಣಿನ ಗುಣ ಮನತುಂಬಿತ್ತು.

ಯಾರೇ ಪರ ಊರಿನ ಜನರನ್ನು, ಅಸ್ಸಾಂನ ಜನ ಕಂಡರೆ ಸ್ವಾಗತಿಸುವ, ಸತ್ಕರಿಸುವ ಗುಣ ಮೊದಲಿನಿಂದ ಪಾರಂಪರಿಕವಾಗಿ, ಸಾಂಸ್ಕೃತಿಕವಾಗಿ ಬೆಳೆದು ಬಂದಿದೆಯಂತೆ. ನೂರಾರು ಬುಡಕಟ್ಟುಗಳ, ಹಲವಾರು ಭಾಷೆಗಳ, ವೈವಿಧ್ಯಮಯ ಜೀವನ ಶೈಲಿಗಳ ಸಮ್ಮಿಲನವೇ ಅಸ್ಸಾಂ. ಅವರ ಹೃದಯಗಳೇ, ಕಣ್ಣಂಚಿನ ಭಾವಗಳೇ ನಿಜವಾದ ಭಾಷೆಗಳು, ಯಾವುದೇ ಜಾತಿ-ಭೇದ, ಮೇಲು-ಕೀಳೆಂಬ ಸೋಂಕಿಲ್ಲದೆ ಬೆಳೆಯುತ್ತಿರುವ, ಬದುಕುತ್ತಿರುವವರ ಮಧ್ಯದಲ್ಲೊಂದು ವಿಷ ವೃಕ್ಷಗಳಾದ ಭಯೋತ್ಪಾದಕರು, ಪ್ರತ್ಯೇಕವಾದಿಗಳು, ಹಿಂಸೆ ಅರಾಜಕತೆಯ ಕೋಮುವಾದಿಗಳು ಹುಟ್ಟಿಕೊಂಡು ಅಸಮಾನತೆಯನ್ನು ಬಿತ್ತಲಾರಂಭಿಸಿದವು. 'ನಮ್ಮನ್ನು ಬೇಕಾದರೂ ಬಲಿ ಕೊಟ್ಟು ಆ ವಿಷವೃಕ್ಷಗಳನ್ನು ಬೆಳೆಯಲು ಬಿಡುವುದಿಲ್ಲ. ವೆನ್ನುತ್ತಾನೆ' ನಮ್ಮ ಸಂಗಾತಿ ಅಸ್ಸಾಂ ಗೆಳೆಯ ಅಬ್ದುಲ್ ಹಜೀಮ್.

ಇಲ್ಲಿ ಅಂತರಜಾತಿ ಮದುವೆಗಳು ನಡೆಯುತ್ತವೆಯೇ? ಅಂತರಜಾತಿಯಲ್ಲ, ಅಂತರ ಧರ್ಮೀಯ ಮದುವೆಗಳೇ ಹೆಚ್ಚು. ಅಸ್ಪೃಷ್ಯತೆ ಆಚರಣೆಯೇ ಇಲ್ಲವೆಂದೇ ಹೇಳಬೇಕು. ಯಾರು, ಯಾರನ್ನಾದರೂ ಮದುವೆಯಾಗಬಹುದು. ಎಲ್ಲಾರೂ ಎಲ್ಲರ ಸಾಂಸ್ಕೃತಿಕ ಆಚರಣೆಗಳಿಗೆ ಪರಸ್ಪರ ಗೌರವ ಕೊಡುತ್ತಾರೆ.

ಜನರ ಜೀವನ ಮಟ್ಟ ಹೇಗೆಂದರೆ, ನಗರಗಳಿಗೆ ಹೋಲಿಸಿದರೆ ಅಸ್ಸಾಂ ಜನರು ಗ್ರಾಮೀಣ ಅದರಲ್ಲೂ ಬುಡಕಟ್ಟುಗಳಾಗಿ ಅರಣ್ಯ ಪ್ರದೇಶಗಳಲ್ಲೇ ವಾಸಿಸುವುದು ಹೆಚ್ಚು. ಶಿಕ್ಷಣ ಕಡಿಮೆ, ಊಟಕ್ಕಂತೂ ಕಾಡಿನಲ್ಲೇ ಹೆಚ್ಚು ಇರುವುದರಿಂದ ಅಲ್ಲಿಂದ ಆಯ್ಕೆ ಮಾಡಬೇಕು ಅತಿ ಹೆಚ್ಚಿನ ಜನರು ಮಾಂಸಹಾರಿಗಳು.

ಪ್ರಮುಖವಾಗಿ ರಾಜಕೀಯ ತಿಳುವಳಿಕೆ ಜನರಲ್ಲಿ ಕಡಿಮೆ. ಅವಕಾಶವಂತೂ ಇಲ್ಲವೇ ಇಲ್ಲ. ಕೇಂದ್ರ ಸರ್ಕಾರದ ತಾರತಮ್ಯದಿಂದ ವಂಚಿತರಾಗಿದ್ದೇವೆಂದು ಆಳುವ ಸರ್ಕಾರದ ವಿರುದ್ಧ ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ ಅಸ್ಸಾಂನ ಯುವಕರು. ಕೈಗಾರಿಕೆಗಳಲ್ಲಂತೂ ಬಹಳ ಹಿಂದೆ ಇದ್ದೇವೆ. ವಿದ್ಯಾವಂತ ಯುವಜನರಿಗೆ ಕೆಲಸಗಳಿಲ್ಲದೆ ಭಯೋತ್ಪಾದಕರ ಹಾದಿ ಹಿಡಿಯುವುದೂ ಉಂಟು. ಆದರೆ ಹಿಂದೆಂದೂ ಭಯೋತ್ಪಾದಕರಿಗಾಗಲೀ, ಪ್ರತ್ಯೇಕವಾದಿಗಳಿಗಾಗಲೀ ಅಸ್ಸಾಂ ಜನ ಬೆಂಬಲ ನೀಡಿಲ್ಲ, ನೀಡುವುದೂ ಇಲ್ಲ. ಪ್ರೀತಿ, ಸೌಹಾರ್ದತೆಯ ಪ್ರತೀಕ ಎನ್ನುತ್ತಾರೆ ಅಸ್ಸಾಂ ಜನತೆ.

ಆ ಅಂದಗಾತಿಯ ನಗುವೇ ಸಾಕು

ಅಸ್ಸಾಂ ಸಾಂಸ್ಕೃತಿಕ ಹಬ್ಬಗಳ ಬಗ್ಗೆ ಪ್ರತ್ಯೇಕವಾಗಿಯೇ ಹೇಳಬೇಕು. ಮನಸೂರೆಗೊಳಿಸುವ ವಿನ್ಯಾಸದ ಉಡುಗೆಗಳು, ತೊಡುಗೆಗಳು ಅದ್ಭುತ- ಅತ್ಯದ್ಭುತ, ಸುಂದರ-ಬಹುಸುಂದರ. ವರ್ಣರಂಜಿತ, ಸಾಂಸ್ಕೃತಿಕ, ಜನಪದಗಳ ನೂರಾರು ಹಬ್ಬಗಳ ನಾಡು.

ಬಿಹು ನೃತ್ಯ

ಇದೊಂದು ಅಸ್ಸಾಂ ರಾಷ್ಟ್ರೀಯ ಹಬ್ಬ. ಅಸ್ಸಾಂನ ಎಲ್ಲಾ ಜನರು ಸೇರಿ ಆಚರಿಸುವ ಹಬ್ಬ. ಪ್ರಪಂಚದಲ್ಲೇ ಜನಪದ ಹಬ್ಬಗಳಲ್ಲಿ ಅಸ್ಸಾಂನ ಈ ಬಿಹು ನೃತ್ಯ ಪ್ರಖ್ಯಾತವಾಗಿದೆ. ಈ ಬಿಹು ನೃತ್ಯ ನಾಡಿ ಮಿಡಿತ ಅಸ್ಸಾಂ ಜನರ ಜೀವನಾಡಿಯಾಗಿದೆ. ತಮ್ಮ ಭತ್ತದ ಗದ್ದೆಗಳಲ್ಲಿ ಬೆಳೆ ಸಂಪತ್ಭರಿತವಾಗಿ ಬೆಳೆದಾಗ ಆನಂದದಿಂದ ಸಂಭ್ರಮ ಪಡುವ ಕ್ಷಣಗಳ ಪ್ರತೀಕ ಈ ಬಿಹು ಹಬ್ಬ. ಹಾಡುತ್ತಾ- ಕುಣಿಯುತ್ತಾ ಯುವಕ-ಯುವತಿಯರು ಮನಸೂರೆಗೊಳಿಸುತ್ತಾರೆ. ನೋಡುತ್ತಿರುವವರು ನಿಂತಲ್ಲೇ ಹೆಜ್ಜೆ ಹಾಕುತ್ತಾರೆ. ಮನಸ್ಸಿಗೆ ನಾಟುವ ಆನಂದದಲ್ಲಿ ಹೊರ ಪರಿವೇ ಇಲ್ಲದೇ ತೇಲಿ ಹೋಗುತ್ತೇವೆ. ಆ ಸಂಗೀತ, ಆ ನೃತ್ಯದ ಸೊಬಗಿಗೆ ಯಾವುದೇ ಆಧುನಿಕ ಸಂಗೀತ ಪರಿಕರಣಗಳನ್ನು ಬಳಸದೇ ಬಿದುರಿನ ಸಾಮಗ್ರಿಗಳನ್ನ ಬಳಸಿ ಮಾಡಿರುವ ಸಂಗೀತದ ಸೊಬಗು ಮನ ತೇಲಿಸುತ್ತದೆ. ಇದೇ ರೀತಿ ಬಿಹು ನೃತ್ಯದ ಸಮಯದಲ್ಲಿ ಏಳು ಜನ ಯುವಕರು - 7 ಜನ ಯುವತಿಯರು ಸೇರಿ ಸುಮಾರು 20 ನಿಮಿಷಗಳ ಕಾಲ ನಿರಂತರ ಹಾಡಿಕೊಂಡು ನೃತ್ಯ ಮಾಡುವಾಗ ಹೆಂಗೆಳೆಯರ ಆಹ್ಲಾದಕರ ನಗುವಿನಲ್ಲೇ ಎಲ್ಲವನ್ನು ಹೇಳುವ ಭಂಗಿ ಮನಮೋಹಕರ. ಹಾವು ಚಲಿಸುವಂತೆ ನೃತ್ಯ ಮಾಡುವ ರೀತಿ ವಿಶಿಷ್ಟತೆಯಲ್ಲಿ ವಿಶಿಷ್ಟವಾಗಿದೆ. ಮೂಗಿನಿಂದ, ಗಂಟಲಿನಿಂದ ಸಂಗೀತದ ನಾದವನ್ನು ಹೊರಹೊಮ್ಮಿಸುವ ಆ ಯುವಕರ ಪ್ರಾವೀಣ್ಯತೆಗೆ ಈಗಿನ ಆಧುನಿಕತೆಯ ಸಂಗೀತಗಾರರು ಮೌನವಾಗುತ್ತಾರೆ.



ಇದೇ ರೀತಿ ರಂಗಾಲಿ ಬಿಹು ನೃತ್ಯವನ್ನು ಹಬ್ಬಗಳ ಸಮಯದಲ್ಲಿ ಆಚರಿಸಿದರೆ, ಕಂಗಾಲಿ ಬಿಹು ಹಬ್ಬವನ್ನು ಬೆಳೆ ಕುಯ್ಯುವ ಸಂದರ್ಭದಲ್ಲಿ ಹಾಗೂ ಬೊಗಾರಿ ಬಿಹು ನೃತ್ಯವನ್ನು ಮದುವೆ ಸಂದರ್ಭದಲ್ಲಿ ಆಚರಿಸುತ್ತಾರೆ.

ಒಟ್ಟಾರೆ ಇದೇ ರೀತಿ ಸುಪ್ರಸಿದ್ಧ ಅಸ್ಸಾಂನ ಅನೇಕ ಹಬ್ಬಗಳಿವೆ. ಇವುಗಳಲ್ಲಿ ಬಗರೊಬ್ಬ, ಶಾಸ್ತ್ರೀಯ ನೃತ್ಯ, ಬೊರ್ತತಲ್ ನೃತ್ಯ, ಕಣ್ಮರೆ ನೃತ್ಯ ಹೀಗೆ ಹಲವಾರು. ಇವುಗಳೆಲ್ಲಾ ಪ್ರಕೃತಿಯ ಜೊತೆಗೆ ಮಿಂದು ಹಾಡುವ, ಆಚರಿಸುವ ಹಬ್ಬಗಳೇ ಆಗಿವೆ.

ಇಂಥ ಸೊಬಗಿನ ಅಸ್ಸಾಂ ನಾಡನ್ನು ಗುರುತಿಸಲು, ಅಭಿವೃದ್ಧಿ ಪಡಿಸಲು ಅಗತ್ಯ ಯೋಜನೆಗಳನ್ನು ಕೇಂದ್ರ ಸರ್ಕಾರ ರೂಪಿಸದೆ ಇಡೀ ಈಶಾನ್ಯ ಭಾರತವನ್ನು ಕಡೆಗಣಿಸುತ್ತಿದೆ. ಜೊತೆಗೆ ಕೋಮು ಗಲಭೆಗೆ ಅವಕಾಶ ನೀಡುವ ಶಕ್ತಿಗಳನ್ನು ಪುಷ್ಟೀಕರಿಸುತ್ತದೆ. ಈ ಧೋರಣೆಗಳ ವಿರುದ್ಧ ಭಾರತ ಐಕ್ಯತೆ ಎತ್ತಿ ಹಿಡಿಯಲು, ಸ್ವಾಯತ್ತತೆ ಕೇಳಲು ಪ್ರಜಾಸತ್ತಾತ್ಮಕ ಸಂಘಟನೆಗಳನ್ನು ಬಲವಾಗಿ ಕಟ್ಟುತ್ತೇವೆ ಎನ್ನುತ್ತಾರೆ ಅಸ್ಸಾಂನ ಮಾನವ ಪ್ರೇಮಿಗಳು.


● ಬಿ.ರಾಜಶೇಖರಮೂರ್ತಿ

ಏಂಜನ, ಏಂಜನ, ಏಂಜನ ಸಾರ್ !!

ಪಶ್ಚಿಮ ಬಂಗಾಳದಲ್ಲಿ ಬರ್ದ್ವಾನ್ ಅಂತ ಒಂದು ಜಿಲ್ಲೆ ಇದೆ. ಆ ಜಿಲ್ಲೆಯ ಒಂದು ವಿಧಾನಸಭಾ ಕ್ಷೇತ್ರದ ಹೆಸರು ಖಿಂಡಾಘೋಷ್. ಅಲ್ಲಿ ಜ್ಯೋತ್ಸ್ನಾ ಘೋಷ್ ಎಂಬುವವರು ಶಾಸಕಿಯಾಗಿದ್ದಾರೆ. ಅವರು ಸಿ.ಪಿ.ಎಂ. ಪಕ್ಷದವರು. ಆ ಶಾಸಕಿ ತನಗೆ ದೊರಕುತ್ತಿರುವ ಶಾಸಕಿ ಸಂಬಳದಿಂದ ತನ್ನ ಶಾಸಕಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ತನ್ನ ಕುಟುಮಬ ನಿರ್ವಹಣೆಗೆ ಅನುಕೂಲವಾಗುವಂಥ ನೌಕರಿಯೊಂದಕ್ಕೆ ಸೇರಿಕೊಂಡಿದ್ದಾರೆ.

ಈ ಸುದ್ದಿ ಓದಿದಾಗ ನನ್ನ ಗೆಳೆಯ ಕೇಳಿದ ಪ್ರಶ್ನೆ ಉಚಿತವಾಗಿತ್ತು ಅನಿಸಿತು. ತಲೆ ಇದ್ದವರ್‍ಯಾರೂ ಈ ಕೆಲಸ ಮಾಡಲಾರರು. ಅಪಾರ ಹಣ ಬರುವ ಉದ್ಯೋಗದಲ್ಲಿರುವವರು ತಮ್ಮ ಉದ್ಯೋಗ ಬಿಟ್ಟು ಯಃಕಶ್ಚಿತ್ ಸಂಬಳ ಬರುವ ಶಾಸಕರ ಸ್ಥಾನಕ್ಕೆ ಪೈಪೋಟಿ ನಡೆಸುವ ಈ ಜಗತ್ತಿನಲ್ಲಿ ಜ್ಯೋತ್ಸ್ನಾ ಘೋಷ್ ಅಂಥವರು ತಲೆ ಇಲ್ಲದವರಂತೆ ಕಾಣುತ್ತಾರೆ. ಈ ಭ್ರಷ್ಟ ಸಮಾಜದ ಮಧ್ಯೆ ನೀಲಮಣಿಯಂತೆ ಹೊಳೆಯತೊಡಗುತ್ತಾರೆ. ಭಾರತ ಪ್ರಕಾಶಿಸಬೇಕಾದರೆ ಅಂಥವರು ಸಂಖ್ಯೆಯಲ್ಲಿ ಹೆಚ್ಚಾಗಬೇಕು. ಆದರೆ ಅಂಥವರ ಸಂಖ್ಯೆ ಕಡಿಮೆ. ಅದಕ್ಕೆ ವಿರುದ್ಧವಾದ ಭ್ರಷ್ಟರ ಸಂಖ್ಯೆ ಹೆಚ್ಚಾಗುತ್ತಿದೆ. ಪ್ರತಿಯೊಬ್ಬನೂ ಮಂತ್ರಿಯಾಗಬೇಕು. ಕಡೇಪಕ್ಷ ಯಾವುದಾದರೂ ಮಂಡಳಿ, ನಿಗಮದ ಅಧ್ಯಕ್ಷನಾಗಬೇಕು. ಇಂಥ ನಾಯಿಕೊಡೆಗಳ ಮಧ್ಯೆ ನಾವು ನಮ್ಮ ಪ್ರಜಾಪ್ರಭುತ್ವದ ನೆಮ್ಮದಿ ಕಂಡುಕೊಳ್ಳಬೇಕಾಗಿದೆ.

ಕಳೆದ ಒಂದು ವಾರದ ನಮ್ಮ ರಾಜಕೀಯ ಪಕ್ಷಗಳ ವಿದ್ಯಮಾನಗಳನ್ನು ನೋಡಿದ ಮೇಲೆ ನನಗೆ ನೆನಪಿಗೆ ಬಂದದ್ದು ಲಂಕೇಶರ ಆ ಪ್ರಸಿದ್ಧ ಪದ್ಯ, 'ಏಂಜನ, ಏಂಜನ, ಏಂಜನ ಸಾರ್'. ಎಂತೆಂಥವರು, ಎಂತೆಂಥ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ? ಅವರ ನಿರ್ಧಾರಗಳನ್ನು ಕಂಡು ಏನೆನ್ನಬೇಕು ಎಂದು ತಿಳಿಯದೆ ನಾನು ಮೂಕವಿಸ್ಮಿತನಾಗಿದ್ದೇನೆ. ಈಗ ಚಲನಚಿತ್ರ ನಟಿಯರಿಗಂತೂ ರಾಜಕೀಯಕ್ಕೆ ಸೇರುವ ಉತ್ಸಾಹ ಮೇರೆ ಮೀರಿ ಹರಿಯುತ್ತಿದೆ. ಈ ದೇಶದ ಯಾವ ವಾಸ್ತವ ಸಮಸ್ಯೆಯ ಅರಿವೂ ಇಲ್ಲದ ಈ ತಾರಾಮಣಿಗಳು ತಾವು ಈ ದೇಶದ ಸೇವೆ ಮಾಡುವ ಕನಸು ಕಾಣುತ್ತಾರೆ. ಹೀರೋ ಅಥವಾ ವಿಲನ್‌ಗಳ ತೆಕ್ಕೆಯಲ್ಲಿ ಅರೆಬರೆ ಬಟ್ಟೆ ತೊಟ್ಟು ಡ್ಯಾನ್ಸ್ ಮಾಡುವ ಮಹಿಳಾ ತಾರಾಮಣಿಗಳಿಗೆ ಈ ದೇಶದ ಯಾವ ಸಮಸ್ಯೆಯ ಅರಿವಿದೆ. ಹಾಗೆಯೇ ಮಾತೆತ್ತಿದರೆ ಡಿಶುಂ ಡಿಶುಂ ಎಂದು ಹೊಡೆದಾಟಕ್ಕೆ ಮುಂದಾಗುವ ನಾಯಕರು ಯಾವ ಸಮಸ್ಯೆಯೊಂದಿಗೆ ಗುದ್ದಾಡಬಲ್ಲರು. ಜನಪ್ರಿಯತೆಯನ್ನೇ ಪ್ರಜಾಪ್ರಭುತ್ವದ ಮಾನದಂಡವನ್ನಾಗಿಸುವುದಾದರೆ, ಇನ್ನು ಮುಂದೆ, ಸಿದ್ಧಾಂತಗಳಿಗೆ, ಮೌಲ್ಯಗಳಿಗೆ ಈ ದೇಶದ ರಾಜಕೀಯ ತಿಲಾಂಜಲಿ ನೀಡಬೇಕಾಗುತ್ತದೆ. ಮೊದಲೇ ಗೊತ್ತು ಗುರಿ ಇಲ್ಲದೆ ಅತಂತ್ರವಾಗಿರುವ ಈ ದೇಶದ ಯುವಜನತೆಯ ಆದರ್ಶ ಯಾರಾಗಬೇಕು? ತನ್ನ ಶಾಸಕಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಜ್ಯೋತ್ಸ್ನಾ ಘೋಷ್ ಆಗಬೇಕೇ? ಇಲ್ಲ ಸೂಳೆ ಗರತಿಯಾದಂತೆ ಯೌವನದಲ್ಲಿ ಮಾದಕ ನೃತ್ಯಗಳನ್ನು ಮಾಡಿಕೊಂಡು, ವೃದ್ಧಾಪ್ಯದಲ್ಲಿ ಜನಸೇವೆ ಮಾಡುತ್ತೇವೆಂದು ರಾಜಕೀಯಕ್ಕಿಳಿಯುತ್ತಿರುವ ಪಂಚತಾರಾಮಣಿಗಳು ಆದರ್ಶವಾಗಬೇಕೇ? ರಾಜಕೀಯ ತನ್ನ ನೆಲೆಯನ್ನು ಕಳೆದುಕೊಳ್ಳುತ್ತಿದೆ. ಸಮಯಸಾಧಕತನ ಎಲ್ಲೆಲ್ಲೂ ವಿಜೃಂಭಿಸುತ್ತಿದೆ.



ಕರ್ನಾಟಕದ ವಿದ್ಯಮಾನವನ್ನೇ ತೆಗೆದುಕೊಳ್ಳೋಣ. ಈ ಬಂಗಾರಪ್ಪ ಇವತ್ತು ಬಿಜೆಪಿಗೆ ಸೇರಿದ್ದಾರೆ. ಸಮಾಜವಾದಿ ಎಂದು ಹೇಳಿಕೊಳ್ಳುವ ಈ ವ್ಯಕ್ತಿಗೆ ಯಾವ ವಾದ, ಸಿದ್ಧಾಂತಗಳೂ ಇಲ್ಲ. ಅವರಿಗೆ ಬೇಕಾಗಿರುವುದು ಶಕ್ತಿ ರಾಜಕಾರಣ. ಪಕ್ಷಾಂತರ ಎನ್ನುವುದು ಅವರ ಮೈಗೂಡಿ ಬಂದಿದೆ. ಬಿಜೆಪಿಯನ್ನು ಕೋಮುವಾದಿ ಪಕ್ಷ ಎಂದು ಹಿಗ್ಗಾಮುಗ್ಗಾ ಬೈಯುತ್ತಿದ್ದ ಈ ವ್ಯಕ್ತಿ ಈಗ ಅದೇ ಪಕ್ಷವನ್ನು ಅಪ್ಪಿಕೊಂಡಿದ್ದಾರೆ. ಇಲ್ಲಿಯವರೆಗೆ ಕೋಮುವಾದಿ ಪಕ್ಷ ಎಂದೇ ಬಿಂಬಿತವಾಗುತ್ತಿದ್ದ ಬಿಜೆಪಿ ಕಳೆದ ಕೆಲವಾರು ವಾರಗಳಿಂದ ಇದ್ದಕ್ಕಿದ್ದಂತೆ ಪ್ರಗತಿಪರ ಪಕ್ಷವಾಗಿ ಪ್ರಕಾಶಿಸುತ್ತಿದೆ. ಭಜರಂಗದಳ, ವಿ.ಎಚ್.ಪಿ. ಆರೆಸ್ಸೆಸ್ ಗದ್ದಲಗಳು ಇದ್ದಕ್ಕಿದ್ದಂತೆ ನಿಶ್ಯಬ್ಧವಾಗಿದೆ. ರಾಮನಾಮದ ಜಾಗದಲ್ಲಿ ನಿಶ್ಯಬ್ದವಾಗಿದೆ. ರಾಮನಾಮದ ಜಾಗದಲ್ಲಿ ಅಭಿವೃದ್ಧಿ ಎಂಬ ಹೆಸರು ಕಂಗೊಳಿಸುತ್ತಿದೆ. ವಾಜಪೇಯಿಯವರ ಮುಖ ಡಬಲ್ ಕ್ರೀಮ ಹಾಕಿಕೊಂಡಂತೆ ಮಿಂಚುತ್ತಿದೆ. ಇದನ್ನು ಕಂಡು ಇಲ್ಲಿಯವರೆಗೆ ಅವರನ್ನು ತೆಗಳುತ್ತಿದ್ದವರೆಲ್ಲಾ ಇದ್ದಕ್ಕಿದ್ದಂತೆ ಚಿತ್ ಆದವರಂತೆ ಅವರನ್ನು ಹೊಗಳಲು ಆರಂಭಿಸಿದ್ದಾರೆ. ಬಲಪಂಥೀಯ ಧೋರಣೆ ಕಡೆ ವಾಲುವಂತೆ ಭ್ರಮೆಯನ್ನು ಅದು ಹುಟ್ಟಿಸುತ್ತಿದೆ.

ಬೆಜೆಪಿ ಮಾತ್ರ ಜನರನ್ನು ಸೆಳೆಯುತ್ತಿಲ್ಲ. ಬೇರೆ ಪಕ್ಷಗಳೂ ಅದೇ ದೆಲಸವನ್ನು ಮಾಡುತ್ತಿವೆ. ವಿವಾದದ, ಜನಪ್ರಿಯತೆಯ ಜನರ ಗಮನಕ್ಕೆ ಬೀಳುವಂತಹ ಯಾವುದೇ ಕೆಲಸ ಮಾಡುವ ವ್ಯಕ್ತಿಯನ್ನು ಪಕ್ಷಗಳು ಬಿಡುತ್ತಿಲ್ಲ. ಆ ವ್ಯಕ್ತಿಗಳೂ ಕೂಡ, 'ಇದೇ ಸಮಯ ಎದೇ ಸಮಯ ದೋಚಲು' ಎಂಬಂತೆ ತಮ್ಮ ತಮ್ಮ ಬೇಳೆ ಬೇಯಿಸಿಕೊಳ್ಳಲು ಮುಂದಾಗುತ್ತಿದ್ದಾರೆ. ಈ ಮಟ್ಟೆಣ್ಣವರ್ ಮತ್ತು ಡಾ.ಕಿರಣ್ ಪಟೇಲ್ ಎಂಬ ಅಪ್ರಬುದ್ಧರನ್ನೇ ನೋಡಿ. ಮಟ್ಟೆಣ್ಣವರ್ ಮಾಡಿದ ಕೆಲಸಕ್ಕೆ ಅವನನ್ನು ಯಾವ ರಾಜಕೀಯ ಪಕ್ಷಗಳೂ ಹತ್ತಿರ ಸೇರಿಸಬಾರದು. ಆತನಿಗೆ ರಾಜಕೀಯ ವ್ಯವಸ್ಥೆಯ ಬಗ್ಗೆಯಾಗಲೀ, ಕಿಂಚಿತ್ತೂ ಅರಿವಿಲ್ಲ. ಸಿನಿಮಾ ಹೀರೋ ಮಾದರಿಯಲ್ಲಿ ತನ್ನ ಸಾಹಸ ಮೆರೆಯಲಲು ಹೋದವನು. ವಾಸ್ತವ ಮತ್ತು ಭ್ರಮೆಗಳ ಮಧ್ಯದ ವ್ಯತ್ಯಾಸವನ್ನೇ ತಿಳಿಯದವನು, ಅಂಥವರನ್ನು ಆದರ್ಶ ಹೀರೋ ಎನ್ನುವ ರೀತಿಯಲ್ಲಿ ಪ್ರತಿಬಿಂಬಿಸಲಾಯ್ತು. ಇದ್ದಕಿದ್ದಂತೆ ಅವನು ಹೀರೋ ಆಗಿಬಿಟ್ಟ. ಈ ಕಿರಣ್ ಪಟೇಲ್ ಎಂಬುವವನು ಇನ್ನೊಬ್ಬ ಭ್ರಮೆಯಲ್ಲಿ ತೇಲಾಡುವ ವ್ಯಕ್ತಿ. ತನ್ನ ಮಾವ ನಾಗಪ್ಪ ಕೊಲೆಯಾದ ದಿನದಿಂದ ಮೊನ್ನೆ ಮೊನ್ನೆಯವರೆಗೆ ಕಾಂಗ್ರೆಸ್ ಪಕ್ಷವನ್ನು ಹಿಗ್ಗಾಮುಗ್ಗಾ ಬೈಯುತ್ತಿದ್ದವನು, ಈಗ ಹೋಗಿ ಅದೇ ಪಕ್ಷ ಸೇರಿದ್ದಾನೆ. ತನ್ನ ಡಾಕ್ಟರ್‌ಗಿರಿಯ ಮೂಲಕ ಜನರ ಸೇವೆ ಮಾಡುವುದಕ್ಕಿಂತ ಅವರಿಗೆ ರಾಜಕಾರಣಿಯಾಗಿ ಜನರ ಸೇವೆ ಮಾಡುವುದೇ ಹೆಚ್ಚು ಆಕರ್ಷಣೀಯವಾಗಿ ಕಂಡು ಬರುತ್ತಿದೆ. ಇಂಥವರು ಈ ರಾಜಕೀಯ ಜಗತ್ತಿನ ಊಸರವಳ್ಳಿಗಳು, ಇವರಿಗೆ ಖಾಯಂ ಆದ ಆಕಾರವಿಲ್ಲ, ಬಣ್ಣ ಇಲ್ಲ, ವರ್ತನೆ ಇಲ್ಲ. ಹವಾಗುಣಕ್ಕೆ ತಕ್ಕಂತೆ ಕಾಲಮಾನಕ್ಕೆ ತಕ್ಕಂತೆ ಬಣ್ಣ ಬದಲಿಸಬಲ್ಲರು. ಸದಾಕಾಲ ಅಧಿಕಾರದಲ್ಲಿ ಇರುಲು ಬಯಸುವವರು.

ಇದು ಇಂದಿನ ಪ್ರತಿಯೊಬ್ಬ ರಾಜಕಾರಣಿಯ ಸಂಚಾರಿ ಭಾವ. ಒಂದು ಪಕ್ಷದ ವೇದಿಕೆಯ ಮೇಲಿನಿಂದಲೇ ರಾಜಕಾರಣಿಯನ್ನು ಇನ್ನೊಂದು ಪಕ್ಷದ ವೇದಿಕೆಗೆ ಎಳೆಯುವ ಈ ಮಯಬೈಲ್ ಫೋನ್ ಒಂದು ಪ್ರಬಲ ಸಂಕೇತ ಅಷ್ಟೆ. ಫೋನಿಗಿಂತ ಹೆಚ್ಚಾಗಿ ಅದರ ಹಿಂದಿರುವ ವ್ಯಕ್ತಿಯ ಮನೋಭಾವ ಎಷ್ಟು ಮೊಬೈಲಾಗಿರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಇದನ್ನು ಅರ್ಥಮಾಡಿಕೊಂಡು ನಮ್ಮ ಜನ ತಮ್ಮ ಮತ ಹಾಕಬೇಕಾಗಿದೆ.

ನಮ್ಮ ಜನ ಹಾಕುವ ವೋಟುಗಳೂ ಇಂಥ ರಾಜಕಾರಣಿಗಳಿಗೆ ಚಾಟಿ ಏಟುಗಳಾಗಿ ಪರಿಣಮಿಸಬೇಕು. ಮುಂದಿನ ಐದು ವರ್ಷಗಳವರೆಗೆ ತಡವಿ ನೋಡಿ ಕೊಳ್ಳುವಂತಿರಬೇಕು. ಸದಾಕಾಲ ಅಧಿಕಾರದ ಕನಸು ಕಾಣುವವರಿಗೆ ದುಸ್ವಪ್ನದಂತೆ ಕಾಡುವಂತಿರಬೇಕು. ಒಂದೊಂದು ಏಟನ್ನೂ, ಸಾರಿ ಒಂದೊಂದು ಓಟನ್ನೂ ನೆನಪಿಸಿಕೊಳ್ಳುತ್ತಾ, 'ಏಂಜನ, ಏಂಜನ, ಏಂಜನ ಸಾರ್!' ಎಂದು ಕೊರಗುವಂತಿರಬೇಕು. ಅಂಥ ಏಟನ್ನು ನಮ್ಮ ಮತದಾರ ಕೊಡಬಲ್ಲನೇ? ಖಂಡಿತಾ ಕೊಡಬಲ್ಲ. ಇತಿಹಾಸದಲ್ಲಿ 'ನಾನೇ ದೇಶ' ಎಂದು ಹೇಳಿಕೊಂಡು ಬೀಗುತ್ತಿದ್ದವರಿಗೆಲ್ಲಾ ಅಂಥ ಏಟು ಕೊಟ್ಟಿದ್ದಾನೆ. ಇನ್ನು 'ನಾನೇ ಕುರ್ಚಿ' ಎಂದು ಬೀಗುತ್ತಿರುವವರಿಗೆ ಏಟು ಕೊಡಲಾರನೇ? ಖಂಡಿತಾ ಕೊಡಬಲ್ಲ.

'ಆಂದೋಲನ'ನದಲ್ಲಿ
• ಲಿಂಗದೇವರು ಹಳೆಮನೆ


ರಥಯಾತ್ರೆಗಳೂ.....

ಪುಟ 7 ರಿಂದ

ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿಗೆ ಕಾನೂನು-ವ್ಯವಸ್ಥೆಯನ್ನು ತಿಳಿಯುವ ಹೆಸರಲ್ಲಿ ಕೇಂದ್ರ ತಂಡಗಳನ್ನು ಕಳಿಸಿದರು - ಆ ರಾಜ್ಯಗಳಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರುವುದಕ್ಕೆ ದಾರಿ ಮಾಡಿಕೊಡಲು ಸಾರ್ವಜನಿಕ ಆಕ್ರೋಶದಿಂದಾಗಿ ಇಂತಹ ಪ್ರಜಾಪ್ರಭುತ್ವ-ವಿರೋಧಿ ಕ್ರಮ ಕೈಗೊಳ್ಳಲು ಅವರಿಗೆ ಸಾಧ್ಯವಿಲ್ಲ ಎಂಬುದು ಬೇರೆ ಮಾತು. ನಂತರ ಅಡ್ವಾಣಿಯ ಗೃಹಮಂತ್ರಾಲಯ ಎರಡು ಬಾರಿ ಬಿಹಾರದ ಆರ್‌ಜೆಡಿ ಸರ್ಕಾರವನ್ನು ವಜಾ ಮಾಡಿತು, ನಿತಿಶ್ ಕುಮಾರ್‌ರನ್ನು ಮುಖ್ಯಮಂತ್ರಿಯ ಪಟ್ಟದಲ್ಲಿ ಕೂರಿಸಲು ಕೂಡಾ ಪಿತೂರಿ ನಡೆಸಿತು. ಇಲ್ಲಿಯೂ ಆತ ವಿಶ್ವಾಸಮತ ಕೇಳುವ ಮೊದಲೇ ಓದಿ ಹೋಗಬೇಕಾಯಿತು ಎಂಬುದು ಬೇರೆ ಮಾತು. ಈಗಿರುವ ಪ್ರಶ್ನೆ ಇದು. ನಾವಂತೂ ರಾಷ್ಟ್ರೀಯ ಐಕ್ಯತೆ ಮತ್ತು ಪ್ರಾದೇಶಿಕ ಸಮಗ್ರತೆಗೆ ಸಂಚಾಕಾರ ಇಲ್ಲದಿದ್ದರೆ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಬಾರದು ಎನ್ನುವವರು. ಆದರೆ ಮಾರ್ಚ್-ಜೂನ್ 2002 ರ ಗುಜರಾತ್ ರಾಷ್ಟ್ರಪತಿ ಆಳ್ವಿಕೆ ಹೇರಲು ತಕ್ಕುದಾಗಿತ್ತು ಎಂದು ಯಾರಾದರೂ ಖಂಡಿತಾ ಕೇಳಬಹುದು. ಬಿಹಾರ ಸರ್ಕಾರವನ್ನು ವಜಾ ಮಾಡಿದಂತೆ ಅಡ್ವಾಣಿ ಮೋದಿಯವರನ್ನು ವಜಾ ಮಾಡಲಿಲ್ಲವೇಕೆ? ಆತ ತನ್ನದೇ ಪಕ್ಷದವನೆಂದೇ?

ಒಂದು ಅಪಗತಿ! ಆದರೆ ನಿಜವಾಗಿ, ಈ ಮಹಾನ್ ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ದೇಶದಲ್ಲಿ ವಾಜಪೇಯಿ, ಅಡ್ವಾಣಿ ಮತ್ತು ಕಂಪನಿಯೇ ಅತಿ ದೊಡ್ಡ ಅಪಗತಿ ದಾರಿತಪ್ಪಿದ ಕೂಡ ಎಂದು ನಾವು ಹೇಳುತ್ತೇವೆ. ಆದ್ದರಿಂದ ಅವರನ್ನು ಎಷ್ಟು ಬೇಗ ತೊಲಗಿಸಿದರೆ, ಅಷ್ಟು ದೇಶಕ್ಕೆ ಮತ್ತು ಜನತೆಗೆ ಒಳಿತು.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ



3. ಇತರೇ ಅವಗತ್ಯ ಘಟಕಗಳು

ರಕ್ತ ವೃದ್ಧಿಸಲು ಕಬ್ಬಿಣದ ಘಟಕವನ್ನು ಬಿಟ್ಟರೆ, ಫೋಲಿಕ್ ಆಮ್ಲವನ್ನು ಉಪಯೋಗಿಸಬಹುದಾಗಿದೆ. ಗರ್ಭಿಣಿಯರಲ್ಲಿ ಫೋಲಿಕ್ ಆಮ್ಲದ ಕೊರತೆಯುಂಟಾಗುವುದರಿಂದ ಇದು ಅಗತ್ಯವಾಗುತ್ತದೆ.

ಆದರೆ ಮಾರುಕಟ್ಟೆಯಲ್ಲಿ ದೊರಕುವ ರಕ್ತ ವೃದ್ಧಿಸುವ ಟಾನಿಕ್‌ಗಳಲ್ಲಿ ಬೇರೆಲ್ಲ ಘಟಕಗಳಿರುತ್ತವೆ.

ಲೈಸಿನ್ ಹೈಡ್ರೋಕ್ಲೋರೈಡ್ ಪೈರಿಡಾಕ್ಸಿನ್
ಥಯಮಿನ್ ಮೋನೋನೈಟ್ರೇಟ್
ರೈಬೋಫ್ಲೇವಿನ್
ಎಲ್ ಹಿಸ್ಟಿಡಿನ್ ಹೈಡ್ರೋಕ್ಲೋರೈಡ್
ಬಿ-12
ಡಿ.ಪ್ಯಾಂಥನಾಲ್ ಜಿಂಕ್(ZINC)
ನಿಯೂಸಿನಮೈಡ್ ಮ್ಯಾಂಗನೀಜ್
ಕೋಲೀನ್ ಹೈಡ್ರೋಲೈಸೇಟ್ ಲಿವರ್ ಸಾರ (Liver Extract)
ಕಾರ್ಬೋಹೈಡ್ರೇಟ್ ಕ್ಯಾಲ್ಸಿಯಂ ಗ್ಲೂಕೋನೇಟ್

ಈ ಎಲ್ಲಾ ಘಟಕಗಳನ್ನು ಔಷಧಿ ರೂಪದಲ್ಲಿ ಒದಗಿಸುವ ಅವಶ್ಯಕತೆ ಇಲ್ಲ. ಈ ಘಟಕಗಳನ್ನು ಸೇರಿಸುವ ನೆಪದಲ್ಲಿ ಚಿಕಿತ್ಸೆ ದುಬಾರಿ, ಹಾಗೂ ಅವೈಜ್ಞಾನಿಕವಾಗುತ್ತದೆ.

4) ರಚನೆಯಲ್ಲಿ ಬದಲಾವಣೆ

ಔಷಧಿ ಕಂಪನಿಗಳು ತಮ್ಮ ಬ್ರಾಂಡ್ ಮಾರುಕಟ್ಟೆಯಲ್ಲಿ ಸ್ಥಾಪಿಸಲು ಇತರರಿಗಿಂತ ಬೇರೆಯೆಂದು ಹೇಳಿ ಹೆಚ್ಚು ಲಾಭಗಳಿಸಲು ಮುಂದಾಗಿವೆ. ಇದರ ಪರಿಣಾಮವೇ ರಚನೆಯಲ್ಲಿ ಬದಲಾವಣೆ ಮಾಡುವುದು. ಮಾತ್ರೆ ರೂಪದಲ್ಲಿ ಕಬ್ಬಿಣ ಪರಿಣಾಮಕಾರಿಯಾಗಿ ರಕ್ತ ವೃದ್ಧಿ ಮಾಡಬಲ್ಲದು. ಆದರೆ ಅದನ್ನು ಕ್ಯಾಪ್ಸೂಲ್, ಸ್ಪ್ಯಾನ್ಸೂಲ್, ಚೀಪುವ ಮಾತ್ರೆ (ಚ್ಯೂ) ರೂಪದಲ್ಲಿ ತಯಾರಿಸಿ ಹೆಚ್ಚು ಹಣ ಮಾಡುತ್ತವೆ.

ಸ್ಪ್ಯಾನ್ಸೂಲ್ ರೂಪ ಎಂದರೆ ಕ್ಯಾಪ್ಸೂಲ್‌ನಲ್ಲಿ ಕಬ್ಬಿಣ, ಸಾಸಿವೆ ಕಾಳಿನ ರೂಪದಲ್ಲಿರುವುದು. ಸ್ಪಾನ್ಸೂಲ್‌ಗಳು ಹೆಚ್ಚು ಪರಿಣಾಮಕಾರಿ ಹಾಗೂ ಕಬ್ಬಿಣದ ಅಡ್ಡ ಪರಿಣಾಮಗಳು ಇಲ್ಲದ್ದು ಎಂದು ತಪ್ಪು ಸಾರುತ್ತವೆ.

ಇತ್ತೀಚಿಗೆ ಇನ್ನೊಂದು ಹೊಸ ತಂತ್ರವೆಂದರೆ ರಕ್ತ ವೃದ್ಧಿಸುವ ಮಾತ್ರೆಗಳನ್ನು ಚೀಪುವ ಮಾತ್ರೆಯಾಗಿ ತಯಾರಿಸುವುದು. ಇವುಗಳಿಂದ ರೋಗಿಗೇನು ವಿಶೇಷ ಲಾಭ ವಿಲ್ಲ, ಔಷಧಿ ಕಂಪನಿಗಳಿಗೇ ಲಾಭವೆಂಬುದನ್ನು ಮರೆಯುವಂತಿಲ್ಲ.

ಲಿವೋಜನ್ ಮಾತ್ರೆ	30/30.00
ಫೀಫಾಲ್ ಕ್ಯಾಪ್ಸೂಲ್	30/ 52.35
ಫೆಕಾಂಟಿನ್ ಝಡ್	30/ 72.35
ಫೆನಿಮಿನ್	30/108.00
ಫೆರಿಯಂ ಚೀಪುವ ಮಾತ್ರೆ	10/ 45.00

ವೈದ್ಯರಲ್ಲಿ ಹೋದಾಗ ರಕ್ತಹೀನತೆ ಇದೆ ನಿಮಗೆ ಎಂದು ವೈದ್ಯ ಹೇಳಿದಲ್ಲಿ, ಅವರೊಂದಿಗೆ ಚಿಕಿತ್ಸೆ ಬಗ್ಗೆ ಸಂಪೂರ್ಣ ಚರ್ಚೆ ಮಾಡಿ, ಹಾಗೂ ಸಮಂಜಸ ಚಿಕಿತ್ಸೆ ಪಡೆಯಿರಿ. ಔಷಧಿ ಕಂಪನಿಗಳ ಗೊಂದಲ ನಿಮಗೆ ತೊಂದರೆ ಉಂಟುಮಾಡದಿರಲಿ.

ಇರಾಕ್ : ಅಮೆರಿಕನ್ ಆಕ್ರಮಣಕ್ಕೆ ಒಂದು ವರ್ಷ

ಇರಾಕ್ ದೇಶವನ್ನು ಕಳೆದ 12 ತಿಂಗಳುಗಳಿಂದ ಅಕ್ರಮವಾಗಿ ತನ್ನ ವಶದಲ್ಲಿಟ್ಟುಕೊಂಡಿರುವ ಅಮೆರಿಕವು ಹೆಚ್ಚುತ್ತಿರುವ ಜನತೆಯ ಪ್ರತಿರೋಧವನ್ನು ಹತ್ತಿಕ್ಕಲು ಇರಾಕಿನ ಶಿಯಾ ಮತ್ತು ಸುನ್ನಿ ಪಂಗಡಗಳ ನಡುವೆ ಅಂತರ್ಯುದ್ಧವನ್ನು ಪ್ರಚೋದಿಸುತ್ತಿದೆ. ಇರಾಕ್ ಮೇಲೆ ಅಮೆರಿಕ ದಾಳಿ ಮಾಡಲಾರಂಭಿಸಿ ಮಾರ್ಚ್ 20 ಕ್ಕೆ ಒಂದು ವರ್ಷವಾಗುತ್ತಿದ್ದು ಅಂದು ವಿಶ್ವದಾದ್ಯಂತ ಯುದ್ಧ ವಿರೋಧಿ ದಿನ ಆಚರಿಸಲಾಗುತ್ತಿರುವ ಹಿನ್ನೆಲೆಯಲ್ಲಿ ಈ ಲೇಖನ

ಮಾರ್ಚ್ 2 ರಂದು ಇರಾಕ್‌ನ ಪವಿತ್ರ ನಗರ ಕರ್ಬಲಾ ಮತ್ತು ಬಾಗ್ದಾದ್‌ನಲ್ಲಿ ನಡೆದ ಸರಣಿ ಬಾಂಬ್ ಸ್ಫೋಟದಲ್ಲಿ ಕನಿಷ್ಟ 185 ಜನ ಸಾವನ್ನಪ್ಪಿದ್ದಾರೆ. ಅಸಂಖ್ಯಾತ ಜನ ಗಾಯಗೊಂಡಿದ್ದಾರೆ. ಕ್ರಿ.ಶ. 680 ರಲ್ಲಿ ಕರ್ಬಲಾದಲ್ಲಿ ನಡೆದ ಯುದ್ಧದಲ್ಲಿ ಮಡಿದ ಪ್ರವಾದಿ ಮಹಮ್ಮದ್ ಪೈಗಂಬರ್‌ರ ಮೊಮ್ಮಗ ಅಬ್ಬಾಸ್ ಹುಸೇನ ಅವರ ಶವವನ್ನು ಇದೇ ನಗರದಲ್ಲಿ ಹೂಳಲಾಗಿತ್ತು. ಇದರ ನೆನಪಿಗಾಗಿ ಶಿಯಾ ಮುಸ್ಲಿಮರು ಮೊಹರಂ ತಿಂಗಳ ಹತ್ತನೇ ದಿನ ಅಶೂರ ಎಂಬ ಉತ್ಸವ ಆಚರಿಸುತ್ತಾರೆ. ಶೇಕಡಾ 70 ರಷ್ಟು ಇರಾಕಿಗಳು ಶಿಯಾ ಪಂಗಡಕ್ಕೆ ಸೇರಿದವರಾಗಿದ್ದರೂ ಸುನ್ನಿ ಗುಂಪಿಗೆ ಸೇರಿದ ಸದ್ದಾಂ ಹುಸೇನರ ಆಳ್ವಿಕೆಯಲ್ಲಿ ಶಿಯಾ ಮುಸ್ಲಿಮರಿಗೆ ಮೊಹರಂ ಆಚರಿಸಲು ಅವಕಾಶ ಇರಲಿಲ್ಲ. ಕಳೆದ 30 ವರ್ಷಗಳ ನಂತರ ಮೊತ್ತಮೊದಲ ಬಾರಿಗೆ ದೊರೆತ ಅವಕಾಶದಿಂದು ಸುಮಾರು 10 ಲಕ್ಷ ಶಿಯಾ ಮುಸಲ್ಮಾನರು ಕರ್ಬಲಾದಲ್ಲಿ ಸೇರಿದ್ದರು. ಕನಿಷ್ಟ 9 ಆತ್ಮಹತ್ಯಾ ದಾಳಿಕೋರರು ಕರ್ಬಲಾ ಕಾಯ'ರ್ಾಚ'ರ'ಣ'ಯ'ಲ್ಲಿ ಭಾಗವಹಿಸಿದ್ದರೆ ಬಾಗ್ದಾದ್‌ನ ಖದಿಮಿಯಾ ಶಿಯಾ ಮಸೀದಿ ಆವರಣದಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ಕನಿಷ್ಟ 3 ಆತ್ಮಹತ್ಯಾ ದಾಳಿಕೋರರು ಭಾಗವಹಿಸಿದ್ದರು ಎಂದು ವರದಿಯಾಗಿದೆ. ಸ್ಫೋಟದ ನಂತರ ಮಾನವ ರಕ್ತ ಹರಿಯುತ್ತಿದ್ದ ಬೀದಿಗಳಲ್ಲಿ ಮಾನವ ದೇಹಗಳ ಭಾಗಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ದೃಶ್ಯ ಭಯಾನಕವಾಗಿತ್ತು. ಇರಾಕನ್ನು ಅಮೇರಿಕಾ ವಶಪಡಿಸಿಕೊಂಡ ನಂತರ ಅತಿಹೆಚ್ಚಿನ ರಕ್ತಪಾತ ನಡೆದದ್ದು ಈ ಘಟನೆಯಲ್ಲಿ.

ಈ ಅಮಾನುಷ ಹತ್ಯಾಕಾಂಡದಲ್ಲಿ ಅಮೆರಿಕನ್ನರ ಕೈವಾಡ ಇದೆ ಎಂದು ಇರಾಕಿ ಜನಗಳು ನೇರವಾಗಿ ಆರೋಪಿಸುತ್ತಿದ್ದಾರೆ. ಘಟನೆ ನಡೆದ ಸ್ಥಳಕ್ಕೆ ಅಮೆರಿಕನ್ ಸೈನಿಕರ ವಾಹನಗಳು ಆಗಮಿಸಿದಾಗ ನೆರೆದಿದ್ದ ಜನಗಳು ವಾಹನಗಳ ಮೇಲೆ ಕಲ್ಲು ತೂರಿದರಲ್ಲದೆ ವಾಹನಗಳೊಂದಿಗೆ ಅಮೆರಿಕನ್ ಸೈನಿಕರನ್ನು ಬಲವಂತದಿಂದ ವಾಪಸ್ ಕಳುಹಿಸಿದರು. ಶಿಯಾ ಧಾರ್ಮಿಕ ನಾಯಕರು ತಕ್ಷಣವೇ ಜನರ ನಡುವೆ ಬಂದು ದೇಶದಲ್ಲಿ ಶಿಯಾ ಮತ್ತು ಸುನ್ನಿ ಮುಸಲ್ಮಾನರ ನಡುವೆ ಆಂತರಿಕ ಯುದ್ಧವನ್ನು ಪ್ರಚೋದಿಸುವುದು ಅಮೆರಿಕದ ಉದ್ದೇಶವಾಗಿದ್ದು ಶಿಯಾ ಮುಸ್ಲಿಮರು ಸಂಯಮ ಕಳೆದುಕೊಂಡು ಪ್ರಚೋದನೆಗೆ ಒಳಗಾಗಬಾರದೆಂದು ಜನರಿಗೆ ತಿಳುವಳಿಕೆ ನೀಡಿದರು. ಪ್ರಚೋದನೆ ಎಷ್ಟೇ ತೀವ್ರವಾಗಿದ್ದರೂ ಶಿಯಾ ಮತ್ತು ಸುನ್ನಿ ಪಂಗಡಗಳ ನಡುವಿನ ಐಕ್ಯತೆಯನ್ನು ಉಳಿಸಿಕೊಳ್ಳುವುದು ಅಗತ್ಯವಿದೆ ಎಂದು, ಇಲ್ಲದೆ ಹೋದರೆ ಅಮೆರಿಕ ಇರಾಕನ್ನು ತುಂಡು ತುಂಡು ಮಾಡಿ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುತ್ತದೆ ಎಂದು ಅವರು ತಮ್ಮ ಅನುಯಾಯಿಗಳಿಗೆ ಮನವರಿಕೆ ಮಾಡುವುದರಲ್ಲಿ ನಿರತರಾಗಿದ್ದಾರೆ. ಈ ದಾಳಿಯಲ್ಲಿ ಅಲ್‌ಖೈದಾ ಕೈವಾಡವಿದೆ ಎಂದು ಅಮೆರಿಕ ಆರೋಪಿಸಿದ್ದರೂ ಅಲ್ ಖೈದಾ ಅದನ್ನು ನಿರಾಕರಿಸಿದೆ ಮಾತ್ರವಲ್ಲ ಅಮೆರಿಕದ ಮೇಲೆ ಪ್ರತಿ ಆರೋಪ ಮಾಡಿದೆ. ಶಿಯಾ ಮತ್ತು ಸುನ್ನಿ ಪಂಗಡಗಳ ನಡುವೆ ದಶಕಗಳ ವೈಮನಸ್ಸು ಇದ್ದಾಗ್ಯೂ ಅಮೆರಿಕದ ದುರಾಕ್ರಮಣವನ್ನು ವಿರೋಧಿಸುವ ವಿಷಯದಲ್ಲಿ ಅವರ ನಡುವೆ ವ್ಯಕ್ತವಾಗುತ್ತಿರುವ ಸಹಮತ ಮಾತ್ರ ಗಮನಾರ್ಹವಾಗಿದೆ.



ಹೆಚ್ಚುತ್ತಿರುವ ಪ್ರತಿರೋಧ

ಅಮೆರಿಕವು ಇರಾಕನ್ನು ವಶಪಡಿಸಿಕೊಂಡು ಈಗ ಒಂದು ವರ್ಷವಾಗಿದೆ. ಈ ಅವಧಿಯಲ್ಲಿ ಇರಾಕಿ ಜನಗಳ ಬದುಕು ಅಸಹನೀಯವಾಗಿದೆ. ಪ್ರತಿದಿನ ಅಮಾಯಕರನ್ನು ಬಂಧಿಸಿ ಹಿಂಸಿಸಲಾಗುತ್ತಿದೆ. ಕುಡಿಯುವ ನೀರು, ವಿದ್ಯುತ್ ಪೂರೈಕೆ, ಆರೋಗ್ಯ, ಶಿಕ್ಷಣದಂತಹ ಸಾರ್ವಜನಿಕ ಸೇವೆಗಳ ವ್ಯವಸ್ಥೆ ಸಂಪೂರ್ಣವಾಗಿ ಕುಸಿದುಬಿದ್ದಿದೆ. ಇಡೀ ಅರ್ಥವ್ಯವಸ್ಥೆ ಸ್ಥಗಿತವಾಗಿದೆ. ಅಮೆರಿಕದ ಕೈಗೊಂಬೆಯಂತಿರುವ ಸರ್ಕಾರವು ಅರ್ಥವ್ಯವಸ್ಥೆಯ ಅನೇಕ ವಿಭಾಗಗಳ ಖಾಸಗೀಕರಣವನ್ನು ಘೋಷಿಸಿದೆ.



ಆಯೋತ್ತಾಲ್ಲಾ ಅಲ್ ಸಿಸ್ತಾನಿ

ಅಮೆರಿಕದ ತೈಲ ಕಂಪನಿಗಳು ಇಲ್ಲಿಯ ತೈಲ ಸಂಪನ್ಮೂಲಗಳನ್ನು ಲೂಟಿ ಮಾಡುವುದರಲ್ಲಿ ನಿರತವಾಗಿವೆ. ಇರಾಕಿನ ಪುನರ್ನಿರ್ಮಾಣದ ಕಾರ್ಯವನ್ನು ವಹಿಸಿ ಕೊಂಡಿರುವ ಅಮೆರಿಕದ ಬಹುರಾಷ್ಟ್ರೀಯ ಕಂಪನಿಗಳು ಕೊಳ್ಳೆ ಹೊಡೆಯುವುದರಲ್ಲಿ ಮಗ್ನವಾಗಿವೆ.

ಆದರೆ ಅದೇ ಸಮಯದಲ್ಲಿ ಅಮೆರಿಕನ್ ದುರಾಕ್ರಮಣದ ವಿರುದ್ಧ ಇರಾಕಿ ಜನತೆಯ ಪ್ರತಿರೋಧವೂ ಬೆಳೆಯುತ್ತಿದೆ, ಬಲಿಯುತ್ತಿದೆ. ಯುದ್ಧ ಮುಗಿದ ನಂತರದ ಅವಧಿಯಲ್ಲಿ 500 ಕ್ಕೂ ಹೆಚ್ಚು ಅಮೆರಿಕನ್ ಸೈನಿಕರು ದಾಳಿಗೆ ತುತ್ತಾಗಿ ಹತರಾಗಿದ್ದಾರೆ. ಡಿಸೆಂಬರ್ ತಿಂಗಳಲ್ಲಿ ಸದ್ದಾಂ ಹುಸೇನ್ ಸೆರೆಸಿಕ್ಕ ನಂತರವೂ ಜನತೆಯ ಪ್ರತಿರೋಧ ಕಡಿಮೆಯಾಗಿಲ್ಲ. ದಾಳಿಗಳು ವ್ಯಾಪಕಗೊಳ್ಳುತ್ತಿದ್ದು ಇರಾಕಿನಲ್ಲಿರುವ ಅಮೆರಿಕದ ಮಿತ್ರ ರಾಷ್ಟ್ರಗಳಾದ ಇಟಲಿ, ಸ್ಪೈನ್ ಮತ್ತು ಪೋಲೆಂಡ್‌ನ ಸೈನಿಕರೂ ದಾಳಿಗೆ ಬಲಿಯಾಗುತ್ತಿದ್ದಾರೆ. ಮಿತ್ರ ಪಡೆಗಳಲ್ಲಿ ಅತೃಪ್ತಿ ಬೆಳೆಯತೊಡಗಿದೆ.

ಜನತೆಯ ತೀವ್ರ ಪ್ರತಿರೋಧವನ್ನು ಎದುರಿಸುತ್ತಿರುವ ಅಮೆರಿಕನ್ ಆಡಳಿತವು ಬರುವ ಜುಲೈ 1 ರೊಳಗಾಗಿ ಒಂದು ಹೊಸ ತಾತ್ಕಾಲಿಕ ಸರ್ಕಾರವನ್ನು ಚುನಾಯಿಸಲಾಗುವುದು ಎಂದು ಪ್ರಕಟಿಸಿತು. ಆದರೆ ಶಿಯಾ ಧಾರ್ಮಿಕ ನಾಯಕ ಆಯೋತ್ತಾಲ್ಲಾ ಅಲ್ ಸಿಸ್ತಾನಿ ತಾತ್ಕಾಲಿಕ ಸರ್ಕಾರ ರಚಿಸುವ ಅಮೆರಿಕದ ಪ್ರಸ್ತಾವವನ್ನು ಖಂಡತುಂಡವಾಗಿ ವಿರೋಧಿಸಿದ್ದಾರೆ ಮಾತ್ರವಲ್ಲ ನೇರ ಮತದಾನದ ಮೂಲಕವಷ್ಟೇ ಹೊಸ ಸರ್ಕಾರ ರಚನೆಯಾಗಬೇಕು ಎಂದು ಆಗ್ರಹಿಸಿದ್ದಾರೆ. ಇವರ ಕರೆಯ ಮೇರೆಗೆ ಇರಾಕ್‌ನಲ್ಲಿ ಭಾರಿ ಪ್ರದರ್ಶನಗಳು ನಡೆಯುತ್ತಿದ್ದು ಕಳೆದ ಜನವರಿ ತಿಂಗಳಲ್ಲಿ ಹತ್ತಾರು ಸಾವಿರ ಜನ ಬಾಗ್ದಾದ ನಗರದ ಬೀದಿಗಳಲ್ಲಿ ಮೆರವಣಿಗೆ ನಡೆಸಿದ್ದಾರೆ. ಅದರಂತೆಯೇ ಬಾಸ್ರಾ ನಗರದಲ್ಲಿ ಏರ್ಪಡಿಸಲಾಗಿದ್ದ ಇನ್ನೊಂದು ಪ್ರದರ್ಶನದಲ್ಲಿ ಭಾಗವಹಿಸಿದ್ದ 30 ಸಾವಿರ ಜನ ಪ್ರತ್ಯಕ್ಷ ಹಾಗೂ ತುರ್ತು ಚುನಾವಣೆಯನ್ನು ಒತ್ತಾಯಿಸಿದ್ದಾರೆ. ನೇರ ಮತದಾನಕ್ಕೆ ಅವಕಾಶ ಕೊಟ್ಟರೆ ಅಮೆರಿಕನ್ ಆಕ್ರಮಣ ವಿರೋಧಿ ಸರ್ಕಾರ ಚುನಾಯಿತವಾಗುವ ಭೀತಿಯಿಂದ ನೇರ ಚುನಾವಣೆ ನಡೆಸಲು ಅಮೆರಿಕ ಒಪ್ಪುತ್ತಿಲ್ಲ. ಇದರಿಂದ ಅಮೇರಿಕದ ದುರುದ್ದೇಶ ಮತ್ತೆ ಬಯಲಾಗಿದೆ.

ಅತ್ತ ಇರಾಕಿನಲ್ಲಿ ಸದ್ದಾಂ ಹುಸೇನ್ ಬಚ್ಚಿಟ್ಟಿದ್ದೆನ್ನಲಾದ ಸಮೂಹ ನಾಶದ ಶಸ್ತ್ರಾಸ್ತ್ರಗಳನ್ನು ಪತ್ತೆಹಚ್ಚಲು ನೇಮಿಸಲಾಗಿದ್ದ 400 ಸದಸ್ಯರುಳ್ಳ ತಂಡವನ್ನು ಬುಶ್ ಆಡಳಿತ ಹಿಂತೆಗೆದುಕೊಂಡಿದೆ. ಇದರಿಂದ ಇರಾಕ್‌ನಲ್ಲಿ ಯಾವುದೇ ಸಮೂಹ ನಾಶದ ಶಸ್ತ್ರಾಸ್ತ್ರಗಳನ್ನು ಪತ್ತೆ ಹಚ್ಚುವಲ್ಲಿ ಅಮೆರಿಕ ವಿಫಲವಾಗಿದೆ ಎಂಬು ದನ್ನು ಒಪ್ಪಿಕೊಂಡಂತಾ ಗಿದೆ. ಇತ್ತ ಸದ್ದಾಂ ಹುಸೇನ್ ಪರವಾಗಿ ನ್ಯಾಯಾಲಯದಲ್ಲಿ ಹೋರಾಡಲು 600 ಕ್ಕೂ ಹೆಚ್ಚು ನ್ಯಾಯವಾದಿಗಳು ಮುಂದೆ ಬಂದಿದ್ದಾರೆ.

ಮಾರ್ಚ್ 20 ಅಮೆರಿಕ ಇರಾಕ್ ಮೇಲೆ ದಾಳಿ ಆರಂಭಿಸಿದ ದಿನ. ಅಂದು ಅಮೆರಿಕದ ನ್ಯೂಯಾರ್ಕ್, ಲಾಸ್ ಎಜೆಂಲ್ಸ್, ಸಾನ್ ಫ್ರಾನ್ಸಿಸ್ಕೋ ಮತ್ತಿತರ ನಗರಗಳಲ್ಲಿ ಬೃಹತ್ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ. 'ಇರಾಕ್ ಆಕ್ರಮಣ ಕೊನೆಗೊಳ್ಳಲಿ, ನಮ್ಮಯೋಧರು ಮನೆಗೆ ಮರಳಲಿ' ಎಂಬ ಘೋಷಣೆಗಳು ಅಂದು ಅಮೆರಿಕದ ನಗರಗಳ ಬೀದಿಗಳಲ್ಲಿ ಪ್ರತಿಧ್ವನಿಗೊಳ್ಳಲಿವೆ. ಯುರೋಪಿಯನ್ ಸಾಮಾಜಿಕ ವೇದಿಕೆಯು ಮಾರ್ಚ 20 ರಂದು ಯುರೋಪಿನಾದ್ಯಂತ ಇರಾಕಿನ ಮೇಲೆ ಮುಂದುವರೆದಿರುವ ಅಮೆರಿಕನ್ ಆಕ್ರಮಣದ ವಿರುದ್ಧ ಪ್ರತಿಭಟನೆಗಳನ್ನು ಏರ್ಪಡಿಸಲು ನಿರ್ಧರಿಸಿದೆ. ವಿಶ್ವ ಸಾಮಾಜಿಕ ವೇದಿಕೆ ಈ ಕರೆಯನ್ನು ಅಂತರ್ರಾಷ್ಟ್ರೀಯ ಗೊಳಿಸಲು ನಿರ್ಧರಿಸಿದೆ. ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ನಾವು ಭಾರತೀಯರು ಪಾಲ್ಗೊಳ್ಳುವುದು, ಸಾಮ್ರಾಜ್ಯವಾದಿ ದಬ್ಬಾಳಿಕೆಯ ವಿರುದ್ಧ ಹೋರಾಡುತ್ತಿರುವ ಇರಾಕಿ ಜನತೆಗೆ ನಮ್ಮ ಸೌಹಾರ್ದ ಬೆಂಬಲ ನೀಡುವುದು ನಮ್ಮ ಕರ್ತವ್ಯವಾಗಿದೆ. ಅಮೆರಿಕ ಇರಾಕ್‌ನಿಂದ ತೊಲಗಬೇಕು, ಇರಾಕ್ ದೇಶದ ಸಾರ್ವಭೌಮತೆ ಪುನರ್‌ಸ್ಥಾಪನೆಯಾಗಬೇಕು ಎಂಬುದುಲ ಎಲ್ಲ ಸಾಮ್ರಾಜ್ಯಶಾಹಿ ವಿರೋಧಿ ಪ್ರಜಾಪ್ರಭುತ್ವವಾದಿ ಶಕ್ತಿಗಳ ಆಗ್ರಹವಾಗಬೇಕು.

- ನಿತ್ಯಾನಂದಸ್ವಾಮಿ

ಮಾರ್ಚ್ 20: ಯುದ್ಧ ವಿರೋಧಿ ದಿನ

ಮಾರ್ಚ್ 20 ರಂದು ಜಗತ್ತಿನಾದ್ಯಂತ ಅಮೆರಿಕಕೂಟದ ಆಕ್ರಮಣವನ್ನು ಪ್ರತಿಭಟಿಸಿ, ಪ್ರತಿರೋಧ ಒಡ್ಡುತ್ತಿರುವ ಇರಾಕಿ ಜನತೆಗೆ ಸೌಹಾರ್ದತೆ ಸಾರುವ ದಿನವಾಗಿ ಆಚರಿಸಲು ವಿಶ್ವ ಸಾಮಾಜಿಕ ವೇದಿಕೆ (WSF) ಕರೆ ನೀಡಿದೆ. ದೇಶದಲ್ಲಿ ಸಿಪಿಐ(ಎಂ) ಮತ್ತಿತರರು ಇದರ ಯಶಸ್ಸಿಗೆ ಮುಂದಾಗಲು ನಿರ್ಧರಿಸಿವೆ.


Statement of the ownership etc. the weekly newspaper 'Aikyaranga'
Form IV
(See Rule 8)

1. Place of Publication	:	12,18th Cross, S.R.Nagar, Bangalore
2. Periodicity of Publication	:	Weekly
3. Printer's Name	:	G.N.Nagaraj
(Whether Citizen of India? if Forigner, State the Country of Origin)	:	Indian
Address	:	12, 18th Cross, S.R.Nagar, Bangalore - 560 027
4. Publisher's Name	:	G.N.Nagaraj
(Whether Citizen of India? if Forigner, State the Country of Origin)	:	Indian
Address	:	12, 18th Cross, S.R.Nagar, Bangalore - 560 027
5. Editor's Name	:	S.Y.Gurushantha
(Whether Citizen of India? if Forigner, State the Country of Origin)	:	Indian
Address	:	12, 18th Cross, S.R.Nagar, Bangalore - 560 027
6. Name and address of individuals who own the News paper and partners or Shareholders holding more than one percent of the total capital	:	Karnataka State Communist Party of India (Marxist), Karnataka State Committee, S.R.Nagar, 12,18th Cr., Bangalore - 560 027

I G.N. Nagaraj hereby declare that the particulers given above are true to the best of my knowledge and belief

Sd/-
G.N.Nagaraj

Date : 14 March 2004
Bangalore



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹವಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH